*Pandit Teaches the Bible Series*

# The Biblical Drama

**Kannada Edition 2019**

**Author: T. Pandit**

**Translator: Prakash Naik**

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕಗಳ ಸರಣಿ

# ಸತ್ಯವೇದ ನಾಟಕ

ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

## ಮುನ್ನುಡಿ

ಈ ಸತ್ಯವೇದ ಅಧ್ಯಯನವು ಸತ್ಯವೇದ ಬೋಧಕರಾದ ಟಿ.ಪಂಡಿತ್ ಮತ್ತು ಅವರ ವಿಧ್ಯಾರ್ಥಿಯ ಮಧ್ಯದಲ್ಲಿ ನಡೆದ ಸಂಭಾಷಣೆಯ ರೂಪದಲ್ಲಿ ಪ್ರದರ್ಶಿಸಲ್ಪಟ್ಟಿದೆ. ವಾಕ್ಯಗಳನ್ನು ಗಟ್ಟಿಯಾದ ಧ್ವನಿಯಲ್ಲಿ ಓದುವುದು ಒಳ್ಳೆಯದು. ಈ ಸತ್ಯವೇದ ಅಧ್ಯಯನದಲ್ಲಿ ಪಾಲ್ಗೊಳ್ಳುವವರು, **ಪಂಡಿತ್** ಅವರ ಸಂಭಾಷಣೆಯನ್ನು ಒಬ್ಬರು ಮತ್ತು **ವಿದ್ಯಾರ್ಥಿಯ** ಸಂಭಾಷಣೆಯನ್ನು ಇನ್ನೊಬ್ಬರು ಒಬ್ಬರನಂತರ ಒಬ್ಬರು ಓದುವುದು ಒಳ್ಳೆಯದು. ಇದರ ನಂತರ ಇನ್ನೂ ಇಬ್ಬರು ಹೀಗೆ ಓದಬಹುದು.

ಪ್ರತಿಯೊಂದು ಘಟಕದ ನಂತರ ಪ್ರಶ್ನೆಗಳು ಇರುತ್ತವೆ. ಇವುಗಳನ್ನು ಗುಂಪುಚರ್ಚೆಗಾಗಿ ಉಪಯೋಗಿಸತಕ್ಕದ್ದು. ಪ್ರತಿಯೊಂದು ಗುಂಪಿನಲ್ಲಿ 4 ರಿಂದ 7 ಸದಸ್ಯರು ಇರತಕ್ಕದ್ದು. ದೊಡ್ಡ ಸಂಖ್ಯೆಯ ಗುಂಪುಗಳನ್ನು ಮಾಡಬೇಡಿರಿ. ಚರ್ಚೆಯಲ್ಲಿ ಗುಂಪಿನ ಪ್ರತಿಯೊಬ್ಬ ಸದಸ್ಯರು ಪಾಲ್ಗೊಳ್ಳುವಂತೆ ಪ್ರಯತ್ನಿಸಿರಿ.

**ಸತ್ಯವೇದ ಅಧ್ಯಯನದ ಪ್ರಶ್ನೆಗಳು** 'ವರ್ಲ್ಡ್ ಇಂಗ್ಲಿಷ್ ಬೈಬಲ್' (WEB) ಆಧಾರಿತವಾಗಿವೆ.

**ಟಿ. ಪಂಡತ್** ರವರು ಒಬ್ಬ ಶಿಕ್ಷಣತಜ್ಞರಾಗಿಯೂ, ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಎಸ್ ಸರ್ ಬಾಸ್ಟ್ ಯೂರೋಪ್ ಮೂಲದ ವರ್ಣಚಿತ್ರ ಕಲಾವಿದರಾಗಿದ್ದಾರೆ. ಈ ಪಠ್ಯದಲ್ಲಿರುವ ಅನೇಕ ನಕ್ಷೆಗಳನ್ನು ಅವರು ತಯಾರಿಸಿದ್ದಾರೆ.

**ಆರ್. ಪ್ರಕಾಶ್ ನಾಯ್ಕ್** ರವರು ಒಬ್ಬ ಎಂ.ಎ. ಮತ್ತು ಎಂ.ಡಿವ್. ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ. ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಲ್ಪಟ್ಟಿದೆ. ಆದ್ದದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಫೆಬ್ರುವರಿ 2019

# ಪೀಠಿಕೆ

**ವಿದ್ಯಾರ್ಥಿ:** ಸಂಜೆಯ ವಂದನೆಗಳು ಗುರುಗಳೇ, ಈ ದಿನ ನನಗೆ ಸತ್ಯವೇದದ ಕುರಿತು ತಾವು ವಿವರಣೆಯನ್ನು ತಿಳಿಸಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇದು ಬಹಳ ದೊಡ್ಡಪುಸ್ತಕವಾಗಿದೆ ಮತ್ತು ಆ ಪುಸ್ತಕದೊಳಗೆ ಅನೇಕ ಸಣ್ಣಪುಸ್ತಕಗಳು ಇದೆ, ಈ ಸಣ್ಣಪುಸ್ತಕಗಳು ಒಂದಕ್ಕೊಂದು ಬಹಳ ವ್ಯತ್ಯಾಸಕರವಾಗಿವೆ. ಇದು ನನಗೆ ಸ್ವಲ್ಪಗೊಂದಲವನ್ನುಂಟುಮಾಡುತ್ತದೆ.

**ಪಂಡಿತ:** ಒಂದುರೀತಿಯಲ್ಲಿ ಸತ್ಯವೇದವು ಒಂದೇ ಪುಸ್ತಕವಾಗಿದೆ, ಅವೆಲ್ಲವೂ ಒಂದಕ್ಕೊಂದು ಸಂಬಂಧಪಟ್ಟಿದ್ದಾಗಿದೆ ಎಂದು ತೋರಿಸುವುದಕ್ಕಾಗಿ, ಎಲ್ಲಾ ಚಿಕ್ಕ ಚಿಕ್ಕ ಪುಸ್ತಕಗಳು ಕೂಡಿ ಒಂದೇ ಪುಸ್ತಕವಾಗಿದೆ. ನೀನು ಸತ್ಯವೇದವನ್ನು ತೆರೆಯುವಾಗ ಎರಡು ಪ್ರಮುಖವಾದ ಭಾಗಗಳನ್ನು ಕಾಣುವಿ, ಅವು ಯಾವುವು?

**ವಿದ್ಯಾರ್ಥಿ:** ಇದು ಸುಲಭವಾದ ಪ್ರಶ್ನೆ, ಸರ್. ಸತ್ಯವೇದದ ಮೊದಲನೇಯ ಭಾಗವು ಹಳೇ ಒಡಂಬಡಿಕೆಯಾಗಿದೆ. ಎರಡನೇ ಭಾಗವು ಹೊಸ ಒಡಂಬಡಿಕೆಯಾಗಿದೆ. ಹಳೇ ಒಡಂಬಡಿಕೆಯು ಹೊಸ ಒಡಂಬಂಡಿಕೆಗಿಂತ ದೊಡ್ಡದಾಗಿದೆ. ಸತ್ಯವೇದದಲ್ಲಿ ಎಷ್ಟು ಪುಸ್ತಕಗಳು ಇದೆ ಎಂಬುದು ಸಹ ನನಗೆ ತಿಳಿದಿದೆ. ಹಳೇ ಒಡಂಬಡಿಕೆಯಲ್ಲಿ 39 ಪುಸ್ತಕಗಳಿವೆ ಮತ್ತು ಹೊಸ ಒಡಂಬಡಿಕೆಯಲ್ಲಿ 27 ಪುಸ್ತಕಗಳಿವೆ. ಹೀಗೆ ಸತ್ಯವೇದದಲ್ಲಿ ಎಲ್ಲಾ ಒಟ್ಟು 66 ಪುಸ್ತಕಗಳು ಇವೆ. ಇವನ್ನೆಲ್ಲಾ ನಾನು ಕಳೆದ ವರ್ಷದ ಯೌವನಸ್ಥರ ಸತ್ಯವೇದ ಕೂಟದಲ್ಲಿ ಕಲಿತಿರುವೆ.

**ಪಂಡಿತ:** ಬಹಳ ಒಳ್ಳೆಯದು ! ಈ 66 ಪುಸ್ತಕಗಳು ಸುಮಾರು 1500 ವರ್ಷಗಳ ಅವಧಿಯಲ್ಲಿ 40 ಕ್ಕಿಂತ ಹೆಚ್ಚಿನ ವ್ಯಕ್ತಿಗಳಿಂದ ಬರೆಯಲ್ಪಟ್ಟಿರುತ್ತವೆ. ಈ ಲೇಖಕರು ಬೇರೆ ಬೇರೆ ಸಮಯ ಮತ್ತು ಸ್ಥಳದವರು ಮಾತ್ರವಾಗಿರದೆ; ಅವರು ಬೇರೆ ಬೇರೆ ಸಮಾಜಿಕ ಹಿನ್ನಲೆಯನ್ನು ಹೊಂದಿದವರಾಗಿದ್ದರು. ಕೆಲವರು ರಾಜರು ಅಥವಾ ರಾಜಕೀಯ ಮತ್ತು ಧಾರ್ಮಿಕ ನಾಯಕರುಗಳಾಗಿದ್ದರು, ಕೆಲವರು ತತ್ವಜ್ಞಾನಿಗಳು, ಸಾಹಿತಿಗಳು ಅಥವಾ ಬೆಸ್ತರಾಗಿದ್ದರು, ಅವರಲ್ಲಿ ಒಬ್ಬನು ರೈತನು, ಮತ್ತೊಬ್ಬನು ವೈದ್ಯನು, ಹಾಗೂ ಇನ್ನೊಬ್ಬನು ಸುಂಕದವರಾಗಿದ್ದರು.

**ವಿದ್ಯಾರ್ಥಿ:** ಹೌದು, ನನಗೆ ತಿಳಿದಿದೆ. ಬಹಳ ಕೀರ್ತನೆಗಳನ್ನು ಬರೆದ ದಾವೀದನು ಅರಸನಾಗಿದ್ದನು. ಲೂಕನ ಸುವಾರ್ತೆಯನ್ನು ಮತ್ತು ಅಪೊಸ್ತಲರ ಕೃತ್ಯಗಳನ್ನು ಬರೆದ ಲೂಕನು ವೈದ್ಯನಾಗಿದ್ದನು. ಮತ್ತು ಸುವಾರ್ತೆಯನ್ನು ಬರೆದ ಯೇಸುವಿನ ಶಿಷ್ಯನಾದ ಮತ್ತಾಯನು ಸುಂಕದವನಾಗಿದ್ದನು. ಸುವಾರ್ತೆಯನ್ನು ಮತ್ತು 3 ಪತ್ರಿಕೆಗಳನ್ನು ಹಾಗೂ ಪ್ರಕಟಣೆ ಗ್ರಂಥಗಳನ್ನು ಬರೆದ ಯೇಸುವಿನ ಶಿಷ್ಯನಾದ ಯೋಹಾನನು ಬೆಸ್ತನಾಗಿದ್ದನು. ಈತನು ತನ್ನ ಬಲೆಗಳನ್ನು ಬಿಟ್ಟು ಯೇಸುವನ್ನು ಹಿಂಬಾಲಿಸಿದ್ದನು.

**ಪಂಡಿತ:** ಸತ್ಯವೇದ ಪುಸ್ತಕಗಳು ಬೇರೆ ಬೇರೆ ಸ್ಥಳಗಳಲ್ಲಿ ಮತ್ತು ವ್ಯತ್ಯಾಸವಾದ ಸಂಸ್ಕೃತಿಗಳಲ್ಲಿ, ಹಾಗೂ ಜಗತ್ತಿನ ಬೇರೆ ಬೇರೆ ಸಾಮ್ರಾಜ್ಯಗಳ ಆಳ್ವಿಕೆಯ ಕಾಲಗಳಲ್ಲಿ ಬರೆಯಲ್ಪಟ್ಟಿವೆ, ಮತ್ತು ಅವುಗಳು ಮರುಭೂಮಿಯಲ್ಲಿ, ಸೆರೆಮನೆಯಲ್ಲಿ, ಪ್ರಯಾಣದಲ್ಲಿ, ಯುದ್ಧಗಳ ಸಮಯಗಳಲ್ಲಿ, ಕಠಿಣ ಪರಿಸ್ಥಿತಿಗಳಲ್ಲಿ ಮತ್ತು ಹಿಂಸೆಗಳ ಸಮಯಗಳಲ್ಲಿ ಮತ್ತು ಶಾಂತಿಯ ಸಮಯಗಳಲ್ಲಿ, ಯಶಸ್ವಿ ಹಾಗೂ ಸಮೃದ್ಧಿಯ ಸಮಯ ಹೀಗೆ ಅನೇಕ ಸನ್ನಿವೇಶಗಳಲ್ಲಿ ಬರೆಯಲ್ಪಟ್ಟಿವೆ. ಕೆಲವು

ಪತ್ರಗಳು ಕುಗ್ಗಿಹೋದಾಗಲೂ ಮತ್ತು ದುಃಖದಲ್ಲಿ ಇರುವ ಸಮಯಗಳಲ್ಲಿ ಬರೆಯಲ್ಪಟ್ಟಿವೆ. ಇನ್ನೂ ಕೆಲವು ಪತ್ರಗಳು ಸಂತೋಷ ಮತ್ತು ಉಲ್ಲಾಸದ ಸಂದರ್ಭಗಳಲ್ಲಿ ಬರೆಯಲ್ಪಟ್ಟಿವೆ.

**ವಿದ್ಯಾರ್ಥಿ:** ನಾನು ಕೀರ್ತನೆಗಳನ್ನು ಓದುವಾಗ ಎಲ್ಲಾ ರೀತಿಯ ಸಂದರ್ಭ ಮತ್ತು ಭಾವನೆಗಳನ್ನೂ ತಿಳಿದುಕೊಂಡಿದ್ದೇನೆ. ಆದರೆ ಕೀರ್ತನೆಗಳು ಸತ್ಯವೇದದ ಬೇರೆ ಪುಸ್ತಕಗಳಿಗಿಂತ ಬಹಳ ಭಿನ್ನವಾಗಿವೆ.

**ಪಂಡಿತ:** ನೀನು ಸರಿಯಾಗಿ ಹೇಳಿದೆ. ಸತ್ಯವೇದವು ಅನೇಕ ವಿಧವಾದ ಪತ್ರಗಳನ್ನು ಒಳಗೊಂಡಿದೆ. ಕೀರ್ತನೆಗಳು ಪದ್ಯರೂಪದಲ್ಲಿವೆ. ಆದರೆ ಚರಿತ್ರೆಯಿಂದ ತುಂಬಿದ ಅನೇಕ ಪುಸ್ತಕಗಳಿವೆ. ಇನ್ನೂ ಕೆಲವು ಪುಸ್ತಕಗಳಲ್ಲಿ ಪ್ರವಾದನೆಗಳನ್ನು, ಧರ್ಮಶಾಸ್ತ್ರಗಳನ್ನು, ಜ್ಞಾನೋಕ್ತಿಗಳನ್ನು, ನಾಟಕಗಳನ್ನು, ಪತ್ರಿಕೆಗಳನ್ನು ಕಾಣುತ್ತೇವೆ. ಸತ್ಯವೇದದ ಕೊನೆಯ ಪುಸ್ತಕವು ಪ್ರಕಟಣೆಯಾಗಿದೆ. ಈ ವ್ಯತ್ಯಾಸವಾದ ಪತ್ರಗಳು ನಮ್ಮ ಜೀವನಕ್ಕೆ ಮುಖ್ಯವಾದ ಅನೇಕ ವಿಷಯಗಳನ್ನು ತಿಳಿಸುತ್ತವೆ.

ಆದರೆ ಆಶ್ಚರ್ಯಕರ ಸಂಗತಿಯೆಂದರೆ ಇಂಥ ಬೇದಗಳ ಮತ್ತು ವ್ಯತ್ಯಾಸಗಳ ಮಧ್ಯದಲ್ಲೂ ಸತ್ಯವೇದದ ಮೊದಲನೆಯ ಪುಸ್ತಕದಿಂದ ಕೊನೆಯ ಪುಸ್ತಕದವರೆಗೂ ವಿಸ್ಮಯಕಾರಿಯಾದ ಐಕ್ಯತೆ ಹಾಗೂ ನಿರಂತರತೆಯನ್ನು ನಾವು ಕಾಣಬಹುದಾಗಿದೆ. ಈ ಎಲ್ಲಾ ಪುಸ್ತಕಗಳು ಮತ್ತು ಪತ್ರಗಳು ಒಂದೇ ವಿಷಯವನ್ನು ಒಳಗೊಂಡಿವೆ. ಆ ವಿಷಯವೇನಂದರೆ, ದೇವರ ಮಗನಾದ ಯೇಸು ಕ್ರಿಸ್ತನ ಮೂಲಕ ಮಾನವ ಕುಲಕ್ಕೆ ರಕ್ಷಣೆಯನ್ನು ನೀಡಲು ತನ್ನ ಕೃಪೆ ಮತ್ತು ಪ್ರೀತಿಯನ್ನು ಪ್ರಕಟಿಸಿದ ಜೀವಿಸಿದ ಹಾಗೂ ವೈಯಕ್ತಿಕವಾಗಿರುವ ದೇವರ ಕುರಿತಾದದ್ದಾಗಿದೆ. ಈ ಒಂದು ವಿಷಯದಿಂದಲೇ ಈ ಸತ್ಯವೇದವು ನಿಸ್ಸಂದೇಹವಾಗಿ ಲೋಕದಲ್ಲಿರುವ ಎಲ್ಲಾ ಪುಸ್ತಕಗಳಿಗಿಂತಲೂ ಅತೀ ಪ್ರಿಯವಾಗಿ ಓದುವಂತಹ ಪುಸ್ತಕವಾಗಿದೆ.

**ವಿದ್ಯಾರ್ಥಿ:** ಆದರೆ ಕೆಲವರು ಸತ್ಯವೇದವನ್ನು ಪಾಶ್ಚಾತ್ಯ ಪುಸ್ತಕವೆಂತಲೂ ಮತ್ತು ಅದು ಪಾಶ್ಚಾತ್ಯರಿಂದಲೇ ಅವರಿಗಾಗಿ ಬರೆಯಲ್ಪಟ್ಟಿದೆ ಎಂದು ಹಾಗೂ ಭಾರತೀಯರಾದ ನಮಗೆ ಅದು ಅನ್ವಯಿಸುವುದಿಲ್ಲ ಎಂದು ಹೇಳುತ್ತಾರೆ.

**ಪಂಡಿತ:** ಇದು ಖಂಡಿತ ಸುಳ್ಳು ! ಸತ್ಯವೇದ ಪಾಶ್ಚಾತ್ಯರ ಪುಸ್ತಕವಲ್ಲ. ಸತ್ಯವೇದ ಬರೆದವರಲ್ಲಿ ಬಹಳಷ್ಟು ಜನರು ಏಷ್ಯಾದವರಾಗಿದ್ದಾರೆ. ಸತ್ಯವೇದದಲ್ಲಿ ಬರೆದಿರುವ ಬಹಳಷ್ಟು ಸಂಗತಿಗಳು ಏಷ್ಯಾಖಂಡದ ನಾನಾ ಭಾಗಗಳಲ್ಲಿ ನಡೆದಿರುತ್ತವೆ. ಈ ದಿನಗಳಲ್ಲಿ ಆ ಪ್ರದೇಶಗಳನ್ನು ನಾವು ಮಧ್ಯಪೂರ್ವ ಎಂದು ಕರೆಯುತ್ತೇವೆ. ಹಳೇ ಒಡಂಬಡಿಕೆಯು ಏಷ್ಯಾಖಂಡದ ಭಾಷೆಗಳಾದ ಇಬ್ರಿಯ, ಅರಾಮಿಕ್ ಭಾಷೆಗಳಲ್ಲಿ ಬರೆಯಲ್ಪಟ್ಟಿದೆ. ಆದರೆ ಹೊಸ ಒಡಂಬಡಿಕೆಯು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಗ್ರೀಕ್ ಭಾಷೆಯು ಇಂಡೋ-ಯೂರೋಪಿಯನ್ ಭಾಷೆಯಾಗಿದ್ದು, ಇದು ಸಂಸ್ಕೃತ ಅಥವಾ ಹಿಂದಿ ಅಥವಾ ಬಂಗಾಳಿ ಭಾಷೆಯಂತಿದೆ.

ಸತ್ಯವೇದವು ಎಲ್ಲಾರಿಗಾಗಿಯೂ ಮತ್ತು ಎಲ್ಲಾ ಸಮಯಕ್ಕೂ ಅನ್ವಯಿಸುವ ಪುಸ್ತಕವಾಗಿದೆ. ಮಾನವನ ಇತಿಹಾಸದಲ್ಲಿ ಬೇರೆ ಯಾವುದೇ ಪುಸ್ತಕ ಪ್ರಪಂಚದ ಮೂಲೆ ಮೂಲೆಗೂ ತಲುಪಿಲ್ಲ. ಸತ್ಯವೇದವನ್ನು ಮಾತ್ರ ಸಾವಿರಾರು ಭಾಷೆಗಳಿಗೆ ಭಾಷಾಂತರಿಸಲಾಗಿದೆ, ಹಾಗೂ ಕೋಟಿಗಟ್ಟಲೆ ಪ್ರತಿಗಳನ್ನು ಮುದ್ರಿಸಲಾಗುತ್ತಿದೆ. ಇದು ಪ್ರಪಂಚದ ಎಲ್ಲಾ ದೇಶಗಳ ಜನರಿಂದ ಓದಲ್ಪಟ್ಟು ಗೌರವಸಲ್ಪಟ್ಟಿದೆ. ಪ್ರಪಂಚದಲ್ಲಿ ಬೇರೆ ಯಾವುದೇ ಪುಸ್ತಕವು ಇದರಷ್ಟು ಜನರ ಮೇಲೆ ಪ್ರಭಾವ ಬೀರಿಲ್ಲ. ಯೂರೋಪ್, ಆಫ್ರಿಕಾ, ಏಷ್ಯಾ, ಉತ್ತರ-ಅಮೇರಿಕ, ದಕ್ಷಿಣ-ಅಮೇರಿಕ, ಆಸ್ಟ್ರೇಲಿಯಾ ಮತ್ತು ಫೆಸಿಫಿಕ್ ದ್ವೀಪದಲ್ಲಿ ಹಾಗೂ ಎಲ್ಲಾಕಡೆಗೆ ! ಇಡೀ ಇತಿಹಾಸದ ಉದ್ದಕ್ಕೂ ಸತ್ಯವೇದವು ಜನರ ಮೇಲೆ ಪ್ರಭಾವ ಬೀರೂತ್ತಾ

ಬರುತ್ತಿದೆ. ಪ್ರಪಂಚದ ಮಹಾನ್ ವ್ಯಕ್ತಿಗಳೂ ಸಹ ಸತ್ಯವೇದ ಸಂದೇಶಗಳಿಂದ ಪ್ರಭಾವಿತರಾಗಿದ್ದಾರೆ. ಭಾರತದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾದ ರಾಷ್ಟ್ರಪಿತ ಮಹಾತ್ಮಗಾಂಧಿಯವರು ಪ್ರತಿನಿತ್ಯ ತಪ್ಪದೆ ಸತ್ಯವೇದವನ್ನು ಓದುತ್ತಿದ್ದರು. ಈ ಮೊದಲು ಹೇಳಿದಂತೆ ಸತ್ಯವೇದವು ಎಲ್ಲರಿಗೂ ಎಲ್ಲಾ ಕಾಲಕ್ಕೂ ಅನ್ವಯಿಸುವ ಗ್ರಂಥವಾಗಿದೆ. ಆದ್ದರಿಂದ ಖಂಡಿತವಾಗಿ ಸತ್ಯವೇದದಲ್ಲಿ ನಮ್ಮ ಕಾಲದ ಹಾಗೂ ನಮ್ಮ ಯುಗದ ಭಾರತೀಯರಿಗೂ ಸಹ ಸಂದೇಶವಿದೆ.

**ವಿದ್ಯಾರ್ಥಿ:** ಹೌದು, ಖಂಡಿತವಾಗಿಯೂ ಸತ್ಯವೇದವು ನನಗಾಗಿ ಒಂದು ಸಂದೇಶವನ್ನು ಒಳಗೊಂಡಿದೆ.

## ಪ್ರಶ್ನೆಗಳು

1. ಸತ್ಯವೇದದಲ್ಲಿರುವ ಹಳೇ ಒಡಂಬಡಿಕೆಯ ಮತ್ತು ಹೊಸ ಒಡಂಬಡಿಕೆಯಲ್ಲಿರುವ ಪುಸ್ತಕಗಳು ಎಷ್ಟು? ಹಾಗೂ ಇಡೀ ಸತ್ಯವೇದದ ಪುಸ್ತಕಗಳು ಎಷ್ಟು
2. ಸತ್ಯವೇದವನ್ನು ಯಾವ ಹಿನ್ನಲೆಯ ಜನರು ಬರೆದರು?
3. ಸತ್ಯವೇದದಲ್ಲಿ ಯಾವ್ಯಾವ ಪ್ರಕಾರದ ಪತ್ಯಗಳಿವೆ?
4. ಸತ್ಯವೇದದ ಮೂಲ ವಿಷಯಾಂಶ ಯಾವುವು?
5. ಸತ್ಯವೇದವು ಯಾಕೆ ಪಾಶ್ಚಾತ್ಯ ಪುಸ್ತಕ ಅಲ್ಲ? ದಯವಿಟ್ಟು ಚರ್ಚಿಸಿರಿ.

# ನಾಟಕದ ರಂಗಸ್ಥಳ

**ಪಂಡಿತ:** ನೀನು ಸತ್ಯವೇದವನ್ನು ಚೆನ್ನಾಗಿ ತಿಳಿದುಕೊಳ್ಳಲು ನಾನು ಒಂದು ನಾಟಕದ ರೀತಿಯಲ್ಲಿ ವಿವರಿಸುವೆ. ನೀನು ನಿಮ್ಮ ಹಳ್ಳಿಯಲ್ಲಿ ಅಭಿನಯಿಸಿರುವ ನಾಟಕವನ್ನು ಎಂದಾದರೂ ನೋಡಿರುವಿಯಾ?

**ವಿದ್ಯಾರ್ಥಿ:** ಖಂಡಿತವಾಗಿ ನಾನು ಬಾಲ್ಯದಿಂದಲೇ ನಮ್ಮ ಹಳ್ಳಿಯಲ್ಲಿ ಅಭಿನಯಿಸಿರುವ ಕಥೆಗಳಾದ ರಾಮಾಯಣ, ಮಹಾಭಾರತ ಮತ್ತು ಇತರೆ ಭಾರತೀಯ ಕಥೆಗಳನ್ನು ಅಭಿನಯಿಸುವ ತಂಡಗಳನ್ನು ನೋಡಿರುವೆ.

**ಪಂಡಿತ:** ಹಾಗಾದರೆ ಒಂದು ನಾಟಕದಲ್ಲಿ ಏನನ್ನು ನೋಡುತ್ತೇವೆ?

**ವಿದ್ಯಾರ್ಥಿ:** ನಾಟಕದಲ್ಲಿ ಉದ್ದವಾದ ಕಥೆಗಳನ್ನು ಅಭಿನಯಿಸುವ ಪಾತ್ರಧಾರಿಗಳಿರುತ್ತಾರೆ. ಈ ಉದ್ದವಾದ ನಾಟಕಗಳನ್ನು ಅನೇಕ ದೃಶ್ಯಗಳನ್ನಾಗಿ ಮತ್ತು ಭಾಗಗಳನ್ನಾಗಿ ಮಾಡುವರು. ಇದನ್ನೇ ನೀವು ಹೇಳುತ್ತಿರುವುದಲ್ಲವೇ?

**ಪಂಡಿತ:** ಹೌದು, ನಾಟಕದ ಅಭಿನಯವು ಮುಖ್ಯವಾಗಿ ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ಮೊದಲನೇಯದು ನಾಟಕ ಅಭಿನಯಿಸಲು ನಾಟಕದ ರಂಗಸ್ಥಳ, ಅಥವಾ ಕಥೆಯು ನಡೆಯುವಂತಹ ಸ್ಥಳ. ಕಥೆಯು ಒಂದು ದೃಶ್ಯದಿಂದ ಇನ್ನೊಂದು ದೃಶ್ಯಕ್ಕೆ ಹೋಗುತ್ತಿದ್ದಂತೆ ಅನೇಕ ಸ್ಥಳಗಳ ಮತ್ತು ರಂಗಭೂಮಿಯ ಅವಶ್ಯಕತೆ ಇರುತ್ತದೆ. ಎರಡನೇಯದಾಗಿ ನಾಟಕದಲ್ಲಿ ವ್ಯತ್ಯಾಸವಾದ ಪಾತ್ರಗಳಲ್ಲಿ ಅಭಿನಯಿಸುವ ಪಾತ್ರಧಾರಿಗಳು ಇರುತ್ತಾರೆ. ಮೂರನೇಯದಾಗಿ ಅನೇಕ ಅಂಕಗಳಿಂದ ಅಥವಾ ದೃಶ್ಯಗಳಿಂದ ಕೂಡಿರುವ ಕಥೆಯಿರುತ್ತದೆ.

**ವಿದ್ಯಾರ್ಥಿ:** ಪಂಡಿತರೇ, ಇದನ್ನು ನಾನು ಒಪ್ಪುತ್ತೇನೆ. ಹಾಗಾದರೆ ಸತ್ಯವೇದ ಕಥೆಗೆ ಇರುವ ರಂಗಸ್ಥಳ ಯಾವುದು?

**ಪಂಡಿತ:** ಸತ್ಯವೇದ ಕಥೆಯ ರಂಗಸ್ಥಳವು ಅಥವಾ ಭೌಗೋಳಿಕ ಪ್ರದೇಶವು ಪೂರ್ವದಲ್ಲಿರುವ ಎರಡು ನದಿಗಳಾದ ಟೈಗ್ರೀಸ್ ಮತ್ತು ಯೂಫ್ರೇಟೀಸ್ ನ ಸುತ್ತಮುತ್ತಲಿರುವ ಪ್ರದೇಶಗಳಾಗಿವೆ. ಅಲ್ಲಿಯೇ ಇಂದಿನ ಇರಾಕ್ ದೇಶವಿದೆ. ಇಂದಿನ ದೇಶಗಳಾದ ಇಸ್ರಾಯೇಲ್, ಪ್ಯಾಲೇಸ್ತೇನ್, ಸಿರಿಯ, ಯೊರ್ದನ್ ಮತ್ತು ಈಜಿಪ್ಟ್ ಗಳ ಮಧ್ಯಭಾಗದಲ್ಲಿ ನೋಡಬಹುದು. ಕೊನೆಯದಾಗಿ ಪಶ್ಚಿಮ ಭಾಗದಲ್ಲಿರುವ ಇಂದಿನ ದೇಶಗಳಾದ ಟರ್ಕಿ (ಇದನ್ನು ಅಪೊಸ್ತಲನಾದ ಪೌಲನ ಕಾಲದಲ್ಲಿ ಏಷ್ಯಾ ಎಂದು ಕರೆಯಲಾಗಿದೆ) ಗ್ರೀಸ್ ಮತ್ತು ಇಟಲಿಗಳನ್ನು ಸಹ ನೋಡಬಹುದು.


**ವಿದ್ಯಾರ್ಥಿ:** ಹಾಗಾದರೆ ನಾಟಕ ಎಲ್ಲಿ ಪ್ರಾರಂಭವಾಯಿತು? ಪೂರ್ವದಲ್ಲಿಯೋ, ಮಧ್ಯಭಾಗದಲ್ಲಿಯೋ, ಅಥವಾ ಪಶ್ಚಿಮದಲ್ಲಿಯೋ?

**ಪಂಡಿತ:** ಸತ್ಯವೇದದ ಮೊದಲ ಪುಸ್ತಕವಾದ ಆದಿಕಾಂಡದಲ್ಲಿರುವ ಕಥೆಯೂ ಟೈಗ್ರೀಸ್ ಮತ್ತು ಯೂಫ್ರೇಟೀಸ್ ನದಿಗಳ ಪ್ರದೇಶಗಳಲ್ಲಿ ಪ್ರಾರಂಭವಾಗುತ್ತದೆ. ಆದಿಕಾಂಡ 2:8-14 ರಲ್ಲಿ ನಾವು ಓದುವಂತೆ, ದೇವರು ಏದೆನ್ ತೋಟವನ್ನು ಪೂರ್ವದಲ್ಲಿ ಬೆಳೆಸಿದನು (ಇದು ಇಸ್ರಾಯೇಲಿನ ಪೂರ್ವಭಾಗವಾಗಿದೆ) ಮತ್ತು ನಾಲ್ಕು ನದಿಗಳು ಈ ತೋಟಕ್ಕೆ ನೀರನ್ನು ಹಾಯಿಸಿದವು. ಇವುಗಳಲ್ಲಿ ಎರಡು ನದಿಗಳು ಟೈಗ್ರೀಸ್ ಮತ್ತು ಯೂಫ್ರೇಟೀಸ್ ಗಳಾಗಿದ್ದವು. ಮೊದಲ ಮಾನವರಾದ ಆದಾಮ ಮತ್ತು ಹವ್ವರು ಇಬ್ಬರು ಮಕ್ಕಳನ್ನು ಹೊಂದಿದ್ದರು. ಕಾಯಿನನು ಒಬ್ಬ ವ್ಯವಸಾಯಗಾರನು ಮತ್ತು ಹೇಬೆಲನು

ಕುರಿ ಕಾಯುವವನಾಗಿದ್ದನು. ಮೊದಲ ಮಾನವ ಇತಿಹಾಸದಲ್ಲಿ ಜನರು ಹೀಗೆ ಜೀವಿಸದರೆಂದು ತಿಳಿದುಬರುತ್ತದೆ. ಕಾಯಿನನು ಒಂದು ಪಟ್ಟಣವನ್ನು ಕಟ್ಟಿದನು ಎಂದು ಸತ್ಯವೇದವು ತಿಳಿಸುತ್ತದೆ. ಪ್ರಾರಂಭದಲ್ಲಿ ಈ ಪ್ರದೇಶದ ಸಂಸ್ಕೃತಿಯೂ ಪಟ್ಟಣದ ಸಂಸ್ಕೃತಿಯಾಗಿತ್ತೆಂದು, ಜಲಪ್ರಳಯವು ಈ ಪ್ರದೇಶಕ್ಕೆ ಸಂಭವಿಸಿತ್ತೆಂದು ಮತ್ತು ನೋಹನನ್ನು ಹಾಗೂ ಆತನ ಕುಟುಂಬವನ್ನು ರಕ್ಷಿಸಿದ ನಾವೆಯೂ ಅರಾರಟ್ ಪರ್ವತದ ಮೇಲೆ ನಿಂತಿತೆಂದು ಪುರಾತತ್ವಶಾಸ್ತ್ರದ ಆಧಾರಗಳಿಂದ ತಿಳಿದುಬರುತ್ತದೆ. ಈ ಪರ್ವತ ಸಾಲುಗಳಲ್ಲಿ ಟೈಗ್ರೀಸ್ ಮತ್ತು ಯೂಫ್ರೇಟೀಸ್ ನದಿಗಳ ಉಗಮ ಸ್ಥಾನವನ್ನು ಕಾಣಬಹುದು.

ಈ ಭೌಗೋಳಿಕ ಪ್ರದೇಶದ ದಕ್ಷಿಣ ಭಾಗವನ್ನು ಸತ್ಯವೇದದಲ್ಲಿ ಬಾಬೆಲ್ ಎಂದು ಕರೆಯಲಾಗಿದೆ. ಅಲ್ಲಿ ಊರ್ ಪಟ್ಟಣವಿತ್ತು. ಈ ಪಟ್ಟಣವು ಅಬ್ರಹಾಮನ ಸ್ವಂತ ಸ್ಥಳವಾಗಿತ್ತು. ಸುಮಾರು ಕ್ರಿ.ಪೂ. 2000 ರಲ್ಲಿ ಅಬ್ರಹಾಮನು ಊರ್ ಪಟ್ಟಣವನ್ನು ಬಿಟ್ಟು ಉತ್ತರದ ಖಾರಾನಿಗೆ ಬಂದು, ತನ್ನ ತಂದೆ ಸಾಯುವವರೆಗೆ ಅಲ್ಲಿಯೇ ವಾಸಿಸಿದನು. ನಂತರ ಪೂರ್ವ ಮತ್ತು ದಕ್ಷಿಣಕ್ಕೆ ಪ್ರಯಾಣಿಸಿ ಕಾನಾನ್ ದೇಶಕ್ಕೆ ಬಂದನು. ಅದು ಅವನ ಹೊಸ ಮನೆಯಾಯಿತು. ಹೀಗೆ ಅವನು ಅನೇಕ ಸ್ಥಳಗಳಲ್ಲಿ ವಾಸಿಸಿ ಬರಗಾಲದ ನಿಮಿತ್ತ ಆತನು ದಕ್ಷಿಣಕ್ಕೆ ಮುಂದೆ ಪ್ರಯಾಣಿಸಿ ಐಗುಪ್ತ ಮತ್ತು ನೈಲ್ ನದಿ ಪ್ರದೇಶಕ್ಕೆ ಬಂದು ಸ್ವಲ್ಪ ಸಮಯ ನೆಲೆಸಿದನು. ಹೀಗೆ ಅಬ್ರಹಾಮನು ಎಲ್ಲಾ ಭೌಗೋಳಿಕ ಪ್ರದೇಶಗಳಲ್ಲಿ ಪ್ರಯಾಣಿಸಿದನು. ಇನ್ನುಳಿದ ಹಳೇ ಒಡಂಬಡಿಕೆಯ ಕಥೆಯೂ ಇಲ್ಲಿಯೇ ಸಂಭವಿಸಿದವು. ಐಗುಪ್ತವು ಒಂದು ತುದಿಯಲ್ಲಿದ್ದರೆ ಬಾಬೆಲ್ ಇನ್ನೊಂದು ತುದಿಯಲ್ಲಿದೆ. ಇವೆರಡೂ ದೇಶಗಳಲ್ಲಿ ಇಸ್ರಾಯೇಲಿನ ಮಕ್ಕಳು ಹೆಚ್ಚಿನ ಸಮಯವನ್ನು ಸೆರೆಯಾಳುಗಳಾಗಿ ಕಳೆದರು ಮತ್ತು ಕಾನಾನ್ ದೇಶ ಇವೆರಡು ತುದಿಗಳ ಮಧ್ಯದಲ್ಲಿದೆ. ನಾವೂ ಭೂಪಟವನ್ನು ನೋಡುವಾಗ ಇಡೀ ಭೌಗೋಳಿಕ ಪ್ರದೇಶವು ಒಂದು ಅರ್ಧಗೋಲಾಕೃತಿಯಂತೆ ಅಥವಾ ಅರ್ಧಚಂದ್ರಾಕೃತಿಯಂತೆ ಕಾಣುತ್ತದೆ ಮತ್ತು ಇದು ಫಲವತ್ತಾದ ಅರ್ಧಚಂದ್ರಾಕೃತಿಯೆಂದು ಇಂದಿಗೂ ಕರೆಯಲ್ಪಡುತ್ತದೆ.

## ನಕ್ಷೆ: ಫಲವತ್ತಾದ ಅರ್ಧಚಂದ್ರಾಕೃತಿ



**ವಿದ್ಯಾರ್ಥಿ:** ಅಬ್ರಹಾಮನು ಹಳೇ ಒಡಂಬಡಿಕೆಯ ಎಲ್ಲಾ ಪ್ರದೇಶಗಳಲ್ಲಿ ಪ್ರಯಾಣಿಸಿದ್ದು ಬಹಳ ಆಕರ್ಷಕವಾದದ್ದಾಗಿದೆ. ಇದರಿಂದಲೇ ಹಳೇ ಒಡಂಬಡಿಕೆಯ ಇನ್ನುಳಿದ ಕಥೆಗಳೆಲ್ಲವು ಅದೇ ಸ್ಥಳಗಳ ಮತ್ತು ಪ್ರದೇಶಗಳ ಹೆಸರುಗಳನ್ನು ಪುನಃ ಪುನಃ ಉಪಯೋಗಿಸುತ್ತಿರುವುದಾ?

**ಪಂಡಿತ:** ಹೌದು, ಅದು ನಿಜ, ನಾವೂ ಸಹ ಸೂಕ್ಷ್ಮವಾಗಿ ಮತ್ತು ಹತ್ತಿರದಿಂದ ಮಧ್ಯಭಾಗವನ್ನು ನೋಡೋಣ, ಆ ಪ್ರದೇಶವು ಕಾನಾನ್ ಭೂಮಿಯಾಗಿದೆ. ದೇವರು ಮೋಶೆಗೆ ಅದು ಉತ್ತಮವಾದ ಮತ್ತು ವಿಸ್ತಾರವಾದ ಪ್ರದೇಶವೆಂದೂ ಮತ್ತು ಹಾಲು ಜೇನೂ ಹರಿಯುವ ದೇಶವೆಂದು ಹೇಳಿದನು (ವಿಮೋ.3:8). ಇದು ಬಹಳ ದೊಡ್ಡ ದೇಶವೇನಲ್ಲ, ಉತ್ತರದಿಂದ ದಕ್ಷಿಣದವರೆಗೆ ಕೇವಲ 350 ಕಿ.ಮೀ. (ಬೆಂಗಳೂರು ಹುಬ್ಬಳ್ಳಿಗೆ ಇರುವ ದೂರವಾಗಿದೆ), ಮತ್ತು 150 ಕಿ.ಮೀ. ಪೂರ್ವದಿಂದ ಪಶ್ಚಿಮದವರೆಗೆ (ಚಿತ್ರದುರ್ಗದಿಂದ ಹಾಸನಕ್ಕೆ ಇರುವ ದೂರವಾಗಿದೆ). ಆದ್ದರಿಂದ ಇದು ಕರ್ನಾಟಕ ರಾಜ್ಯಕ್ಕಿಂತ ಚಿಕ್ಕದೇಶ. ಆದರೆ ಇಂಥ ಚಿಕ್ಕ ದೇಶದಲ್ಲಿ ಮಹತ್ತರವಾದ ಭೌಗೋಳಿಕ ವ್ಯತ್ಯಾಸಗಳಿವೆ.

ಪಶ್ಚಿಮದಲ್ಲಿ ಮೇಡಿಟರೇನಿಯನ್ ಸಮುದ್ರದುದ್ದಕ್ಕೂ ಕರಾವಳಿ ಪ್ರದೇಶವಿದ್ದು, ಇದು ಫಿಲಿಷ್ಟಿಯ ದೇಶಕ್ಕೆ ಹೊಂದಿಕೊಂಡಿತ್ತು. ಉತ್ತರದಲ್ಲಿ ಈ ಪ್ರದೇಶ ಪೂರ್ವ ಪ್ರದೇಶವನ್ನು ಪರ್ವತ ಪ್ರದೇಶಗಳನ್ನಾಗಿ ವಿಭಾಗಿಸಿ ಜೆಜ್ರಿಯೀಲ್ ಕಣಿವೆಗಳನ್ನಾಗಿ ಮಾಡಿದೆ. ಕರಾವಳಿ ಪ್ರದೇಶದ ಪೂರ್ವಭಾಗದ ತಳ ಅಥವಾ ಪಾದ ಪರ್ವತಗಳು ಸುತ್ತುವರಿದ ಕಣಿವೆಗಳಿಂದ ಮತ್ತು ಮೃದು ಪರ್ವತಗಳಿಂದ ಕೂಡಿವೆ. ಈ ಪ್ರದೇಶವು ಸಿಕಮೋರ್ ಅಂಜೂರ ಮರಗಳಿಗೆ ಪ್ರಸಿದ್ಧವಾಗಿತ್ತು. ಬೆಟ್ಟದ ಬುಡದ ಗುಡ್ಡದ ಪೂರ್ವಭಾಗಕ್ಕೆ ಎತ್ತರವಾದ ಪರ್ವತಗಳಿವೆ. ಅಲ್ಲಿಯೇ ಯೆರೂಸಲೇಮ್ ಪಟ್ಟಣವಿದೆ. ಪ್ರಯಾಣಿಕನು ಸ್ವಲ್ಪಮುಂದೆ ಸಾಗಿ ಹೋದರೆ ಯೆಹೂದ್ಯದ ಮರುಭೂಮಿಯನ್ನು ತಲುಪುತ್ತಾನೆ. ಅಲ್ಲಿ ಚಳಿಗಾಲದಲ್ಲಿ ಕುರಿಮಂದೆಗಳು ಮೇಯಲು ಸಾಕಷ್ಟು ಹಸಿರುಹುಲ್ಲು ಬೆಳೆಯುತ್ತಿತ್ತು. ಇದು ಮರುಭೂಮಿಯ ಪ್ರದೇಶವಾಗಿತ್ತು, ಇಲ್ಲಿಯೇ ದಾವೀದನು ತನ್ನನ್ನು ಕೊಲ್ಲಲಿಕ್ಕೆ ಸೌಲನು ಬೆನ್ನಟ್ಟಿ ಬಂದಾಗ ಅಡಗಿಕೊಂಡಿದ್ದನು. ಹಾಗೆಯೇ ಯೇಸು ಕ್ರಿಸ್ತನು ಸಹ 40 ದಿವಸಗಳು ಉಪವಾಸವಿದ್ದು ಸೈತಾನನಿಂದ ಶೋಧಿಸಲ್ಪಟ್ಟಿದ್ದು ಇದೇ ಸ್ಥಳದಲ್ಲಿಯೇ. ಹೀಗೆಯೇ ಪ್ರಯಾಣಿಕನು ಪ್ರಯಾಣಿಸುತ್ತಾ ಮುಂದೆ ಸಾಗಿದರೆ ಅವನು ಯೊರ್ದನ್ ಕಣಿವೆಯ ಪ್ರದೇಶವನ್ನು ತಲುಪುತ್ತಾನೆ. ಈ ಪ್ರದೇಶವು ಪ್ರಪಂಚದ ಅತೀ ಆಳವಾದ, ತಗ್ಗಾದ ಪ್ರದೇಶವಾಗಿದೆ. ಯೊರ್ದನ್ ನದಿಯೂ ಉತ್ತರದಲ್ಲಿರುವ ಹೆರ್ಮೋನ್ ಪರ್ವತದಿಂದ ಗಲಿಲಾಯ ಸಮುದ್ರದ ಮೂಲಕವಾಗಿ ಮೃತ್ಯು ಸಮುದ್ರದ ಕೆಳಕ್ಕೆ ಹರಿಯುತ್ತದೆ. ಇದು ಸಮುದ್ರಮಟ್ಟದಿಂದ 400 ಮೀಟರ್ ಕೆಳಭಾಗದಲ್ಲಿದೆ. ಹಳೇ ಒಡಂಬಡಿಕೆಯ ಕಾಲದಲ್ಲಿ ಈ ಕಣಿವೆ ಪ್ರದೇಶವು ದಟ್ಟವಾದ ಅರಣ್ಯಗಳಿಂದ ಮತ್ತು ವನ್ಯಜೀವಿಗಳಿಂದ ತುಂಬಿತ್ತು.

ಕೊನೆಯದಾಗಿ ಪ್ರಯಾಣಿಕನು ಯೊರ್ದನ್ ಪೂರ್ವಭಾಗದಿಂದ ವಿಸ್ತಾರವಾದ ಪರ್ವತ ಪ್ರಸ್ಥಭೂಮಿಯನ್ನು ತಲುಪುತ್ತಾನೆ. ಅಲ್ಲಿ 40 ವರ್ಷಗಳ ಅರಣ್ಯವಾಸದ ನಂತರ ಗಾದ್, ರೂಬೇನ್ ಮತ್ತು ಮನಸ್ಸೆಯ ಅರ್ಧ ಪಂಗಡದವರಿಗೆ ಪ್ರಾಂತ್ಯಗಳು ಕೊಡಲ್ಪಟ್ಟವು. ಈ ಪ್ರಸ್ಥಭೂಮಿಯು ಯೊರ್ದನ್ ನದಿಯೊಳಕ್ಕೂ ಮತ್ತು ಮೃತ್ಯು ಸಮುದ್ರದೊಳಕ್ಕೂ ಹರಿಯುವ ಮೂರು ನದಿಗಳಿಂದ ವಿಭಾಗಿಸಲ್ಪಟ್ಟಿತ್ತು. ಅವುಗಳಲ್ಲಿ ಒಂದು ಯಬ್ಬೋಕ್ ನದಿ ಆಗಿದೆ, ಅಲ್ಲಿ ಯಾಕೋಬನು ದೇವರೊಂದಿಗೆ ಹೋರಾಡಿದನು, ಇದು ಅರ್ಧ ಮಾರ್ಗವಾಗಿ ಗಲಿಲಾಯ ಸಮುದ್ರ ಮತ್ತು ಮೃತ್ಯು ಸಮುದ್ರದ ಮಧ್ಯಭಾಗದಲ್ಲಿದೆ. ಮುಂದೆ ದಕ್ಷಿಣಕ್ಕೆ ಅರ್ನೋನ್ ನದಿಯು ಮೃತ್ಯು ಸಮುದ್ರದೊಳಕ್ಕೆ ಹರಿಯುತ್ತದೆ. ಹಳೇ ಒಡಂಬಡಿಕೆಯ ಸಮಯದಲ್ಲಿ ಈ ಪ್ರದೇಶದಲ್ಲಿ ಬರುವ ಮೂರು ಜನಾಂಗಗಳ ಕುರಿತು ಪುನಃ ಪುನಃ ಬರೆದಿರುವುದನ್ನು

ಕಾಣುತ್ತೇವೆ. ಅಮ್ಮೋನಿಯರ ದೇಶವು ಯಬ್ಬೋಕ್ ನದಿ ಮತ್ತು ಅರ್ನೋನ್ ನದಿ ನಡುವೆ ಇತ್ತು ಮತ್ತು ಮೋವಾಬ್ಯರು ಅರ್ನೋನ್ ನದಿಯ ದಕ್ಷಿಣಕ್ಕೆ ವಾಸಿಸಿದರು. ಮೋಶೆಯು ತನ್ನ ಮರಣದ ಮುಂಚೆ ವಾಗ್ದಾನ ದೇಶವನ್ನು ಮೋವಾಬ್ಯದಲ್ಲಿರುವ ಪರ್ವತದ ಮೇಲಿನಿಂದ ನೋಡಿದನು. ಎದೋಮ್ಯರು, ಮೋವಾಬ್ಯರು ದಕ್ಷಿಣ ಪ್ರದೇಶವನ್ನೂ ಮತ್ತು ಮೃತ್ಯು ಸಮುದ್ರದ ದಕ್ಷಿಣ ಭಾಗವನ್ನು ಆಳಿದರು.

## ನಕ್ಷೆ: ಕಾನಾನ್ ದೇಶ


ARAM
Mt. Hermon
DAN
Dan
Tyre
ASHER
Kedesh
NAPHTALI
THE GREAT SEA
SEA OF KINNERETH
ZEBULUN
Mt. Tabor
Yarmuk
Megiddo
ISSACHAR
MANASSEH
Jezreel
Ramoth Gilead
MANASSEH
Jabesh Gilead
Jordan
Samaria
Tirzah
Mt. Ebal
Mt. Gerizim
Shechem
Succoth
Jabbok
Joppa
Shiloh
EPHRAIM
GAD
Rabbah
Mizpah
Bethel
Ai
DAN
Gilgal
Heshbon
AMMON
BENJAMIN
Jericho
Ashdod
Ekron
Bezer
Jerusalem
Mt. Nebo
Gath
PHILISTIA
Ashkelon
REUBEN
Hebron
SALT SEA
Gaza
JUDAH
Aroer
Arnon
MOAB
Beersheba
SIMEON
Wadi of Egypt
EDOM
Km
0
25
50


**ವಿದ್ಯಾರ್ಥಿ:** ಆಸಕ್ತಿಯುಳ್ಳ ವಿವರಣೆಗಾಗಿ ವಂದನೆಗಳು ಸರ್ ! ಆದರೆ ಯೇಸುವಿನ ಕಾಲದಲ್ಲಿದ್ದ ಕಾನಾನ್ ಭೌಗೋಳಿಕ ಪ್ರದೇಶವನ್ನು ಹಳೇ ಒಡಂಬಡಿಕೆ ಕಾಲಕ್ಕೆ ಹೋಲಿಸುವಾಗ ಯಾವ ರೀತಿಯ ವ್ಯತ್ಯಾಸವಾಗಿತ್ತು?

**ಪಂಡಿತ:** ಒಳ್ಳೇಯದು, ಅನೇಕ ರೀತಿಯಲ್ಲಿ ಈ ಪ್ರದೇಶವು ಒಂದೇ ರೀತಿಯಾಗಿದೆ. ಆದರೆ ಮುಖ್ಯವಾದ ವ್ಯತ್ಯಾಸವೆಂದರೆ ರಾಜಕೀಯ ಸ್ಥಿತಿ. ಹೊಸ ಒಡಂಬಡಿಕೆಯ ಕಾಲದಲ್ಲಿ ಮುಖ್ಯವಾಗಿ ಈ ದೇಶದ ಮೂರು ಭಿನ್ನವಾದ ಕ್ಷೇತ್ರಗಳನ್ನು ನೋಡುತ್ತೇವೆ (ಅವುಗಳು ಆ ಕಾಲದಲ್ಲಿ ಆಗಾಗ ಪ್ಯಾಲೇಸ್ತೀನ್ ದೇಶ ಎಂದು ಗುರುತಿಸಲ್ಪಟ್ಟವು): ಗಲಿಲಾಯ, ಸಮಾರ್ಯ ಮತ್ತು ಯೂದಾಯ. ಗಲಿಲಾಯವು ಉತ್ತರದಲ್ಲಿತ್ತು. ಇದರ ಹೆಸರಿನ ಅರ್ಥವು "ಜಿಲ್ಲೆ" ಯಾಗಿತ್ತು. ಅದು "ಅನ್ಯಜನರ ಜಿಲ್ಲೆಯಾಗಿತ್ತು", ಯಾಕೆಂದರೆ ಹಳೇ ಒಡಂಬಡಿಕೆಯ ಕಾಲದಲ್ಲಿ ಅನೇಕ ಯುದ್ಧಗಳ ನಂತರ ಬೇರೆ ಬೇರೆ ವರ್ಗದ ಜನರು ಈ ಪ್ರದೇಶಕ್ಕೆ ಬಂದು ನೆಲೆಸಿದ್ದರು. ಪರ್ವತಗಳಿಂದ ಸುತ್ತುವರಿದಿರುವ ಚಿಕ್ಕ ಕೆರೆಯಂತಿರುವ (30 ಕಿ.ಮೀ ರಿಂದ 13 ಕಿ.ಮೀ) ಗಲಿಲಾಯ ಸಮುದ್ರವು ಬಹು ಪ್ರಾಧಾನ್ಯತೆಯನ್ನು ಹೊಂದಿತ್ತು. ಈ ಕೆರೆಯ ಮೇಲೆ ಅನೇಕ ಮುಖ್ಯಪಟ್ಟಣಗಳಿದ್ದವು. ಅವುಗಳಲ್ಲಿ ಅನೇಕಭಾರಿ ಸುವಾರ್ತೆಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಪಟ್ಟಣವಾದ ಕಪೆರ್ನೌಮ್ ಒಂದಾಗಿತ್ತು.

ಗಲಿಲಾಯದ ದಕ್ಷಿಣದಲ್ಲಿ ನಾವು ಸಮಾರ್ಯ ಜಿಲ್ಲೆಯನ್ನು ಕಾಣಬಹುದಾಗಿದೆ. ಹಳೇ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲ್ಯರ ರಾಜ್ಯವು ಎರಡು ವಿಭಾಗಗಳಾಗಿ ವಿಂಗಡವಾದ ಉತ್ತರ ರಾಜ್ಯದ ರಾಜಧಾನಿಯಾಗಿ ಸಹ ಈ ಜಿಲ್ಲೆಯು ಹೆಸರುಗೊಂಡಿತು, ಇದನ್ನು ಸಮಾರ್ಯವೆಂತಲೂ ಸಹ ಕರೆಯಲಾಗುತ್ತಿತ್ತು. ಕ್ರಿ.ಪೂ. 722 ರಲ್ಲಿ ಅಶ್ಶೂರ್ಯರು ಈ ರಾಜ್ಯವನ್ನು ಗೆದ್ದುಕೊಂಡರು ಮತ್ತು ಬೇರೆ ರಾಜ್ಯಗಳ ಜನರನ್ನು ಈ ಸ್ಥಳಕ್ಕೆ ಬರುವಂತೆ ಒತ್ತಾಯಿಸಿದರು. ಇದರ ಫಲಿತಾಂಶವಾಗಿ ಇಲ್ಲಿ ಅನೇಕ ಸಂಸ್ಕೃತಿಯ ಜನರು ಒಂದುಗೂಡಿ ಕಲಬೆರಿಕೆಯಾಗಿ ಮುಂದೆ ಸಮಾರ್ಯದವರೆಂದು ಕರೆಯಲ್ಪಟ್ಟರು. ಇವರು ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳಲ್ಲಿ ನಂಬಿಕೆಯಿಟ್ಟಿದ್ದರು ಮತ್ತು ದೇವರಿಗಾಗಿ ತಮ್ಮ ಸ್ವಂತ ದೇವಾಲಯವನ್ನು ಕಟ್ಟಿಕೊಂಡಿದ್ದರು (ಹೊಸ ಒಡಂಬಡಿಕೆಯ ಕಾಲಕ್ಕಿಂತ ಮುಂಚೆ ಇದು ನಾಶವಾಗಿತ್ತು). ಯೇಸುವಿನ ಕಾಲದಲ್ಲಿ ಯೆಹೂದ್ಯರ ಮತ್ತು ಸಮಾರ್ಯದವರ ನಡುವೆ ಅಂತರ ಮತ್ತು ಬಿರುಸುತನ ಉಂಟಾಗಿತ್ತು, ಮತ್ತು ಯೆಹೂದ್ಯರು ಗಲಿಲಾಯದಿಂದ ಯೂದಾಯಕ್ಕೆ ಪ್ರಯಾಣಿಸುವಾಗ ಸಮಾರ್ಯದ ಮೂಲಕ ಪ್ರಯಾಣಿಸುತ್ತಿರಲಿಲ್ಲ.

ಕೊನೆಯದಾಗಿ ದೇಶದ ದಕ್ಷಿಣದ ತುದಿಯು ಯೂದಾಯವೆಂದು ಹೆಸರಾಯಿತು. ಇದು ಯಹೂದ ಪ್ರದೇಶವಾಗಿತ್ತು. ಹಳೇ ಒಡಂಬಡಿಕೆಯ ಸಮಯದಲ್ಲಿದ್ದ ಇಸ್ರಾಯೇಲ್ಯರ ಎರಡು ಸಾಮ್ರಾಜ್ಯಗಳಲ್ಲಿ ದಕ್ಷಿಣ ಸಾಮ್ರಾಜ್ಯದ ಹೆಸರು ಯೆಹೂದ ಆಗಿತ್ತು. ಆದರೆ ಯೇಸುವಿನ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದ ರೋಮನ್ ಆಡಳಿತಗಾರರು ಸಮಾರ್ಯ ಮತ್ತು ಗಲಿಲಾಯವನ್ನೊಳಗೊಂಡ ಇಡೀ ಪ್ರದೇಶವನ್ನು ಯೂದಾಯವೆಂದು ಕರೆದರು. ಇದು ಪ್ಯಾಲೆಸ್ತೀನ್ ದೇಶವೆಂದು ಸಹ ಕರೆಯಲ್ಪಟ್ಟಿತ್ತು.

# ನಕ್ಷೆ: ಯೇಸುವಿನ ಕಾಲದ ಪ್ಯಾಲೆಸ್ಟೈನ್ ನಕ್ಷೆ



**ವಿದ್ಯಾರ್ಥಿ:** ಹಾಗಾದರೆ ಈ ಸತ್ಯವೇದ ನಾಟಕ ಕಥೆಯ ಪೂರ್ಣ ರಂಗಸ್ಥಳದ ಕುರಿತು ವಿವರಿಸಿದ್ದೀರಾ?

**ಪಂಡಿತ:** ಪೂರ್ಣವಾಗಿ ಇನ್ನೂ ವಿವರಿಸಿಲ್ಲ. ನಾನು ಇನ್ನೊಂದು ಭೌಗೋಳಿಕ ಪ್ರದೇಶವನ್ನು ತಿಳಿಸಲೇಬೇಕು. ಕೊನೆಯ ದೃಶ್ಯಗಳಿಗೆ ಬೇಕಾದ ರಂಗಸ್ಥಳವನ್ನು ಹೊಸ ಒಡಂಬಡಿಕೆಯ ಕಥೆಯಲ್ಲಿ ಬರುವ ಅಪೊಸ್ತಲರ ಕೃತ್ಯಗಳಲ್ಲಿ ಕಾಣುತ್ತೇವೆ. ಪಂಚಾಶತ್ತಮ ಹಬ್ಬದ ಮೊದಲ ದಿನದ ನಂತರ ಯೇಸುವಿನ ಸುವಾರ್ತೆಯು ಮೇಡಿಟೆರೇಯನ್ ಸಮುದ್ರದ ಸುತ್ತಲಿರುವ ಅನೇಕ ದೇಶಗಳಿಗೂ, ಪಟ್ಟಣಗಳಿಗೂ ಹಾಗೂ ಜನರಿಗೆಲ್ಲಾ ಹರಡಿತು. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಅಪೊಸ್ತಲನಾದ ಪೌಲನ ಕುರಿತ ಕಥೆಯು ಆ ದಿವಸಗಳಲ್ಲಿ ಬಹಳ ಪ್ರಸಿದ್ಧವಾದ ಪಟ್ಟಣವು ಮತ್ತು ರೋಮನ್ ಸಾಮ್ರಾಜ್ಯದ ರಾಜಧಾನಿಯಾದ ರೋಮಿನಲ್ಲಿ ಕೊನೆಗೊಳ್ಳುತ್ತದೆ.

**ವಿದ್ಯಾರ್ಥಿ:** ನಿಮಗೆ ವಂದನೆಗಳು ಸರ್. ಈ ಸತ್ಯವೇದ ನಾಟಕದ ರಂಗಸ್ಥಳದಂತಿರುವ ಈ ಎಲ್ಲಾ ದೇಶಗಳನ್ನೂ ಮತ್ತು ಸ್ಥಳಗಳನ್ನೂ ಖಂಡಿತವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತೇನೆ.

**ಪ್ರಶ್ನೆಗಳು:**

1. ಪಂಡಿತರು ಸತ್ಯವೇದ ಕಥೆಯನ್ನು ಒಂದು ನಾಟಕಕ್ಕೆ ಹೋಲಿಸಿದ್ದಾರೆ. ಆ ನಾಟಕದಲ್ಲಿ ಬರುವ ಅತೀ ಪ್ರಾಮುಖ್ಯವಾದ ಮೂರು ಅಂಶಗಳಾವುವು?
2. ರಂಗಭೂಮಿ ಎಂದರೇನು?
3. ಸತ್ಯವೇದದ ಕಥೆ ಪ್ರಾರಂಭವಾಗುವ ಭೌಗೋಳಿಕ ಪ್ರದೇಶವನ್ನು ವಿವರಿಸಿರಿ.
4. ಅಬ್ರಹಾಮನು ಸಂಚಾರ ಮಾಡಿದ ಪ್ರದೇಶಗಳಾವುವು? ಅವುಗಳನ್ನು ಕುರಿತು ವಿವರಿಸಿರಿ.
5. ಫಲವತ್ತಾದ ಅರ್ಧಚಂದ್ರಾಕೃತಿ ಎಂದರೇನು?
6. ಪಶ್ಚಿಮದಿಂದ ದಕ್ಷಿಣದವರೆಗೆ ಕಾನಾನ್ ದೇಶವನ್ನು ವಿವರಿಸಿರಿ.
7. ಫಿಲಿಷ್ಟಿಯರು ಎಲ್ಲಿ ವಾಸಿಸಿದರು?
8. ಯೆರೂಸಲೇಮ್ ಎಲ್ಲಿ ಇತ್ತು?
9. ಮೃತ್ಯು ಸಮುದ್ರದ ಕುರಿತ ಒಂದು ಆಸಕ್ತಿಯುಳ್ಳ ಭೌಗೋಳಿಕ ಅಂಶವನ್ನು ತಿಳಿಸಿರಿ.
10. ಹಳೇ ಒಡಂಬಡಿಕೆಯ ಕಾಲದಲ್ಲಿ ಯೊರ್ದನ್ ನದಿಯ ಪೂರ್ವದಲ್ಲಿದ್ದ ಮೂರು ಮುಖ್ಯವಾದ ದೇಶಗಳಾವುವು?
11. ಹೊಸ ಒಡಂಬಡಿಕೆಯ ಕಾಲದಲ್ಲಿನ ಪ್ಯಾಲೆಸ್ತೀನ್ ದೇಶವನ್ನು (ಅಥವಾ ಯೂದಾಯದ ರೋಮ್ ಪ್ರಾಂತ್ಯವನ್ನು) ಉತ್ತರದಿಂದ ದಕ್ಷಿಣದವರೆಗೆ ವಿವರಿಸಿರಿ.
12. ಅಪೊಸ್ತರ ಕೃತ್ಯಗಳು ಪುಸ್ತಕದಲ್ಲಿ ಅಪೊಸ್ತಲನಾದ ಪೌಲನ ಸೇವೆಯ ರಂಗಭೂಮಿ ಯಾವುದು?

## ನಕ್ಷೆ: ರೋಮಿಗೆ ಪೌಲನ ಪ್ರಯಾಣ



## ಸತ್ಯವೇದ ನಾಟಕದ ಪಾತ್ರಧಾರಿಗಳು

**ವಿದ್ಯಾರ್ಥಿ:** ಹಾಗಾದರೆ ನೀವು ಈಗಾಗಲೇ ಸತ್ಯವೇದ ನಾಟಕದ ರಂಗಸ್ಥಳ ಅಥವಾ ಭೌಗೋಳಿಕ ಪ್ರದೇಶವನ್ನು ಕುರಿತು ವಿವರಿಸಿದ್ದೀರಿ. ನೀವು ಈಗ ನಾಟಕದ ಪಾತ್ರಧಾರಿಗಳನ್ನು ಪರಿಚಯಿಸಲೇಬೇಕು !

**ಪಂಡಿತ:** ಹಾಗಾದರೆ ಸತ್ಯವೇದದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರಧಾರಿ ಯಾರೆಂದು ನೀನು ಆಲೋಚಿಸುತ್ತೀಯಾ?

**ವಿದ್ಯಾರ್ಥಿ:** ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ ಪ್ರಾಯಶಃ ಇಸ್ರಾಯೇಲ್ ಜನರಾಗಿರಬಹುದು. ಇಲ್ಲವಾದರೆ ಇದಕ್ಕೆ ಬದಲಾಗಿ ಹಳೇ ಮತ್ತು ಹೊಸ ಒಡಂಬಡಿಕೆಯನ್ನು ಸೇರಿಸಿ ಹೇಳುವುದಾದರೆ "ದೇವಜನರೆಂದು" ಹೇಳಬಹುದು.

**ಪಂಡಿತ:** ಇಸ್ರಾಯೇಲ್ ಜನರು ಅಥವಾ ದೇವಜನರು ಖಂಡಿತವಾಗಿ ಪ್ರಮುಖರು. ಆದರೆ ಇದು ಸರಿಯಾದ ಉತ್ತರವಲ್ಲ. ಸತ್ಯವೇದದಲ್ಲಿ ಬಹಳ ಪ್ರಾಮುಖ್ಯತೆಯುಳ್ಳ ಒಬ್ಬ ಪಾತ್ರಧಾರಿಯಿದ್ದಾನೆ, ಸ್ವಲ್ಪ ಯೋಚಿಸು ! ಪೂರ್ಣ ನಾಟಕವನ್ನು ಯಾರು ಪ್ರಾರಂಭಿಸಿದ್ದು? ಸತ್ಯವೇದದಲ್ಲಿ ಪ್ರಸ್ತಾಪಿಸಲ್ಪಡುವ ಮೊದಲ ವ್ಯಕ್ತಿ ಯಾರು?

**ವಿದ್ಯಾರ್ಥಿ:** ಎಂಥ ತಿಳಿಗೇಡಿ ನಾನು ! ಹೌದು ಖಂಡಿತವಾಗಿ ಆತನು ದೇವರು, ಆತನೇ ಮೊದಲ ವ್ಯಕ್ತಿ.

**ಪಂಡಿತ:** ಹೌದು, ಅದು ಸತ್ಯವಾದದ್ದು. ಸತ್ಯವೇದದ ಮೊದಲ ವಾಕ್ಯ ಈ ರೀತಿಯಾಗಿ ಹೇಳುತ್ತದೆ "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು (ಆದಿ. 1:1). ಆತನು ಯೇಸು ಕ್ರಿಸ್ತನಲ್ಲಿ ಶರೀರಧಾರಿಯಾಗಿ, ನಾಟಕದ ಮಧ್ಯದಲ್ಲಿ ಕಾಣಿಸಿಕೊಂಡು, ನಾಟಕದಲ್ಲಿ ಕೇಂದ್ರವ್ಯಕ್ತಿಯಾಗಿ ಅನೇಕ ದೃಶ್ಯಗಳಲ್ಲಿ ಅಭಿನಯಿಸಿದನು. ಯೋಹಾನನ ಸುವಾರ್ತೆಯಲ್ಲಿ ನಾವು ಹೀಗೆ ಓದುತ್ತೇವೆ, *"ಆದಿಯಲ್ಲಿ ವಾಕ್ಯವಿತ್ತು ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು ... ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು, ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು ... ದೇವರನ್ನು ಯಾರೂ ಎಂದೂ ಕಂಡಿಲ್ಲ, ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು"* (ಯೋಹಾನ 1:1,14 ಮತ್ತು 18). ಕೊನೆಯಲ್ಲಿ ಆತನೇ ಪೂರ್ಣ ನಾಟಕಕ್ಕೆ ನಾಂದಿ ಹಾಡಿ ಮುಕ್ತಾಯಗೊಳಿಸುತ್ತಾನೆ, *"ಹೀಗೆ ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗುವನು"* (1 ಕೊರಿ. 15:28).

ಆದರೆ ದೇವರು ಜನರನ್ನು ವೈಯಕ್ತಿಕವಾಗಿ ಮತ್ತು ಗುಂಪಾಗಿ ರಂಗಭೂಮಿಗೆ ನಾಟಕ ಅಭಿನಯಿಸಲು ಬರಮಾಡುತ್ತಾನೆ. ಇದು ನಾಟಕದ ಎರಡು ಭಾಗಗಳಾದ ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಕಥೆಯಲ್ಲಿ ನಡೆಯುತ್ತದೆ. ನಾಟಕದ ರಂಗಭೂಮಿಯಲ್ಲಿ ಬರುವ ಪಾತ್ರಧಾರಿಗಳು ಯಾರಾಗಿದ್ದರೂ ಅದರ ಉದ್ದೇಶವು ಯಾವಾಗಲೂ ದೇವರ ಮಹಿಮೆ ನೀತಿ ಮತ್ತು ಪ್ರೀತಿ ಎಂಬುದು ಅಭಿನಯಕಾರರಲ್ಲಿ ಮಾತ್ರವಲ್ಲದೆ ನಾಟಕವನ್ನು ನೋಡುವ ಮತ್ತು ಓದುವವರಲ್ಲಿಯೂ ಖಚಿತವಾಗಬೇಕು.

ಸತ್ಯವೇದ ನಾಟಕದ ಮೊದಲ (ಅದು ಹಳೇ ಒಡಂಬಡಿಕೆಯಾಗಿದೆ) ಭಾಗವು ಇಸ್ರಾಯೇಲ್ ಜನರ ಮೇಲೆ ಕೇಂದ್ರೀಕರಿಲ್ಪಟ್ಟಿದೆ. ಇಸ್ರಾಯೇಲ್ ಜನರು ನಾಟಕದ ಕೇಂದ್ರವಾಗಿದ್ದಾರೆ ಎಂದು ನೀನು ಹೇಳಿದ್ದು ಸ್ವಲ್ಪಮಟ್ಟಿಗೆ ಸರಿಯಾಗಿದೆ ! ಈ ದೇಶವು

ಅಬ್ರಹಾಮ, ಇಸಾಕ ಮತ್ತು ಯಾಕೋಬರೆಂಬ ಮೂರು ಜನ ಮೂಲಪಿತೃಗಳನ್ನು (ಅಥವಾ ಮೂಲ ಪುರುಷರನ್ನು) ಹೊಂದಿದೆ. ಆದಿಕಾಂಡ 12 ನೇ ಅಧ್ಯಾಯದಲ್ಲಿ ಅಬ್ರಹಾಮನನ್ನು ಹೊಸ ದೇಶದ ಪ್ರಾರಂಭಕನಾಗುವಂತೆ ತನ್ನ ಸ್ವಂತ ಸ್ಥಳವಾದ ಊರ್ ಅನ್ನು ಬಿಟ್ಟು ಬರುವಂತೆ ದೇವರು ಆಜ್ಞಾಪಿಸಿದನು. ಆ ಹೊಸ ದೇಶದ ಜನರೇ ಇಸ್ರಾಯೇಲ್ ಜನರಾಗಿದ್ದರು.

ಆದರೆ ಇಡೀ ಕಥೆಯ ಮೊದಲನೇಯ ಭಾಗದ ಹಿನ್ನೆಲೆಯಲ್ಲಿಯೇ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಜನಾಂಗಗಳು ಇವೆ. ಇಸ್ರಾಯೇಲ್ ಜನರಿಗೆ ಸಂಬಂದಿಸಿದ ಎಲ್ಲಾ ಘಟನೆಗಳೆಲ್ಲವೂ ಈ ಭೂಮಿಯಲ್ಲಿರುವ ಎಲ್ಲಾ ಜನರೊಂದಿಗೆ ಸಂಪರ್ಕವನ್ನು ಹೊಂದಿದೆ. ದೇವರು ಅಬ್ರಹಾಮನನ್ನು ಕರೆದು, "*ನೀನು ಆಶೀರ್ವಾದದ ನಿಧಿಯಾಗುವಿ, ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು* (ಆದಿ. 12:3) ಎಂದು ಹೇಳಿದನು.

ನಾಟಕದ ಎರಡನೇ ಭಾಗದಲ್ಲಿ (ಅದು ಹೊಸ ಒಡಂಬಡಿಕೆ) ಇನ್ನೊಂದು ಗುಂಪಿನ ಜನರಿದ್ದಾರೆ, ಅವರು ರಂಗಸ್ಥಳದಲ್ಲಿ ಮಧ್ಯಭಾಗದಲ್ಲಿದ್ದು, ಈ ಭಾಗದ ನಾಟಕದ ಪ್ರಾಮುಖ್ಯ ಪಾತ್ರಧಾರಿಯಾದ ಯೇಸು ಕ್ರಿಸ್ತನನ್ನು ಸುತ್ತುವರೆದಿದ್ದಾರೆ. ಪ್ರಾರಂಭದಲ್ಲಿ ಯೆಹೂದ್ಯರನ್ನೊಳಗೊಂಡ ಸಣ್ಣ ಗುಂಪು ಇತ್ತು, ಅವರೇ ಯೇಸುವಿನ ಶಿಷ್ಯರಾಗಿದ್ದರು. ಆದರೆ ಕೆಲವೇ ಸಮಯದಲ್ಲಿಯೇ ಪ್ರಪಂಚದ ನಾನಾ ದೇಶಗಳಿಂದ ಎಲ್ಲಾ ವಿಧದ ಜನರು ಸೇರ್ಪಡೆಯಾದರು, ಈ ಗುಂಪೇ ಸಭೆಯಾಯಿತು.

ಆದರೆ ಹಳೇ ಒಡಂಬಡಿಕೆಯಲ್ಲಿದ್ದ ಇಸ್ರಾಯೇಲ್ ಜನರು ಮತ್ತು ಹೊಸ ಒಡಂಬಡಿಕೆಯಲ್ಲಿದ್ದ ಕ್ರೈಸ್ತೀಯ ಸಭೆ ಎಂಬ ಈ ಪ್ರಮುಖ ಎರಡು ವರ್ಗದ ಪಾತ್ರಧಾರಿಗಳ ಸುತ್ತಲೂ ವ್ಯತ್ಯಾಸವಾದ ರಾಷ್ಟ್ರಗಳಿಂದ ಇತರೆ ಜನರ ಗುಂಪುಗಳು ಇತಿಹಾಸದಾದ್ಯಂತ ಸತ್ಯವೇದ ನಾಟಕದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರಗಳಲ್ಲಿ ನಟಿಸಿದ್ದಾರೆ.

**ವಿದ್ಯಾರ್ಥಿ:** ಹಾಗಾದರೆ ಈ ಜನರು ಯಾರಾಗಿದ್ದರು?

**ಪಂಡಿತ:** ಈ ಸತ್ಯವೇದ ನಾಟಕದಲ್ಲಿ ಅನೇಕ ಜನರು ಮತ್ತು ದೇಶಗಳು ಭಾಗವಹಿಸಿವೆ. ಆದರೆ ನಾನು ಚರಿತ್ರೆಯ ಕಾಲಕ್ಕನುಗುಣವಾಗಿ ಮತ್ತು ಸತ್ಯವೇದ ನಾಟಕಕ್ಕೆ ಸರಿಯಾಗಿ ಅವರಲ್ಲಿ ಬಹು ಪ್ರಾಮುಖ್ಯವಾಗಿರುವ ಕೆಲವರ ಕುರಿತು ಮಾತ್ರ ಸ್ವಲ್ಪ ಹೇಳುತ್ತೇನೆ.

**ಹಿತ್ತಿಯರು:** ಇವರು ಅಬ್ರಹಾಮನು ಕಾನಾನಿಗೆ ಬರುವ ಮುಂಚೆಯೇ ಕಾನಾನಿನಲ್ಲಿ ವಾಸವಾಗಿದ್ದ ಜನರಾಗಿದ್ದರು (ಆದಿಕಾಂಡ 15:18-21). ನಂತರದ ದಿನಗಳಲ್ಲಿ ಹಿತ್ತಿಯರು ಪ್ರಪಂಚದ ಪ್ರಭಲ ರಾಷ್ಟ್ರಗಳಲ್ಲಿ ಒಂದಾಗಿ, ಇಂದಿನ ಟರ್ಕಿದೇಶದವರೆಗೂ ಹರಡಿದ್ದರು. ಇವರು ತಾವು ಗೆದ್ದ ರಾಜ್ಯಗಳ ಜನರೊಂದಿಗೆ ಒಪ್ಪಂದ ಮಾಡಿಕೊಂಡರು. ಇವರು ಮಾಡಿಕೊಂಡ ಒಪ್ಪಂದ ಅಥವಾ ಒಡಂಬಡಿಕೆಯು ಇಸ್ರಾಯೇಲ್ ಜನರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಗೆ ಹೋಲುತ್ತದೆ.

**ಅಮ್ಮೋನಿಯರು:** ಅಬ್ರಹಾಮನ ಸಹೋದರನ ಮಗನಾದ ಲೋಟನ ವಂಶಸ್ಥರು. ಹಳೇ ಒಡಂಬಡಿಕೆಯ ಕಾಲದಲ್ಲಿ ಇವರು ಯಬ್ಬೋಕ್ ನದಿಪ್ರದೇಶದಲ್ಲಿ ವಾಸಿಸಿದರು. ಅವರು ಬಹಳ ಕ್ರೂರರಾಗಿದ್ದರೆಂದು ವಿವರಿಸಲಾಗಿದೆ. ತಮ್ಮ ಶತ್ರುಗಳ ಕಣ್ಣುಗಳನ್ನು ಹೊರತೆಗೆದರು (1 ಸಮುವೇಲ 11:2) ಮತ್ತು ಗರ್ಭಿಣಿ ಸ್ತ್ರೀಯರ ಹೊಟ್ಟೆ ಸೀಳಿ ಕೂಸನ್ನು ಹೊರತೆಗೆದರು (ಆಮೋಸ 1:13). ಇಸ್ರಾಯೇಲರಿಗೆ ಇಂಥವರೊಡನೆ ಸಂಬಂಧ ಬೆಳೆಸುವುದು ನಿಷೇದಿಸಲಾಗಿತ್ತು ಮತ್ತು ಇವೆರೆಡು ರಾಜ್ಯಗಳ ಮಧ್ಯದಲ್ಲಿ ಅನೇಕ ಯುದ್ಧಗಳು ಸಂಭವಿಸಿದವು. ದೇವರು ಅಮ್ಮೋನಿಯರನ್ನು ಭೂಮಿಯಿಂದ ಸಂಪೂರ್ಣವಾಗಿ ಅಳಿಸಿ

ಹಾಕಿದನು. ಯಾಕೆಂದರೆ ಇವರು ಇಸ್ರಾಯೇಲ್ಯರನ್ನು ಹಾಸ್ಯಮಾಡಿದರು ಮತ್ತು ಅಣಕಿಸಿದರು (ಚೆಫನ್ಯ 2:8-10). ಇದು ಕ್ರಿಸ್ತನ ನಂತರದ 200 ವರ್ಷಗಳಲ್ಲಿ ನಡೆಯಿತು.

**ಮೋವಾಬ್ಯರು:** ಇವರು ಅಮ್ಮೋನಿಯರಿಗೆ ಬಹಳ ಹತ್ತಿರದ ಸಂಬಂಧಿಗಳಾಗಿದ್ದರು ಮತ್ತು ಇವರು ಸಹ ಲೋಟನ ಸಂತತಿಯವರಾಗಿದ್ದರು. ಅಂದರೆ ಇವರು ಇಸ್ರಾಯೇಲ್ಯರಿಗೂ ಸಹ ಸಂಬಂಧಿಗಳಾಗಿದ್ದರು. ಅವರ ದೇಶವು ಯೊರ್ದನ್ ನದಿಯ ಪೂರ್ವಕ್ಕೂ ಮತ್ತು ಅಮ್ಮೋನ್ ದೇಶದ ದಕ್ಷಿಣಕ್ಕೂ ಇತ್ತು. ಇದೇ ಪ್ರಾಂತ್ಯದಲ್ಲಿ ಮೋಶೆಯು ಇಸ್ರಾಯೇಲ್ಯರಿಗೆ ತನ್ನ ಬೀಳ್ಕೊಡಿಗೆ ಮಾತುಗಳನ್ನಾಡಿದನು (ಧರ್ಮೋ. 1:5). ಸೌಲನ ಕಾಲದಲ್ಲಿ ಮೋವಾಬ್ಯರಿಗೂ ಮತ್ತು ಇಸ್ರಾಯೇಲ್ಯರಿಗೂ ಬಹಳ ಯುದ್ಧಗಳು ಸಂಭವಿಸಿದವು. ನಂತರದಲ್ಲಿ ಅರಸನಾದ ದಾವೀದನು ಮೋವಾಬನ್ನು ಗೆದ್ದುಕೊಂಡನು.

**ಎದೋಮ್ಯರು:** ಇವರು ಇಸ್ರಾಯೇಲಿನ ಮೂಲ ಪಿತೃವಾದ ಯಾಕೋಬನ ಸಹೋದರನಾದ ಏಸಾವನ ಸಂತತಿಯವರು. ಇವರು ಮೋವಾಬ್ಯದ ದಕ್ಷಿಣಕ್ಕೂ ಮತ್ತು ಮೃತ್ಯು ಸಮುದ್ರದ ದಕ್ಷಿಣಕ್ಕೂ ವಾಸಿಸಿದರು. ಐಗುಪ್ತದ ಸೆರೆಯಿಂದ ಹಿಂತಿರುಗಿ ಬಂದ ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಎದೋಮಿನ ಮೂಲಕ ವಾಗ್ದಾನದ ದೇಶಕ್ಕೆ ಪ್ರಯಾಣಿಸಲು ಅನುಮತಿ ಇರಲಿಲ್ಲ. ಬಹಳ ಸಮಯದ ನಂತರ ಅರಸನಾದ ದಾವೀದನು ಮತ್ತು ಸೊಲೊಮೋನರು ಎದೋಮ್ಯರನ್ನು ಗೆದ್ದುಕೊಂಡರು. ಇಸ್ರಾಯೇಲ್ಯರ ರಾಜ್ಯವು ವಿಭಜಿಲ್ಪಟ್ಟ ಸಮಯದಲ್ಲಿ ಯೆಹೂದಾ ಮತ್ತು ಎದೋಮ್ಯಗಳ ಮಧ್ಯ ಬಹಳ ಯುದ್ಧಗಳು ಸಂಭವಿಸಿದವು. ನಂತರ ಎದೋಮ್ಯರು ಉತ್ತರಕ್ಕೆ ಪ್ರಯಾಣಿಸಿ ಯೆಹೂದದ ದಕ್ಷಿಣ ಭಾಗದೊಳಕ್ಕೆ ಬರಬೇಕಾಯಿತು. ಅಲ್ಲಿ ಅವರನ್ನು ಯೆಹೂದ್ಯರ ಧರ್ಮಕ್ಕೆ ಮತಾಂತರಿಸಲು ಒತ್ತಾಯಿಸಲ್ಪಟ್ಟರು. ಯೇಸುವಿನ ಜನನದ ಸಮಯದಲ್ಲಿದ್ದ ಪ್ರಸಿದ್ಧ ಅರಸನಾದ ಹೆರೋದನು ಈ ಜನಾಂಗಕ್ಕೆ ಸೇರಿದವನು.

**ಐಗುಪ್ತ್ಯರು:** ಇವರ ಇತಿಹಾಸವು ಕ್ರಿ.ಪೂ. 3000 ವರ್ಷಕ್ಕಿಂತ ಮುಂಚಿನದು. ಅನೇಕಸಾರಿ ಐಗುಪ್ತ್ಯರು ಸತ್ಯವೇದ ರಂಗಭೂಮಿಯನ್ನು ಪ್ರವೇಶಿಸಿದರು. ಅಬ್ರಹಾಮ ಐಗುಪ್ತಕ್ಕೆ ಹೋಗಿ ಅಲ್ಲಿ ಸ್ವಲ್ಪ ಸಮಯ ಇದ್ದನು. ಯೋಸೇಫನು ಸೆರೆಯಾಗಿ ಐಗುಪ್ತಕ್ಕೆ ಮಾರಲ್ಪಟ್ಟನು. ನಂತರ ಆ ದೇಶದಲ್ಲಿ ಶಕ್ತಿಶಾಲಿ ವ್ಯಕ್ತಿಯಾದನು ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಐಗುಪ್ತಕ್ಕೆ ಬರುವಂತೆ ಮಾಡಿ, ಬರಗಾಲದ ಬವಣೆಯಿಂದ ರಕ್ಷಿಸಿದನು. ಬಹುಶಃ ಕ್ರಿ.ಪೂ. 1800 ರಲ್ಲಿ ನಡೆದಿರಬಹುದು. ನೂರಾರು ವರ್ಷಗಳ ನಂತರ ಇಸ್ರಾಯೇಲ್ಯರು ಐಗುಪ್ತರ ಗುಲಾಮರಾದರು. ಆದರೆ ದೇವರು ಇಸ್ರಾಯೇಲ್ಯರನ್ನು ದಾಸತ್ವದಿಂದ ಬಿಡಿಸಿ, ವಾಗ್ದಾನದ ದೇಶಕ್ಕೆ ಕರೆತರಲು ಮೋಶೆಯನ್ನು ಕಳುಹಿಸಿಕೊಟ್ಟರು. ಸ್ವಲ್ಪ ಅವಧಿಯ ನಂತರ ಕ್ರಿ.ಪೂ. 600 ಕ್ಕಿಂತ ಮುಂಚೆ ಐಗುಪ್ತ್ಯರೊಂದಿಗೆ ನಡೆದ ಯುದ್ಧದಲ್ಲಿ ಯೆಹೂದದ ಅರಸನಾದ ಯೋಷೀಯನು ಮಡಿದನು.

**ಫಿಲಿಷ್ಟಿಯರು:** ಇವರು ಕ್ರಿ.ಪೂ. 1200 ಸುಮಾರಿಗೆ ಮೆಡಿಟರೇನಿಯನ್ ಸಮುದ್ರಪೂರ್ವ ತೀರಗಳನ್ನು ಗೆದ್ದುಕೊಂಡು, ಕಾನಾನ್ಯದ ದಕ್ಷಿಣ ಕರಾವಳಿಯಲ್ಲಿ ವಾಸವಾಗಿದ್ದರು. ಅವರ ದೇಶವು ಅಷ್ದೋದ್, ಎಕ್ರೋನ್, ಗಾಜಾ, ಗತೂರ್, ಅಷ್ಕೆಲೋನ್ ಗಳೆಂಬ ಐದು ಪ್ರಭಲ ಪಟ್ಟಣಗಳನ್ನು ಒಳಗೊಂಡಿತ್ತು. ನ್ಯಾಯಸ್ಥಾಪಕರ ಕಾಲದಿಂದ ಅರಸನಾದ ದಾವೀದನ ಕಾಲದವರೆಗೆ ಫಿಲಿಷ್ಟಿಯರಿಗೂ ಮತ್ತು ಇಸ್ರಾಯೇಲ್ಯರಿಗೂ ನಡುವೆ ಸತತ ಯುದ್ಧಗಳು ಸಂಭವಿಸಿದವು. ಇವುಗಳಲ್ಲಿ ಪ್ರಸಿದ್ಧವಾದ ಕಥೆಯೆಂದರೆ ಯುವಕನಾದ ದಾವೀದನು ಫಿಲಿಷ್ಟಿಯರ ಗೋಲಿಯಾತನೆಂಬ ಒಬ್ಬ

ರಣಶೂರನನ್ನು ಸರ್ವಶಕ್ತನಾದ ದೇವರ ಹೆಸರಿನಲ್ಲಿ ಸೋಲಿಸಿ ಯುದ್ಧದಲ್ಲಿ ಜಯಶಾಲಿಯಾದನು (1 ಸಮುವೇಲ 17:45).

**ಅಶ್ಶೂರ್ಯ:** ಇಂದಿನ ಇರಾಕಿನ ಉತ್ತರ ಭಾಗದಲ್ಲಿತ್ತು. ಕ್ರಿ.ಪೂ. 1500 ರ ಸುಮಾರಿಗೆ ಅಶ್ಶೂರ್ಯರು ಮತ್ತು ಐಗುಪ್ತಗಳೆರಡು ಪ್ರಪಂಚದಲ್ಲಿಯೇ ಬಲಿಷ್ಠರಾಷ್ಟ್ರಗಳಾಗಿ ಬೆಳೆದವು. ಕ್ರಿ.ಪೂ. 722 ಅಶ್ಶೂರ್ಯರು ಉತ್ತರದ ಇಸ್ರಾಯೇಲನ್ನು ಗೆದ್ದುಕೊಂಡು, ಜನರನ್ನು ಗಡಿಪಾರು ಮಾಡಿದರು (2 ಅರಸುಗಳು 18:9-11).

**ಬಾಬೆಲ್:** ಇದರ ಇತಿಹಾಸ ಕ್ರಿ.ಪೂ. 2300 ದಷ್ಟು ಹಳೆಯದು. ಕ್ರಿ.ಪೂ. 600 ರ ಸುಮಾರಿಗೆ ಇದು ಎರಡು ಸಾರಿ ಪ್ರಪಂಚದ ಬಲಿಷ್ಠರಾಷ್ಟ್ರವಾಗಿ ಕಾರ್ಯಮಾಡಿತ್ತು. ಇದನ್ನು ನಾವು ಹಳೇ ಒಡಂಬಡಿಕೆಯಲ್ಲಿ ಓದುತ್ತೇವೆ. ಅರಸನಾದ ನೆಬೂಕದ್ನೆಚ್ಚರನು ಕೊನೆಯ ಬಾರಿ ಕ್ರಿ.ಪೂ. 586 ರಲ್ಲಿ ದಕ್ಷಿಣದ ಯೆಹೂದ ರಾಜ್ಯವನ್ನು ಗೆದ್ದುಕೊಂಡು ಅರಸನಾದ ಸೊಲೊಮೋನನು ಕಟ್ಟಿಸಿದ್ದ ಯೆರೂಸಲೇಮ್ ದೇವಾಲಯವನ್ನು ಹಾಳುಮಾಡಿ ಜನರನ್ನು ಬಾಬೆಲಿಗೆ ಸೆರೆಯಾಳುಗಳನ್ನಾಗಿ ತೆಗೆದುಕೊಂಡು ಹೋದನು.

**ಪಾರಸಿಯರು:** ಪಾರಸಿಯ ಅರಸನಾದ ಕೋರೆಷನು ಕ್ರಿ.ಪೂ. 539 ರಲ್ಲಿ ಬಾಬೆಲನ್ನು ಗೆದ್ದುಕೊಳ್ಳುವುದರ ಮೂಲಕ ಪ್ರಪಂಚದ ಶಕ್ತಿಶಾಲಿ ರಾಷ್ಟ್ರವಾಗಿ ಬೆಳಸಿದನು (ಎಜ್ರ 1:1). ನಂತರದಲ್ಲಿ ಹಳೇ ಒಡಂಬಡಿಕೆಯ ಕಾಲದ ಅನೇಕ ಪ್ರದೇಶಗಳನ್ನು ಗೆಲ್ಲಲು ಮುಂದಾದನು. ಪಾರಸಿಯರು ವಾಸಮಾಡಿದ ಮೂಲಸ್ಥಳವು ಇಂದಿನ ಇರಾನ್ ದೇಶವಾಗಿದೆ. ಇಸ್ರಾಯೇಲ್ಯರು ಬಾಬೆಲ್ ದಾಸತ್ವದಿಂದ ಪ್ಯಾಲೆಸ್ತೇನಿನ ದೇಶಕ್ಕೆ ಹಿಂದಿರುಗುವಂತೆ ಪಾರಸಿಯ ಅರಸ ಕೋರೆಷನು ಅವಕಾಶ ಮಾಡಿದನು.

**ಗ್ರೀಕರು:** ಕ್ರಿ.ಪೂ. 340 ರ ಸುಮಾರಿಗೆ ಗ್ರೀಕರು ಪ್ರಸಿದ್ಧ ಅರಸನನ್ನು ಪಡೆದರು. ಆತನ ಹೆಸರು ಅಲೇಗ್ಸಾಂಡರ್, ಈತನು ಮಹಾಶಯನೆಂದು ಕರೆಯಲ್ಪಟ್ಟನು. ಇವನು ಗ್ರೀಕ್ ದೇಶದಿಂದ ಭಾರತದವರೆಗೆ ಇರುವ ಎಲ್ಲಾ ದೇಶಗಳನ್ನೂ ಗೆದ್ದಿರುವುದಲ್ಲದೆ, ಗ್ರೀಕ್ ಸಂಸ್ಕೃತಿ ಮತ್ತು ಗ್ರೀಕ್ ಭಾಷೆಯನ್ನು ವಿಶ್ವದಾದ್ಯಂತ ಹರಡಿಸಿದನು. ಇದು ಪ್ಯಾಲೆಸ್ತೇನ್ ಮೇಲೂ ಮತ್ತು ಇತರೆ ಸುತ್ತಮುತ್ತಲಿನ ದೇಶಗಳ ಮೇಲೆ ಹೆಚ್ಚು ಪ್ರಭಾವ ಭೀರಿತ್ತು. ಹಳೇ ಒಡಂಬಡಿಕೆಯ ಎಲ್ಲಾ ಪುಸ್ತಕಗಳನ್ನು ಗ್ರೀಕ್ ಭಾಷೆಯಲ್ಲಿ ತರ್ಜುಮೆ ಮಾಡಲಾಯಿತು ಮತ್ತು ಹೊಸ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟವು. ರಾಜಕೀಯ ಅಧಿಕಾರವು ರೋಮನ್ನರ ಕೈಯಲ್ಲಿದ್ದರೂ ಗ್ರೀಕ್ ಸಂಸ್ಕೃತಿ ಮತ್ತು ಭಾಷೆಗಳು ಹೊಸ ಒಡಂಬಡಿಕೆಯ ಕಾಲದ ಪ್ರಪಂಚಕ್ಕೆ ತನ್ನದೆ ಆದ ಪ್ರಭುತ್ವವನ್ನು ಹೊಂದಿತ್ತು.

**ರೋಮನ್ನರು:** ಸತ್ಯವೇದ ಕಥೆಯಲ್ಲಿ ಬರುವ ಕಡೆಯ ಸಾಮ್ರಾಜ್ಯವೆಂದರೆ ರೋಮನ್ ಸಾಮ್ರಾಜ್ಯವಾಗಿದೆ. ಕ್ರಿ.ಪೂ. 63 ರಲ್ಲಿ ರೋಮನ್ನರು ಪ್ಯಾಲೆಸ್ತೇನನ್ನು ಗೆದ್ದುಕೊಂಡರು. ಯೇಸುವಿನ ಜನನದ ಸಮಯದಲ್ಲಿ ಈ ಸಾಮ್ರಾಜ್ಯವು ಮೆಡಿಟರೇನಿಯನ್ ಸಮುದ್ರದ ಎಲ್ಲಾ ಭಾಗಗಳಿಗೂ ವ್ಯಾಪಿಸಿತ್ತು ಮತ್ತು ಉತ್ತರಕ್ಕೆ ಯೂರೋಪಿನ ಕೇಂದ್ರ ಭಾಗಗಳಿಗೂ ವ್ಯಾಪಿಸಿತು. ಅನೇಕ ರೋಮನ್ನರ ಚಕ್ರವರ್ತಿಗಳು ಹೊಸ ಒಡಂಬಡಿಕೆ ಕಥೆಗೆ ಸಂಬಂಧಿಸಿದ್ದಾರೆ. ಯೇಸು ಕ್ರಿಸ್ತನು ಔಗುಸ್ಥಕೈಸರನ ಆಳ್ವಿಕೆ ಸಮಯದಲ್ಲಿ ಜನಿಸಿದನು (ಲೂಕ 2:1). ತಿಬೇರಿಯನ ಆಳ್ವಿಕೆ ಸಮಯದಲ್ಲಿ ಯೇಸುವಿನ ಸೇವೆ ಮತ್ತು ಆತನ ಶಿಲುಬೆಯ ಮರಣವು ಸಂಭವಿಸಿದವು (ಲೂಕ 3:1). ಚಕ್ರವರ್ತಿಗಳಾದ ಕ್ಲೌದಿಯ ಮತ್ತು ನೀರೋನ ಆಳ್ವಿಕೆ ಸಮಯದಲ್ಲಿ ಅಪೊಸ್ತಲನಾದ ಪೌಲನು ಸೇವೆಯ ಪ್ರಯಾಣಗಳನ್ನು ಕೈಗೊಂಡನು (ಅಪೊ.ಕೃತ್ಯ. 18:2). ರೋಮನ್ನರ

ಸೇನಾಧಿಪತಿಯಾದ ತೀತನು ಮುಂದೆ ರೋಮನ್ನರ ಚಕ್ರವರ್ತಿಯಾಗಿ ಕ್ರಿ.ಶ. 70 ರಲ್ಲಿ ಯೆರೂಸಲೇಮನ್ನು ಕೊಳ್ಳೆ ಹೊಡೆದು ದೇವಾಲಯವನ್ನು ನಾಶಪಡಿಸಿದನು. ಸುಮಾರು ಕ್ರಿ.ಶ. 90 ರಲ್ಲಿ ಚಕ್ರವರ್ತಿಯಾದ ಡೊಮಿತಿಯನ ಆಳ್ವಿಕೆಯಲ್ಲಿ ಉಂಟಾದ ಹಿಂಸೆಗಳ ಸಮಯದಲ್ಲಿ ಪ್ರಕಟಣೆ ಪುಸ್ತಕ ಬರೆಯಲ್ಪಟ್ಟಿದೆ ಎಂದು ಸತ್ಯವೇದದ ಅನೇಕ ತಜ್ಞರು ಅಭಿಪ್ರಾಯಪಡುತ್ತಾರೆ.

**ವಿದ್ಯಾರ್ಥಿ:** ಪಂಡಿತರೇ ಬಹಳ ವ್ಯಕ್ತಿಗಳನ್ನು ನೆನಪಿಡಬೇಕಾಗಿದೆ ! ಖಂಡಿತವಾಗಿ ಕೆಲವರ ಕುರಿತು ಈ ಮೊದಲೇ ತಿಳಿದಿರುವೆ. ಆದರೆ ನನಗೆ ಬಹಳ ವ್ಯಕ್ತಿಗಳು ಹೊಸಬರಾಗಿದ್ದಾರೆ. ನಿಜವಾಗಿಯೂ ಈ ಎಲ್ಲಾ ಜನರ ಹೆಸರು, ಅವರ ದೇಶಗಳು, ಇತಿಹಾಸದಲ್ಲಿ ಅವರ ಸ್ಥಾನಗಳು, ದೇವಜನರೊಂದಿಗೆ ಇದ್ದ ಅವರ ಸಂಪರ್ಕಗಳನ್ನು ಕುರಿತು ನಾನು ತಿಳಿದುಕೊಳ್ಳಬೇಕೋ?

**ಪಂಡಿತ:** ಹಾಗಾದರೆ ಈ ಮಾಹಿತಿಯು ನಿನಗೆ ಗಲಿಬಿಲಿಗೊಳಿಸುತ್ತಿದ್ದೇಯಾ? ಆದರೆ ನಾನು ನಿನಗೆ ಕೆಲವು ಪ್ರಾಮುಖ್ಯವಾದ ಮಾಹಿತಿಗಳನ್ನು ಮಾತ್ರ ನೀಡಿರುವೆ. ಸತ್ಯವೇದದಲ್ಲಿ ಇನ್ನೂ ಅನೇಕ ಜನರ ಕುರಿತು ತಿಳಿಸಲ್ಪಟ್ಟಿದೆ. ಆದರೆ ಈ ಎಲ್ಲಾ ಮಾಹಿತಿಗಳನ್ನು ತಿಳಿದುಕೊಳ್ಳುವುದು ಪ್ರಾಮುಖ್ಯವಲ್ಲ ಅಥವಾ ಸಮಂಜಸವಲ್ಲ ಆದರೆ ಇವುಗಳನ್ನು ತಿಳಿದುಕೊಳ್ಳುವುದರಿಂದ ಸತ್ಯವೇದ ಕಥೆಗಳನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ದೇವರು ಇತಿಹಾಸದಾದ್ಯಂತ ರಾಷ್ಟ್ರಗಳೊಂದಿಗೆ ಮಾತನಾಡಿದ್ದಾನೆ ಮತ್ತು ರಾಷ್ಟ್ರಗಳನ್ನು ಉಪಯೋಗಿಸಿದ್ದಾನೆ. ಇವುಗಳ ಮೂಲಕ ದೇವರು ನಮ್ಮ ಸಂಗಡ ಮಾತನಾಡುತ್ತಾನೆ. ಆದ್ದರಿಂದ ಅಪೊಸ್ತಲನಾದ ಪೌಲನು ಹೀಗೆ ಬರೆಯುತ್ತಾನೆ, "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದಿವೆ" (1 ಕೋರಿಂಥ 10:11).

## ಪ್ರಶ್ನೆಗಳು

1. ಸತ್ಯವೇದ ನಾಟಕದಲ್ಲಿ ಅತೀ ಪ್ರಾಮುಖ್ಯ ಪಾತ್ರಧಾರಿ ಯಾರು? ಯಾಕೆ ವಿವರಿಸಿರಿ !
2. ಸತ್ಯವೇದ ನಾಟಕದ ಮೊದಲನೇಯ ಭಾಗದಲ್ಲಿ (ಹಳೇ ಒಡಂಬಡಿಕೆ) ಬರುವ ಅತೀ ಪ್ರಾಮುಖ್ಯತೆಯುಳ್ಳ ಜನರು ಯಾರು?
3. ಸತ್ಯವೇದ ನಾಟಕದ ಎರಡನೇಯ ಭಾಗದಲ್ಲಿ ಬರುವ (ಹೊಸ ಒಡಂಬಡಿಕೆ) ಅತೀ ಪ್ರಾಮುಖ್ಯತೆಯುಳ್ಳ ಜನರು ಯಾರು?
4. ಹಿತ್ತಿಯರಲ್ಲಿರುವ ಕನಿಷ್ಠ ಪಕ್ಷ ಎರಡು ಆಸಕ್ತಿಯುಳ್ಳ ಸಂಗತಿಗಳನ್ನು ತಿಳಿಸಿರಿ !
5. ಅಮ್ಮೋನಿಯರು ಎಂತಹ ಜನರಾಗಿದ್ದರು? ಕಡೆಯಲ್ಲಿ ಅವರಿಗೆ ಏನು ಸಂಭವಿಸಿತು?
6. ಮೋವಾಬ್ಯರು ಇಸ್ರಾಯೇಲ್ ಜನರೊಂದಿಗೂ ಮತ್ತು ಅಮ್ಮೋನಿಯರೊಂದಿಗೆ ಹೇಗೆ ಸಂಬಂಧವನ್ನು ಹೊಂದಿದ್ದರು?
7. ಎದೋಮ್ಯರಿಂದ ಜನ್ಮತಾಳಿದ ಪ್ರಸಿದ್ಧ ಅರಸನು ಯಾರು?
8. ಅಮ್ಮೋನಿಯರ, ಮೋವಾಬ್ಯರ ಮತ್ತು ಎದೋಮ್ಯರ ದೇಶಗಳು ಯಾವ ಸ್ಥಳಗಳಲ್ಲಿ ಇದ್ದವು?
9. ಐಗುಪ್ತದೊಂದಿಗೆ ಸಂಪರ್ಕವಿಟ್ಟುಕೊಂಡ ಇಸ್ರಾಯೇಲಿನ ನಾಲ್ಕು ನಾಯಕರನ್ನು ತಿಳಿಸಿರಿ ! ಮತ್ತು ಅವರ ಸಂಪರ್ಕ ಯಾವುದಾಗಿತ್ತು?
10. ಫಿಲಿಷ್ಟಿಯರ ಕುರಿತು ಕನಿಷ್ಠ ಮೂರು ಆಸಕ್ತಿಯುಳ್ಳ ಸಂಗತಿಗಳನ್ನು ತಿಳಿಸಿರಿ !
11. ಇಸ್ರಾಯೇಲಿನ ಉತ್ತರ ರಾಜ್ಯಕ್ಕೂ ಮತ್ತು ಅಶ್ಶೂರ್ಯರ ಮಧ್ಯದಲ್ಲಿದ್ದ ಸಂಬಂಧವೇನು?

12. ಯೆಹೂದದ ದಕ್ಷಿಣ ರಾಜ್ಯಕ್ಕೂ ಮತ್ತು ಬಾಬೆಲ್ ರಾಜ್ಯದ ನಡುವಿನ ಸಂಬಂಧ ಏನು?
13. ಬಾಬೆಲಿನಲ್ಲಿ ಸೆರೆಯಾಳುಗಳಾಗಿದ್ದ ಇಸ್ರಾಯೇಲ್ಯರಿಗೆ ಪಾರಸಿಯ ಅರಸನಾದ ಕೋರೆಷನು ಹೇಗೆ ಒಳ್ಳೆಯವನಾದನು?
14. ಗ್ರೀಕರ ಕುರಿತು ಕನಿಷ್ಠ ಐದು ಪ್ರಾಮುಖ್ಯ ಸಂಗತಿಗಳನ್ನು ತಿಳಿಸಿರಿ !
15. ಕ್ರಿ.ಪೂ. 63 ರಲ್ಲಿ ಪ್ಯಾಲೆಸ್ತೀನದವರಿಗೆ ಏನು ಸಂಭವಿಸಿತ್ತು?
16. ಸತ್ಯವೇದ ನಾಟಕದೊಂದಿಗೆ ನಿಕಟ ಸಂಬಂಧವಿರುವ ಕೆಲವು ರೋಮನ್ ಚಕ್ರವರ್ತಿಗಳು ಯಾರು? ಮತ್ತು ಸತ್ಯವೇದದೊಂದಿಗೆ ಅವರಿಗಿರುವ ಸಂಪರ್ಕವೇನು?
17. ಸತ್ಯವೇದ ನಾಟಕದಲ್ಲಿರುವ ಪಾತ್ರಧಾರಿಗಳ, ದೇಶಗಳ ಮತ್ತು ಸಾಮ್ರಾಜ್ಯಗಳ ಕುರಿತು ಮಾಹಿತಿಗಳನ್ನು ತಿಳಿದುಕೊಳ್ಳುವುದರಿಂದ ಸತ್ಯವೇದ ಓದಲು ನಮಗೆ ಹೇಗೆ ಸಹಾಯವಾಗುತ್ತದೆ?

## ನಾಟಕದ ಮೊದಲ ಅಂಕ (ಹಳೇ ಒಡಂಬಡಿಕೆ)

**ವಿದ್ಯಾರ್ಥಿ:** ಪಂಡಿತರೇ, ಸತ್ಯವೇದ ನಾಟಕದ ಕುರಿತು ನಿಮ್ಮ ಮುಂದಿನ ಪಾಠ ಯಾವುದು? ನೀವು ಪೀಠಿಕೆಯ ನಂತರ ನನಗೆ ರಂಗಭೂಮಿಯ ಬಗ್ಗೆ ತಿಳಿಸಿದ್ದೀರಿ. ಅದು ಸತ್ಯವೇದ ನಾಟಕ ನಡೆಯುವ ಭೌಗೋಳಿಕ ಪ್ರದೇಶಕ್ಕಿಂತ ವ್ಯತ್ಯಾಸವಾಗಿದೆ. ನಂತರದಲ್ಲಿ ನೀವು ಸತ್ಯವೇದ ನಾಟಕದಲ್ಲಿ ಬರುವ ಪ್ರಾಮುಖ್ಯ ಪಾತ್ರಧಾರಿಗಳು – ಅಂದರೆ ವ್ಯತ್ಯಾಸವಾದ ವ್ಯಕ್ತಿಗಳು ಮತ್ತು ರಾಷ್ಟ್ರಗಳ ಕುರಿತು ನನಗೆ ತಿಳಿಸಿದ್ದೀರಿ. ಆದರೆ, ಖಂಡಿತವಾಗಿ ದೇವರು ಸಂಪೂರ್ಣವಾದ ಕಥೆಗೆ ಕೇಂದ್ರವ್ಯಕ್ತಿಯಾಗಿದ್ದಾನೆ ! ಹಾಗಾದರೆ ಮುಂದೇನು?

**ಪಂಡಿತ:** ಈಗ ನಾವು ನಾಟಕಕ್ಕೆ ಬಂದಿದ್ದೇವೆ – ಅದು ಕಥೆಯಾಗಿದೆ. ಈ ನಾಟಕವನ್ನು ನಾವು ಎರಡು ಅಂಕಗಳನ್ನಾಗಿ ವಿಂಗಡಿಸಬಹುದಾಗಿದೆ. ಪ್ರತಿಯೊಂದು ಅಂಕಗಳು ಇತಿಹಾಸದ ಬೇರೆ ಬೇರೆ ಅವಧಿಯಲ್ಲಿ ನಡೆದ ದೃಶ್ಯಗಳನ್ನೊಳಗೊಂಡಿವೆ. ಅಂತಹ ದೃಶ್ಯಗಳು ಅನೇಕವಿದೆ. ಆದರೆ ಅವುಗಳನ್ನು ನೀನು ಆದಷ್ಟು ಬಾಯಿಪಾಠ ಮಾಡುವುದಾದರೆ, ನೀನು ಸತ್ಯವೇದವನ್ನು ಓದುವಾಗ ನಿಜವಾಗಲೂ ಅವುಗಳು ನಿನಗೆ ಉಪಯುಕ್ತಕರವಾಗಿರುವುದನ್ನು ನೀನು ಕಂಡುಕೊಳ್ಳುವಿ.

**ವಿದ್ಯಾರ್ಥಿ:** ಹಾಗಾದರೆ ಎಷ್ಟು ಅಂಕಗಳು ಮತ್ತು ದೃಶ್ಯಗಳಿವೆ?

**ಪಂಡಿತ:** ನಾನು ಸತ್ಯವೇದದ ಕಥೆಯನ್ನು ಎರಡು ಅಂಕಗಳಲ್ಲಿ ನಿನಗೆ ತಿಳಿಸಲು ಬಯಸುತ್ತೇನೆ. ಮೊದಲನೇಯ ಅಂಕವು ಹತ್ತು ದೃಶ್ಯಗಳನ್ನೊಳಗೊಂಡಿದೆ ಮತ್ತು ಎರಡನೇಯ ಅಂಕವು ನಾಲ್ಕು ದೃಶ್ಯಗಳನ್ನೊಳಗೊಂಡಿದೆ. ಪ್ರತಿಯೊಂದು ದೃಶ್ಯಗಳು ಇತಿಹಾಸದ ಕಾಲಾವಧಿಯಾಗಿರುತ್ತದೆ. ಮೊದಲನೇಯ ಅಂಕವು ಹಳೇ ಒಡಂಬಡಿಕೆಯ ಸಮಯದಲ್ಲಿ ಸಂಭವಿಸಿತು. ಎರಡನೇಯ ಅಂಕವು ಸತ್ಯವೇದದಲ್ಲಿ ಕಂಡು ಬರದ ದೃಶ್ಯದಿಂದ ಪ್ರಾರಂಭಗೊಳ್ಳುತ್ತದೆ. ಅದು ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಅವಧಿಯಾಗಿದೆ. ನಂತರದಲ್ಲಿ ಈ ಅಂಕವು ಹೊಸ ಒಡಂಬಡಿಕೆಯ ಅವಧಿಗೆ ಸಂಬಂಧಪಟ್ಟ ಮೂರು ದೃಶ್ಯಗಳನ್ನು ಅನುಸರಿಸುತ್ತದೆ. ಇದನ್ನು ನಾನು ತಿಳಿಸುತ್ತಿದ್ದಂತೆ ಈ ಅವಧಿಯ ಕುರಿತು ಮಾಹಿತಿಗಳನ್ನೊಳಗೊಂಡ ಸತ್ಯವೇದದಲ್ಲಿರುವ ಪುಸ್ತಕಗಳ ಆಧಾರ ವಿಷಯಗಳನ್ನು ಸಹ ನಿನಗೆ ತಿಳಿಸಿಕೊಡುತ್ತೇನೆ.

**ವಿದ್ಯಾರ್ಥಿ:** ಸರಿ ಪಂಡಿತರೇ, ನಾನು ಸಿದ್ಧನಿರುವೆ ! ದಯವಿಟ್ಟು ಮುಂದುವರಿಸಿರಿ ! ಆದರೆ ಹಳೇ ಒಡಂಬಡಿಕೆಯ ಕಾಲಗಳನ್ನು ತಿಳಿಸಿದ ಮೇಲೆ ನಾವು ಸ್ವಲ್ಪ ವಿರಾಮ ತೆಗೆದುಕೊಳ್ಳುವುದು ಒಳ್ಳೆಯದು !

**ಪಂಡಿತ:** ಖಂಡಿತವಾಗಿ ಹಾಗೆಯೇ ಮಾಡೋಣ !

# ಅಂಕ I. ದೃಶ್ಯ 1: ಪ್ರಾರಂಭ (ಸೃಷ್ಟಿಯಿಂದ ಸುಮಾರು ಕ್ರಿ.ಪೂ. 2000 ರವರೆಗೆ)

ಈ ದೃಶ್ಯವು ಸೃಷ್ಟಿಯಿಂದ ಅಬ್ರಹಾಮನ ಕಾಲದವರೆಗೂ ಒಳಗೊಂಡಿದೆ. ಈ ಅವಧಿಯಲ್ಲಿ ಜಗತ್ತಿನ ಸೃಷ್ಟಿ, ಮನುಷ್ಯನ ಪತನ, ಜಲಪ್ರಳಯ, ಬಾಬೆಲಿನ ಗೋಪುರದ ಬಗ್ಗೆ ನಾವು ನೋಡುತ್ತೇವೆ. ದೇವರು ಮೊದಲು ಆದಾಮ ಮತ್ತು ನೋಹರಂತಹ ಮನುಷ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಈಗಾಗಲೇ ಅಂಕದಲ್ಲಿ ನಾವು ನೋಡಿದ್ದೇವೆ. ಈ ಅವಧಿಯಲ್ಲಿ ಇಸ್ರಾಯೇಲ್ಯರು ಇನ್ನೂ ರಂಗಭೂಮಿಯನ್ನು ಪ್ರವೇಶಿಸಿದ್ದಿಲ್ಲ. ಅದಕ್ಕೆ ಬದಲಾಗಿ ದೇವರ ಗಮನ ಎಲ್ಲಾ ಮನುಷ್ಯರ ಮೇಲಿತ್ತು.

ದೇವರು ಭೂಮಿ, ಆಕಾಶವನ್ನು ಹಾಗೂ ಸಮಸ್ತವನ್ನು ಸೃಷ್ಟಿಸಿದ ಮೇಲೆ ಮನುಷ್ಯನನ್ನು ತನ್ನ ಸೃಷ್ಟಿಯ ಕಿರೀಟವನ್ನಾಗಿ ಹೇಗೆ ಮಾಡಿದನೆಂಬುದರ ಕುರಿತು ನಾವು ಓದುತ್ತೇವೆ. ಆದರೆ ಮನುಷ್ಯನು ತನ್ನ ಸೃಷ್ಟಿಕರ್ತನಾದ ದೇವರ ವಿರುದ್ಧ ಹೇಗೆ ತಿರುಗಿಕೊಂಡನೆಂಬುದನ್ನು ಸಹ ನಾವು ನೋಡುತ್ತೇವೆ. ಪ್ರಮುಖ ವ್ಯಕ್ತಿಗಳಾದ ಆದಾಮ, ಹವ್ವ, ಕಾಯಿನ, ಹೇಬೆಲ, ಸೇತ, ಹನೋಕ, ನೋಹ, ಶೇಮ್, ಹಾಮ್, ಯೆಫೆತರ ಕುರಿತು ನಾವು ಓದುತ್ತೇವೆ. ಹಾಗೂ ಇನ್ನೂ ಅನೇಕ ಪ್ರಾಮುಖ್ಯವಾದ ಘಟನೆಗಳಾದ ಸೃಷ್ಟಿ ಮತ್ತು ಪತನ, ಮೊದಲ ಕೊಲೆ, ಜಲಪ್ರಳಯ ಮತ್ತು ಗರ್ವದ ಜನರು ಬಾಬೆಲ್ ಗೋಪುರವನ್ನು ಕಟ್ಟಿದ್ದನ್ನು ಸಹ ನಾವು ನೋಡುತ್ತೇವೆ.

ಆದಿಕಾಂಡದ ಮೊದಲ 11 ಅಧ್ಯಾಯಗಳು ಸಂಪೂರ್ಣ ಸತ್ಯವೇದಕ್ಕೆ ಒಂದು ಪೀಠಿಕೆಯಾಗಿದೆ. ಈ ಭಾಗದಲ್ಲಿ ಸೃಷ್ಟಿ, ಪಾಪ, ನ್ಯಾಯತೀರ್ಪು, ರಕ್ಷಣೆ ಮತ್ತು ಪುನರ್ ಸ್ಥಾಪನೆಯಂತಹ ಸತ್ಯವೇದದ ಸಂದೇಶಗಳು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ ಮತ್ತು ಎಲ್ಲಾ ಮನುಷ್ಯರಿಗೆ ಅಗತ್ಯವಾದ ದೇವರ ರಕ್ಷಣೆಯ ಯೋಜನೆಯ ಕುರಿತು ನಾವು ಇಲ್ಲಿ ನೋಡುತ್ತೇವೆ. ದೇವರ ಸೃಷ್ಟಿಯ ಕಾರ್ಯಗಳ ಕುರಿತು ಅನೇಕ ಕೀರ್ತನೆಗಳಲ್ಲಿ ನಾವು ಓದುತ್ತೇವೆ.

## ಓದಬೇಕಾದ ಅಧ್ಯಾಯಗಳು:

- ಆದಿಕಾಂಡ 1 ಮತ್ತು 2: ಸೃಷ್ಟಿ
- ಆದಿಕಾಂಡ 3 ಮತ್ತು 4: ಮನುಷ್ಯನ ಪತನ
- ಆದಿಕಾಂಡ 7 ಮತ್ತು 8: ಜಲಪ್ರಳಯ
- ಆದಿಕಾಂಡ 9: ನೋಹನೊಂದಿಗೆ ದೇವರ ಒಡಂಬಡಿಕೆ
- ಆದಿಕಾಂಡ 11: ಬಾಬೆಲ್ ಗೋಪುರ
- ಕೀರ್ತನೆ 104: ಸೃಷ್ಟಿಕರ್ತನಿಗೆ ಸ್ತೋತ್ರ ಮಾಡುವುದು

# ಅಂಕ I. ದೃಶ್ಯ 2: ಮೂಲ ಪಿತೃಗಳ ಕಾಲ ಮತ್ತು ಐಗುಪ್ತದಲ್ಲಿ ಸೆರೆವಾಸ (ಕ್ರಿ.ಪೂ. 2000 ದಿಂದ ಕ್ರಿ.ಪೂ. 1450 ರವರೆಗೆ)

ಈ ದೃಶ್ಯವು ವಿಶ್ವದ ಮೇಲಿನ ದೃಷ್ಟಿಕೋನವನ್ನು ಬಿಟ್ಟು, ಒಂದು ಕುಟುಂಬ ಮತ್ತು ಆ ಕುಟುಂಬದಿಂದ ಉಂಟಾದ ದೇಶಗಳ ಮೇಲೆ ಕೇಂದ್ರಿಕರಿಸುತ್ತದೆ. ಈ ಕಥೆಯು ಮುಖ್ಯವಾಗಿ ಅಬ್ರಹಾಮ, ಇಸಾಕ, ಯಾಕೋಬ ಮತ್ತು ಯಾಕೋಬನ 12 ಮಕ್ಕಳ ಕುರಿತಾಗಿದೆ. ಈ ಅವಧಿಯ ಅಂತ್ಯದಲ್ಲಿ ಯಾಕೋಬನ 11 ನೇ ಮಗನಾದ ಯೋಸೇಫನು ಪ್ರಮುಖ ಪಾತ್ರಧಾರಿಯಾಗಿದ್ದಾನೆ.

ಆದರೂ ಈ ಕಥೆಯ ಉದ್ದೇಶವು ಇಡೀ ವಿಶ್ವವನ್ನೇ ಒಳಗೊಂಡಿದೆ. ಈ ಜನರು ದೇವರಿಂದ ಆರಿಸಲ್ಪಟ್ಟವರಾಗಿದ್ದೂ, ದೇವರು ಈ ಜನರ ಮೂಲಕವಾಗಿ ಇಡೀ ಭೂಮಿಯಲ್ಲಿರುವ ಜನರನ್ನು ಆಶೀರ್ವದಿಸಬೇಕೆಂದು ಬಯಸಿದನು (ಆದಿ. 12:3). ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಈ ಉದ್ದೇಶವು ಸ್ಪಷ್ಟವಾಗಿ ಕಾಣುತ್ತದೆ. ಈ ಒಡಂಬಡಿಕೆಯು ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ನಡುವೆ ಬಲಿಷ್ಠವಾದ ಕೊಂಡಿಯಾಗಿದೆ (ರೋಮ. 4:13-16 ಮತ್ತು ಗಲಾತ್ಯ 3:29 ನ್ನು ನೋಡಿರಿ).

ಯೋಸೇಫನ ಕಥೆಯು ಆತನ ತಂದೆಯಾದ ಯಾಕೋಬನು ಮತ್ತು ಆತನ ಸಹೋದರರೆಲ್ಲರು ಬರಗಾಲದಿಂದ ತಪ್ಪಿಸಿಕೊಳ್ಳಲು ಸ್ವಂತದೇಶವನ್ನು ಬಿಟ್ಟು ಐಗುಪ್ತಕ್ಕೆ ಬರುವುದರಿಂದ ಕೊನೆಗೊಳ್ಳುತ್ತದೆ. ಅವರು ಐಗುಪ್ತದಲ್ಲಿ ನೆಲೆಸಿದ್ದ ಈ ಕಾರ್ಯವು ಇಸ್ರಾಯೇಲ ಜನರ 400 ವರ್ಷಗಳ ದಾಸತ್ವದ ಜೀವನಕ್ಕೆ ಪ್ರಾರಂಭವಾಗಿತ್ತು. ಈ ದೀರ್ಘಾವಧಿಯ ದಾಸತ್ವದ ಜೀವಿತವನ್ನು ಕೊನೆಗಾಣಿಸಲು ದೇವರು ತನ್ನ ಜನರನ್ನು ಶತೃಗಳ ಕೈಯಿಂದ ಬಿಡಿಸಲು ಒಬ್ಬ ದಕ್ಷನಾಯಕನನ್ನು ಎಬ್ಬಿಸಿದನು. ಆತನ ಹೆಸರು ಮೋಶೆ. ಈ ಕಾಲಾವಧಿಯ ಕುರಿತು ನಾವು ಆದಿಕಾಂಡ 12-50 ಮತ್ತು ವಿಮೋಚನಕಾಂಡ 1-2 ಅಧ್ಯಾಯಗಳಲ್ಲಿ ಓದಬಹುದು. ಈ ಪಿತೃಗಳ ಕಾಲಾವಧಿಯಲ್ಲಿಯೇ ಯೋಬನ ಕಥೆಯು ಸಂಭವಿಸಿತು.

**ಓದಬೇಕಾದ ಅಧ್ಯಾಯಗಳು:**

- ಆದಿಕಾಂಡ 12, 15 ಮತ್ತು 17: ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ
- ಆದಿಕಾಂಡ 21-22: ಅಬ್ರಹಾಮ ಮತ್ತು ಇಸಾಕನು
- ಆದಿಕಾಂಡ 25-27 ಮತ್ತು 33: ಸಹೋದರರಾದ ಯಾಕೋಬ ಮತ್ತು ಏಸಾವರ ನಡುವಿನ ಹೋರಾಟ
- ಆದಿಕಾಂಡ 32: ಯಾಕೋಬನು ಇಸ್ರಾಯೇಲನೆಂಬ ಹೊಸ ಹೆಸರನ್ನು ಪಡೆದಿದ್ದು
- ಆದಿಕಾಂಡ 37 ಮತ್ತು 45: ಐಗುಪ್ತಕ್ಕೆ ಯೋಸೇಫನ ಮಾರ್ಗ
- ಆದಿಕಾಂಡ 49: ಯಾಕೋಬನ ಕೊನೆಯ ಮಾತುಗಳು
- ಯೋಬನು 1-2: ಯೋಬನ ಮನಸ್ಥಿತಿಯ ವರ್ಣನೆ
- ವಿಮೋಚನಕಾಂಡ 1-2: ಐಗುಪ್ತದಲ್ಲಿ ದಾಸತ್ವ

# ಅಂಕ I. ದೃಶ್ಯ 3: ವಿಮೋಚನಕಾಂಡ (ಕ್ರಿ.ಪೂ. 1450 ರಿಂದ ಕ್ರಿ.ಪೂ. 1400 ರವರೆಗೆ)

ಈ ದೃಶ್ಯವು ಸತ್ಯವೇದ ನಾಟಕದಲ್ಲಿ ಕೇವಲ 50 ವರ್ಷಗಳ ಅಲ್ಪಕಾಲಾವಧಿಯನ್ನೊಳಗೊಂಡಿದೆ. ಆದರೆ ಇದನ್ನು ಬಹಳ ವಿವರವಾಗಿ ತಿಳಿಸಲಾಗಿದೆ.

ಇಲ್ಲಿ ನಾವು ದೇವರು ಮೋಶೆಯನ್ನು ಕರೆದು, ತನ್ನ ಹೆಸರು 'ಇರುವಾತನೇ' ಎಂದು ಪ್ರಕಟಿಸಿದರ ಕುರಿತು ಓದುತ್ತೇವೆ. ಹತ್ತು ಉಪದ್ರವಗಳನ್ನು ಐಗುಪ್ತ್ಯರಿಗೆ ಬರಮಾಡುವುದರ ಮೂಲಕ ಮೋಶೆಯು ತನ್ನ ಸಹೋದರನಾದ ಆರೋನನೊಂದಿಗೆ ಕೂಡಿ ಇಸ್ರಾಯೇಲ್ಯರನ್ನು ಐಗುಪ್ತದ ಸೆರೆಯಿಂದ ಬಿಡಿಸಿದನು. ಬಿಡುಗಡೆಯಾದ ಸಮಯದಲ್ಲಿಯೇ ಅವರು ಮೊದಲನೇಯ ಪಸ್ಕಹಬ್ಬವನ್ನು ಆಚರಿಸಿದರು. ಇದು ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ನಡುವಿನ ಮುಖ್ಯಕೊಂಡಿಯಾಗಿದೆ.

ಇಸ್ರಾಯೇಲರು ಮರುಭೂಮಿ ಮತ್ತು ಸಿನಾಯ್ ಬೆಟ್ಟದ ಕಡೆಗೆ ನಡೆಸಲ್ಪಟ್ಟರು, ಇಲ್ಲಿ ದೇವರು ಮೋಶೆಯನ್ನು ಮಧ್ಯಸ್ಥನನ್ನಾಗಿಸಿಕೊಂಡು ಇಸ್ರಾಯೇಲ್ಯರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಅವರಿಗೆ ಧರ್ಮಶಾಸ್ತ್ರವನ್ನು ನೀಡಿದನು, ಮತ್ತೇ ಆತನು ತನಗಾಗಿ ಮಹಾಪರಿಶುದ್ಧ ಸ್ಥಳದ ಗುಡಾರವನ್ನು ಕಟ್ಟಬೇಕೆಂದು ಆಜ್ಞಾಪಿಸಿದನು. ನಂತರದಲ್ಲಿ ಯಾಜಕರ ಉದ್ಯೋಗ ಮತ್ತು ಆಚಾರಗಳು ಹಾಗೂ ಯಜ್ಞಗಳ ಕುರಿತ ನಿಯಮಗಳ ವಿವರಣೆ. ನಂತರದಲ್ಲಿ ಇಸ್ರಾಯೇಲ್ಯರ ಅಪನಂಬಿಕೆಯಿಂದ 40 ವರ್ಷಗಳ ಕಾಲ ಕಾಡಿನಲ್ಲಿ ಅಲೆದಾಡಿದರ ಕುರಿತು ಮಾಹಿತಿ.

ಈ ದೃಶ್ಯದ ಕೊನೆಯಲ್ಲಿ ಇಸ್ರಾಯೇಲ್ ಜನರು ವಾಗ್ದಾನ ದೇಶದ ಗಡಿಯನ್ನು ತಲುಪಿದರು. ಇಲ್ಲಿ ಮೋಶೆಯು ವಾಗ್ದಾನ ದೇಶವನ್ನು ಪ್ರವೇಶಿಲಿಕ್ಕೆ ಇದ್ದ ಜನರನ್ನು ಉದ್ದೇಶಿಸಿ ಉದ್ದವಾದ ಪ್ರಸಂಗವನ್ನು ಮಾಡಿದನು.

ಈ ಕಾಲಾವಧಿಯನ್ನು ವಿಮೋಚನಕಾಂಡದಲ್ಲಿ, ಯಾಜಕಕಾಂಡದಲ್ಲಿ, ಅರಣ್ಯಕಾಂಡದಲ್ಲಿ ಮತ್ತು ಧರ್ಮೋಪದೇಶಕಾಂಡದಲ್ಲಿ ವಿವರಿಸಲಾಗಿದೆ, ಮತ್ತೇ ಕೆಲವು ಕೀರ್ತನೆಗಳಲ್ಲೂ ಸಹ ಕಾಣಬಹುದು.

**ಓದಬೇಕಾದ ಅಧ್ಯಾಯಗಳು:**

- ವಿಮೋಚನಕಾಂಡ 3: ಮೋಶೆಯ ಕರೆಯುವಿಕೆ
- ವಿಮೋಚನಕಾಂಡ 7-11: ಹತ್ತು ಉಪದ್ರವಗಳು
- ವಿಮೋಚನಕಾಂಡ 12: ಮೊದಲ ಪಸ್ಕಹಬ್ಬ
- ವಿಮೋಚನಕಾಂಡ 19-24: ಮೋಶೆಯೊಂದಿಗೆ ದೇವರ ಒಡಂಬಡಿಕೆ
- ವಿಮೋಚನಕಾಂಡ 25-27: ದೇವರ ಗುಡಾರ
- ಯಾಜಕಕಾಂಡ 16: ಪ್ರಾಯಶ್ಚಿತ್ತದ ದಿನ
- ಅರಣ್ಯಕಾಂಡ 21: ತಾಮ್ರದ ಸರ್ಪ
- ಧರ್ಮೋಪದೇಶಕಾಂಡ 5: ದಶಾಜ್ಞೆಗಳು
- ಧರ್ಮೋಪದೇಶಕಾಂಡ 32: ಮೋಶೆಯ ಬೀಳ್ಕೊಡಿಗೆ
- ಕೀರ್ತನೆ 90: ಮೋಶೆ ಬರೆದ ಕೀರ್ತನೆ

# ಅಂಕ I. ದೃಶ್ಯ 4: ವಾಗ್ದಾನ ದೇಶದಲ್ಲಿ ಉದ್ಯೋಗ (ಕ್ರಿ.ಪೂ. 1400 ರಿಂದ ಕ್ರಿ.ಪೂ. 1390 ರವರೆಗೆ)

ಈ ದೃಶ್ಯವು ಕೇವಲ 10 ವರ್ಷಗಳ ಅವಧಿಯನ್ನು ಒಳಗೊಂಡಿದೆ. ಮೋಶೆಯು ತೀರಿಹೋದನಂತರ ಇಸ್ರಾಯೇಲರನ್ನು ಯೆಹೋಶುವನು ಯೊರ್ದನ್ ಹೊಳೆಯಿಂದ ವಾಗ್ದಾನ ದೇಶಕ್ಕೆ ನಡೆಸುವನು. ವಾಗ್ದಾನ ದೇಶದಲ್ಲಿ ಉದ್ಯೋಗ ಎಂಬ ಕಥೆಯು ಪ್ರಾರಂಭದಲ್ಲಿ ಬಹಳ ವಿವರವುಳ್ಳದ್ದಾಗಿರುತ್ತದೆ. ಇಲ್ಲಿ ಯೆರಿಕೋವ ಪಟ್ಟಣವನ್ನು ನಾಟಕೀಯವಾಗಿ ಗೆದ್ದುಕೊಳ್ಳುವ ಸಂಗತಿಯನ್ನು ಕಾಣುತ್ತೇವೆ. ಉದ್ಯೋಗವು ಪೂರ್ಣವಾದ ನಂತರ ಯೆಹೋಶುವನು ಇಸ್ರಾಯೇಲರು ಸಿನಾಯ್ ಪರ್ವತದಲ್ಲಿ ದೇವರು ಅವರ ಕೂಡ ಮಾಡಿಕೊಂಡಿದ್ದ ಒಡಂಬಡಿಕೆಗೆ ಅನುಗುಣವಾಗಿ ಜೀವಿಸುತ್ತಾ ಅದರಲ್ಲಿ ಸ್ಥಿರಚಿತ್ತರಾಗಿರುವಂತೆ ಅವರಲ್ಲಿ ಮನವಿಮಾಡಿಕೊಳ್ಳುತ್ತಾನೆ.

ಈ ಕಾಲಾವಧಿಯ ವಿವರಣೆಯನ್ನು ಯೆಹೋಶುವನ ಗ್ರಂಥದಲ್ಲಿ ಓದಬಹುದು.

**ಓದಬೇಕಾದ ಅಧ್ಯಯಗಳು:**

- ಯೆಹೋಶುವ 1: ಯೆಹೋಶುವನು ಮತ್ತು ಧರ್ಮಶಾಸ್ತ್ರದ ಪುಸ್ತಕ
- ಯೆಹೋಶುವ 6: ಯೆರಿಕೋವ ಪಟ್ಟಣದ ಬೀಳುವಿಕೆ
- ಯೆಹೋಶುವ 23: ಯೆಹೋಶುವನ ಬೀಳ್ಕೊಡುಗೆ ಮಾತುಗಳು

# ಅಂಕ I. ದೃಶ್ಯ 5: ನ್ಯಾಯಸ್ಥಾಪಕರ ಕಾಲ (ಕ್ರಿ.ಪೂ. 1390 ರಿಂದ ಕ್ರಿ.ಪೂ. 1050 ರವರೆಗೆ)

ಈ ದೃಶ್ಯವು ಇಸ್ರಾಯೇಲ್ ಜನರ ಇತಿಹಾಸದಲ್ಲಿಯೇ ಬಹಳ ಭಯಾನಕವಾದ ಕಾಲವಾಗಿದೆ. ಇಸ್ರಾಯೇಲರು ಪದೇ ಪದೇ ದೇವರಿಂದ ದೂರವಾಗಿ ಬೇರೆ ದೇವರುಗಳನ್ನು ಆರಾಧಿಸುತ್ತಿದ್ದರು. ಪ್ರತಿಸಾರಿ ಇಂತಹ ಸಂಗತಿಗಳು ಸಂಭವಿಸಿದಾಗಲೆಲ್ಲಾ ದೇವರು ಅವರನ್ನು ಹತ್ತಿಕ್ಕಲು ಅನ್ಯ ಜನರಿಗೆ ಅನುಮತಿ ನಿಡುತ್ತಿದ್ದರು. ಹಿಂಸೆ ಮತ್ತು ಕಷ್ಟಗಳು ಹೆಚ್ಚಾಗುವಾಗ ಇಸ್ರಾಯೇಲರು ದೇವರು ತಮ್ಮನ್ನು ಈ ಬಿಕ್ಕಟ್ಟಿನಿಂದ ಬಿಡುಗಡೆ ಮಾಡಲು ಒಬ್ಬ ಸಮರ್ಥ ನಾಯಕನನ್ನು ಕಳುಹಿಸುವಂತೆ ಆತನಲ್ಲಿ ಪ್ರಾರ್ಥಿಸುತ್ತಿದ್ದರು. ಆಗ ದೇವರು ಹಿಂಸಿಸುವ ಶತ್ರುಗಳಿಂದ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಲು ಮತ್ತು ಅವರು ದೇವರಲ್ಲಿ ಇಟ್ಟಿರುವ ನಂಬಿಕೆಯನ್ನು ಬಲಪಡಿಸಲು ಸ್ತ್ರೀ ಮತ್ತು ಪುರುಷರನ್ನು ನ್ಯಾಯಸ್ಥಾಪಕರುಗಳನ್ನಾಗಿ ಕಳುಹಿಸಿದನು. ನ್ಯಾಯಸ್ಥಾಪಕರುಗಳ ದಿನದಲ್ಲಿಯೂ ಸಹ ಇದೇ ಕಾರ್ಯವನ್ನು ಪುನಃ ಪುನಃ ಮಾಡುತ್ತಿದ್ದರು.

ದೃಶ್ಯ-4 ರ ಸಂದೇಶವೇನೆಂದರೆ ದೇವರಿಗೆ ವಿಧೇಯರಾಗುವುದರ ಫಲಿತಾಂಶವು ಆಶೀರ್ವಾದವಾಗಿರುತ್ತದೆ. ಐದನೇ ದೃಶ್ಯದ ಸಂದೇಶವು ದೇವರಿಗೆ ಅವಿಧೇಯರಾದರೆ ಅಪಾಯ ಅಥವಾ ಗಂಡಾಂತರಕ್ಕೆ ನಡೆಸುತ್ತದೆ. ಅನೇಕ ನ್ಯಾಯಸ್ಥಾಪಕರು ಸತ್ಯವೇದದ ಚಿರಪರಿಚಿತ ನಾಯಕರುಗಳಾಗಿದ್ದಾರೆ, ಅವರಲ್ಲಿ ಗಿದ್ಯೋನನು, ಸಂಸೋನನು ಮತ್ತು ವೀರ ಮಹಿಳಾ ನಾಯಕಿ ದೆಬೋರಾಳನ್ನು ನೋಡುತ್ತೇವೆ.

ನ್ಯಾಯಸ್ಥಾಪಕರು ಪುಸ್ತಕದಲ್ಲಿ ಈ ಕಾಲಾವಧಿಯ ವಿವರಣೆ ಇದೆ. ರೂತಳ ಪುಸ್ತಕದ ಕಥೆಯು ಸಹ ನ್ಯಾಯಸ್ಥಾಪಕರುಗಳ ಅವಧಿಯಲ್ಲಿಯೇ ಸಂಭವಿಸಿತ್ತು. 1 ಸಮುವೇಲ 1-7 ರ ಅಧ್ಯಾಯಗಳಲ್ಲಿ ನ್ಯಾಯಸ್ಥಾಪಕರ ಕಾಲಾವಧಿಯ ಅಂತ್ಯದ ಪರಿಸ್ಥಿತಿಯನ್ನು ವಿವರಿಸಲಾಗಿದೆ.

**ಓದಬೇಕಾದ ಅಧ್ಯಾಯಗಳು:**

- ನ್ಯಾಯಸ್ಥಾಪಕರು 5: ದೆಬೋರಾಳ ಹಾಡು
- ನ್ಯಾಯಸ್ಥಾಪಕರು 6: ಗಿದ್ಯೋನನು ಕುರಿಯ ತುಪ್ಪಟವನ್ನು ಕಣದಲ್ಲಿ ಇಟ್ಟಿದ್ದು
- ನ್ಯಾಯಸ್ಥಾಪಕರು 13: ಸಂಸೋನನ ಜನನ
- ರೂತಳು 1: ರೂತಳು ಯೆರೂಸಲೇಮಿಗೆ ಆಗಮಿಸಿದ್ದು
- 1 ಸಮುವೇಲ 1: ಸಮುವೇಲನ ಜನನ

# ಅಂಕ I. ದೃಶ್ಯ 6: ಸಂಯುಕ್ತರಾಜ್ಯ (ಕ್ರಿ.ಪೂ. 1050 ರಿಂದ ಕ್ರಿ.ಪೂ. 931 ರವರೆಗೆ)

ದೃಶ್ಯ 5 ಮತ್ತು 6 ಅನ್ನು ಸಮುವೇಲನು ಎಂಬ ವ್ಯಕ್ತಿಯು ಒಂದಾಗಿಸುತ್ತಾನೆ. ಆತನು ಕೊನೆಯ ನ್ಯಾಯಸ್ಥಾಪಕನು, ಆದರೆ ಕಥೆಯಲ್ಲಿ ಈತನು ಪ್ರಮುಖವಾಗಿ ದೇವರ ಒಬ್ಬ ಪ್ರವಾದಿಯಾಗಿ ಪರಿಚಯಿಸಲ್ಪಡುತ್ತಾನೆ. ಇಸ್ರಾಯೇಲ್ ಜನರು ತಮಗೆ ಒಬ್ಬ ಅರಸನಿರಬೇಕೆಂದು ಬೇಡಿಕೊಂಡಾಗ ಸಮುವೇಲನು ಬಹಳ ದುಃಖಕ್ಕೆ ಒಳಗಾಗುತ್ತಾನೆ. ಆದರೆ ದೇವರು ಇಸ್ರಾಯೇಲ್ ಜನರಿಗೆ ಒಬ್ಬ ಅರಸನನ್ನು ನೇಮಿಸುವಂತೆ ಸಮುವೇಲನಿಗೆ ಹೇಳುತ್ತಾನೆ. ಇಸ್ರಾಯೇಲರು ಅರಸನನ್ನು ಕೇಳುವುದರ ಮೂಲಕ ಅವರು ಸಮುವೇಲನನ್ನು ತಿರಸ್ಕರಿಸಲಿಲ್ಲ, ಆದರೆ ಇಸ್ರಾಯೇಲರು ಮೊದಲ ಎರಡು ಅರಸರುಗಳಾದ ಸೌಲ ಮತ್ತು ದಾವೀದನರನ್ನು ಅಭಿಷೇಕಿಸಲು ಸಮುವೇಲನನ್ನು ನೇಮಿಸಿದ ದೇವರನ್ನೇ ತಿರಸ್ಕರಿಸಿಬಿಟ್ಟರು.

ಪ್ರಾರಂಭದಲ್ಲಿ ಸೌಲನು ಪ್ರಖ್ಯಾತಿಯಾದ ಅರಸನಾಗಿದ್ದನು, ಆದರೆ ಯುದ್ಧವೀರನಾಗಿರಲಿಲ್ಲ. ಅದಕ್ಕೆ ಬದಲಾಗಿ ಆತನ ಮಗನಾದ ಯೋನಾತನು ಮತ್ತು ಯೌವನಸ್ಥನಾದ ದಾವೀದನು ಯುದ್ಧರಂಗದಲ್ಲಿ ವೀರನಾಯಕರಾಗಿದ್ದರು. ಸೌಲನು ದಾವೀದನ ಕುರಿತು ಅಸೂಯೆಪಟ್ಟ ಕಾರ್ಯವು ಅವನ ಅವನತಿಗೆ ಕಾರಣವಾಯಿತು.

ದಾವೀದನು ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಯೆರೂಸಲೇಮನ್ನು ವಶಪಡಿಸಿಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಆತನು ಅನೇಕ ಪಂಗಡಗಳಿಂದ ವಿಂಗಡಿಸಲ್ಪಟ್ಟ ಸಣ್ಣದಾದ ತನ್ನ ದೇಶವನ್ನು ಪ್ರಪಂಚದಲ್ಲಿಯೇ ದೇವರಿಂದ ಅಭಿಷಕ್ತನಾದ ಬಲಿಷ್ಠ ಅರಸನನ್ನು ಹೊಂದಿಕೊಂಡ ಶಕ್ತಿಶಾಲಿ ದೇಶವನ್ನಾಗಿ ಮಾಡಿದನು.

ದಾವೀದನ ಮಗನಾದ ಸೊಲೊಮೋನನು ಇನ್ನುಳಿದ ಎಲ್ಲಾ ಸುಧಾರಣೆಗಳನ್ನು ಮಾಡಿದನು. ಇವನ ಆಳ್ವಿಕೆ ಕಾಲದಲ್ಲಿ ಇಸ್ರಾಯೇಲರ ಕೀರ್ತಿಯು ಉತ್ತುಂಗಕ್ಕೇರಿತ್ತು. ಇವನು ಯೆರೂಸಲೇಮ್ ದೇವಾಲಯವನ್ನು ಸಹ ಕಟ್ಟಿಸಿದನು.

ಈ ಕಾಲಾವಧಿಯನ್ನು ಹಳೇ ಒಡಂಬಡಿಕೆಯಲ್ಲಿ ಎರಡು ಸಾರಿ ವಿವರಿಸಲಾಗಿದೆ. ಮೊದಲನೇಯ ಸಾರಿ 1 ಸಮುವೇಲನು ಅಧ್ಯಾಯ 3 ರಿಂದ 1 ಅರಸುಗಳು ಅಧ್ಯಾಯ 11 ರವರೆಗೆ. ಇಲ್ಲಿ ಪ್ರವಾದಿಗಳ ಮತ್ತು ಅರಸರುಗಳ ಮಧ್ಯದಲ್ಲಿರುವ ಸಂಬಂಧವನ್ನು ಒತ್ತಿಹೇಳಲಾಗಿದೆ. ಎರಡನೇಯ ಸಾರಿ 1 ಪೂರ್ವಕಾಲವೃತ್ತಾಂತ ಅಧ್ಯಾಯ 10 ರಿಂದ 2 ಪೂರ್ವಕಾಲವೃತ್ತಾಂತ ಅಧ್ಯಾಯ 9 ರವರೆಗೆ ನೋಡಬಹುದು. ಇಲ್ಲಿ ದೇವಾಲಯವನ್ನು ಕಟ್ಟುವುದರ ಕುರಿತು ಒತ್ತಿಹೇಳಲಾಗಿದೆ. ಅನೇಕ ಕೀರ್ತನೆಗಳು ದಾವೀದನಿಂದಲೂ ಮತ್ತು ಆತನ ಸಂಗೀತಗಾರರಿಂದಲೂ ಬರೆಯಲ್ಪಟ್ಟಿವೆ. ಸೊಲೊಮೋನನು ಎರಡು ಕೀರ್ತನೆಗಳನ್ನು, ಪರಮಗೀತೆಯನ್ನು, ಜ್ಞಾನೋಕ್ತಿ ಪುಸ್ತಕದ ಕೆಲವು ಭಾಗಗಳನ್ನು ಮತ್ತು ಪ್ರಸಂಗಿ ಪುಸ್ತಕಗಳನ್ನು ಬರೆದನು. ಹಳೇ ಒಡಂಬಡಿಕೆಯಲ್ಲಿರುವ ಅನೇಕ ಪದ್ಯಸಾಹಿತ್ಯವು ಈ ಕಾಲದಲ್ಲಿಯೇ ಬರೆಯಲ್ಪಟ್ಟಿವೆ.

### ಓದಬೇಕಾದ ಅಧ್ಯಾಯಗಳು:

- 1 ಸಮುವೇಲ 9: ಸಮುವೇಲನು ಸೌಲನನ್ನು ಅಭೀಷೇಕಿಸಿದ್ದು
- 1 ಸಮುವೇಲನು 16: ಸಮುವೇಲನು ದಾವೀದನನ್ನು ಅಭಿಷೇಕಿಸಿದ್ದು
- 2 ಸಮುವೇಲನು 7: ದಾವೀದನೊಂದಿಗೆ ದೇವರ ಒಡಂಬಡಿಕೆ

- 1 ಅರಸುಗಳು 8 ಮತ್ತು 2 ಪೂರ್ವಕಾಲವೃತ್ತಾಂತ 5-7: ದೇವಾಲಯದ ಪ್ರತಿಷ್ಠೆ
- ಕೀರ್ತನೆಗಳು 23: ದಾವೀದನು ಬರೆದ ಕುರುಬನ ಕೀರ್ತನೆ
- ಕೀರ್ತನೆಗಳು 72: ಸೊಲೊಮೋನನು ಬರೆದ ಅರಸನ ಪ್ರಾರ್ಥನೆ
- ಕೀರ್ತನೆಗಳು 127: ಸೊಲೊಮೋನನು ಬರೆದ ಯಾತ್ರಾಗೀತೆ

# ಅಂಕ I. ದೃಶ್ಯ 7: ವಿಭಜಿತ ರಾಜ್ಯ (ಕ್ರಿ.ಪೂ. 931 ರಿಂದ ಕ್ರಿ.ಪೂ. 722)

ಸೊಲೊಮೋನನು ಬಹಳ ಪ್ರತಿಭೆಯುಳ್ಳ ಆಡಳಿತಗಾರನಾಗಿದ್ದನು. ಆತನು ತನ್ನ ರಾಜ್ಯದ ಎಲ್ಲಾ ಅಗತ್ಯತೆಗಳನ್ನು ಪೂರೈಸಲು ಅನುಕೂಲವಾಗುವಂತೆ, ತನ್ನ ರಾಜ್ಯವನ್ನು 12 ಜಿಲ್ಲೆಗಳನ್ನಾಗಿ ವಿಂಗಡಿಸಿದನು. ಸೊಲೊಮೋನನು ಜನರ ಮೇಲೆ ಭಾರವಾದ ತೆರಿಗೆಗಳನ್ನು ಕಠಿಣ ಕೆಲಸಗಳನ್ನು ಹೇರಿದನು, ಇದರಿಂದ ಜನರು ಬೇಸತ್ತುಹೋಗಿದ್ದರು.

ಈ ಬೇಸರಿಕೆಯ ನಿಮಿತ್ತ ಸೊಲೊಮೋನನ ಆಳ್ವಿಕೆಯ ನಂತರ ಅಧಿಕಾರಕ್ಕೆ ಬಂದ ಅವನ ಮಗನಾದ ರೆಹಬ್ಬಾಮನ ಆಳ್ವಿಕೆಯಲ್ಲಿ ಮತ್ತಷ್ಟು ವಿರೋಧತೆ ಉಂಟಾಯಿತು. ರೆಹಬ್ಬಾಮನು ಸಹ ಜನರ ಮೇಲೆ ಹೆಚ್ಚಿನ ಬೇಡಿಕೆಗಳನ್ನು ಹೇರಿದನು. ಇದರಿಂದ ಈ ಮುಂಚೆ ಸೊಲೊಮೋನನ ಅಡಿಯಲ್ಲಿ ರಾಜ್ಯಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದ ಯರೊಬ್ಬಾಮನ ಮುಂದಾಳತ್ವದಲ್ಲಿ ಉತ್ತರದಲ್ಲಿ ಹತ್ತು ಕುಲದವರು ಒಂದು ಪ್ರತ್ಯೇಕ ರಾಜ್ಯವನ್ನು ಕಟ್ಟಿಕೊಂಡರು. ಈ ರಾಜ್ಯವು ಇಸ್ರಾಯೇಲ್ ರಾಜ್ಯವೆಂದು ಕರೆಯಲ್ಪಟ್ಟಿತ್ತು ಮತ್ತು ದಕ್ಷಿಣದ ರಾಜ್ಯಕ್ಕೆ ಯೆಹೂದ ರಾಜ್ಯವೆಂದು ಹೆಸರಾಯಿತು.

ಉತ್ತರದ ಎಲ್ಲಾ ರಾಜರುಗಳು "ದೇವರ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವುದನ್ನೆ" ಮಾಡಿದರು. ಹಳೇ ಒಡಂಬಡಿಕೆಯ ಪ್ರವಾದಿಗಳ ಅನೇಕ ಎಚ್ಚರಿಕೆಯ ಮಾತುಗಳಿಗೆ ಅವರು ಪಾಶ್ಚಾತ್ತಾಪ ಪಡದೆ, ಅವರ ಮಾತುಗಳನ್ನು ತಿರಸ್ಕರಿಸಿ ತಮ್ಮ ಕೆಟ್ಟ ಮಾರ್ಗಗಳಲ್ಲೆ ಮುಂದೆ ಸಾಗಿದರು. ಈ ಪ್ರಮುಖ ಕಾರಣದಿಂದಾಗಿಯೇ ಇಸ್ರಾಯೇಲ್ ರಾಜ್ಯವು ಕ್ರಿ.ಪೂ. 722 ರಲ್ಲಿ ಸತ್ಯವೇದ ನಾಟಕದಿಂದ ಕಣ್ಮರೆಯಾಯಿತು. ಅದೇ ವರ್ಷದಲ್ಲಿ ಅಶ್ಶೂರ್ಯದ ಅರಸನು ಉತ್ತರದ ರಾಜ್ಯವನ್ನು ಗೆದ್ದುಕೊಂಡು ದೇಶದ ಭಾಗಶಃ ಜನರನ್ನು ಸೆರೆಯಾಳುಗಳನ್ನಾಗಿ ಒಯ್ದನು. ಇನ್ನುಳಿದ ಜನರನ್ನು ತನ್ನ ಬೇರೆ ರಾಜ್ಯದಿಂದ ತಂದ ಜನರೊಂದಿಗೆ ಬೆರೆಸಿದನು. ಇದು ಮುಂದೆ ಕಲಬೆರಿಕೆ ಜನಾಂಗವಾಗಿ ಸಮಾರ್ಯದವರ ಉಗಮವಾಯಿತು. ಯೇಸುವಿನ ಕಾಲದಲ್ಲಿ ಯೆಹೂದ್ಯರು ಇವರನ್ನು ಸ್ವೀಕರಿಸುತ್ತಿದ್ದಿಲ್ಲ.

ಈ ಕಾಲಾವಧಿಯಲ್ಲಿ ಇಸ್ರಾಯೇಲಿನಲ್ಲಿ ಪ್ರವಾದಿಗಳಾದ ಎಲೀಯ ಮತ್ತು ಎಲೀಷರಂತವರ ಮೂಲಕ ಪ್ರವಾದಿಗಳ ಧಾರ್ಮಿಕ ಚಳುವಳಿಗಳು ಪ್ರಾರಂಭವಾದವು.

ದಕ್ಷಿಣ ರಾಜ್ಯವು ಕೇವಲ ಯೆಹೂದ ಮತ್ತು ಬೆನ್ಯಾಮಿನ್ ಕುಲಗಳನ್ನು ಮಾತ್ರ ಒಳಗೊಂಡಿತ್ತು. ಇಲ್ಲಿ ದಾವೀದನ ರಾಜ್ಯದ ಆಳ್ವಿಕೆಯು ಮುಂದುವರೆದಿತ್ತು. ಆದರೆ ಇಲ್ಲಿನ ಅರಸರು ಕೂಡ ಇಸ್ರಾಯೇಲಿನ ಇತರ ಅರಸರಂತೆ "ದೈವಿಕ ದೃಷ್ಟಿಯಲ್ಲಿ ಅಯೋಗ್ಯವಾದ" ಕಾರ್ಯಗಳನ್ನೇ ಮಾಡಿದರು. ಆದರೆ ಯೆಹೂದದ ಕೆಲವು ಅರಸರು ನೀತಿವಂತರಾಗಿ "ಯೆಹೋವನ ದೃಷ್ಟಿಯಲ್ಲಿ ಒಳ್ಳೆಯದನ್ನೇ ಮಾಡಿದರು". ಹಿಜ್ಕೀಯನು ಇಂತಹ ಒಳ್ಳೆಯ ಅರಸರುಗಳಲ್ಲಿ ಪ್ರಸಿದ್ಧಿಯಾಗಿದ್ದಾನೆ. ಪ್ರವಾದಿಯಾದ ಯೆಶಾಯನು ಈತನ ಸಂಬಂಧಿಕನಾಗಿದ್ದು, ಹಿಜ್ಕೀಯನಿಗೆ ಮುಖ್ಯ ಸಲಹೆಗಾರನಾಗಿದ್ದನು.

ಈ ಕಾಲಾವಧಿಯನ್ನು 1 ಅರಸುಗಳು 12 ನೇ ಅಧ್ಯಾಯದಿಂದ 2 ಅರಸುಗಳು 17 ಅಧ್ಯಾಯದವರೆಗೆ ವಿವರಿಸಲಾಗಿದೆ. 2 ಪೂರ್ವಕಾಲವೃತ್ತಾಂತದಲ್ಲಿ ಎರಡನೇಯ ವಿವರಣೆಯನ್ನು ಕಾಣಬಹುದು. ಆದರೆ ಇಲ್ಲಿ ಯೆಹೂದ ರಾಜ್ಯದ ಕುರಿತು ಮಾತ್ರ ಹೆಚ್ಚು ಒತ್ತನ್ನು ನೀಡಲಾಗಿದೆ. ಈ ಕಾಲಾವಧಿಯಲ್ಲಿನ ನೈತಿಕ ಮತ್ತು ಆತ್ಮೀಕ ಸ್ಥಿತಿಗತಿಗಳ ಕುರಿತು ಪ್ರವಾದಿಗಳ ಪುಸ್ತಕಗಳಾದ ಅಮೋಸ, ಹೋಶೆಯ, ಯೆಶಾಯ, ಮೀಕ ಮತ್ತು ಇತರೆ ಪುಸ್ತಕಗಳಲ್ಲಿ ವಿವರಿಸಲಾಗಿದೆ.

**ಓದಬೇಕಾದ ಅಧ್ಯಾಯಗಳು:**

- 2 ಪೂರ್ವಕಾಲವೃತ್ತಾಂತ 10: ದಕ್ಷಿಣದ ಹತ್ತು ಕುಲಗಳ ದಂಗೆ
- 1 ಅರಸುಗಳು 17: ಕೇರಿತ್ ನಲ್ಲಿ ಎಲೀಯನು
- 1 ಅರಸುಗಳು 18: ಎಲೀಯ ಮತ್ತು ಬಾಳನ ಪ್ರವಾದಿಗಳು
- 2 ಅರಸುಗಳು 2: ಎಲೀಯನು ಮತ್ತು ಎಲೀಷನು
- ಯೆಶಾಯ 6: ಯೆಶಾಯನ ಕರೆಯುವಿಕೆ
- ಯೆಶಾಯ 37-38: ಅರಸನಾದ ಹಿಜ್ಕೀಯನು ಮತ್ತು ಯೆಶಾಯ
- ಆಮೋಸನು 1: ಆ ದಿನಗಳಲ್ಲಿದ್ದ ಜನರ ಪಾಪದೋಷಗಳು
- ಆಮೋಸ 7: ಆಮೋಸನ ಕರೆಯುವಿಕೆ

## ಅಂಕ I. ದೃಶ್ಯ 8: ಬದುಕುಳಿದ ರಾಜ್ಯ (ಕ್ರಿ.ಪೂ. 722 ರಿಂದ ಕ್ರಿ.ಪೂ. 586 ರವರೆಗೆ)

ಇಸ್ರಾಯೇಲರ ಉತ್ತರದ ರಾಜ್ಯವನ್ನು ಕ್ರಿ.ಪೂ. 722 ರಲ್ಲಿ ಅಸ್ಸೀರಿಯದ ಸೈನ್ಯವು ವಶಪಡಿಸಿಕೊಂಡಿತು. ಅಸ್ಸೀರಿಯದ ಅರಸನಾದ ಸನ್ಹೇರಿಬನು ಯೆಹೂದ ರಾಜ್ಯದ ಮೇಲೆ ಸತತವಾಗಿ ಸೈನಿಕದಾಳಿಗಳನ್ನು ಮಾಡಿದನು ಮತ್ತು ಕ್ರಿ.ಪೂ. 701 ರಲ್ಲಿ ಯೆರೂಸಲೇಮಿಗೆ ಮುತ್ತಿಗೆ ಹಾಕಿದನು. ಅರಸನಾದ ಹಿಜ್ಕೀಯನು ದೇವರ ಬಳಿಯಲ್ಲಿ ಬಂದು ಪ್ರಾರ್ಥಿಸಿದಾಗ, ದೇವರ ದೂತನು ಒಂದೇ ರಾತ್ರಿಯಲ್ಲಿ ಅಸ್ಸೀರಿಯರ ಸೈನ್ಯದಲ್ಲಿದ್ದ 1,85,000 ಗಂಡಾಳುಗಳನ್ನು ಸದೆಬಡಿದನು. ಇದರಿಂದ ಯೆಹೂದದ ರಾಜ್ಯವು ಮುತ್ತಿಗೆಯಿಂದ ಬಿಡುಗಡೆ ಹೊಂದಿ ಬದುಕಿ ಉಳಿಯಲು ಸಾಧ್ಯವಾಯಿತು.

ದುರಾದೃಷ್ಟದ ಸಂಗತಿಯೇನಂದರೆ ಇಸ್ರಾಯೇಲ್ ರಾಜ್ಯಕ್ಕೆ ಕೊನೆಯಲ್ಲಿ ಸಂಭವಿಸಿದ ಪರಿಸ್ಥಿತಿಯನ್ನು ನೋಡಿ ಯೆಹೂದ ರಾಜ್ಯವು ಪಾಠ ಕಲಿಯಲಿಲ್ಲ. ಅನೇಕ ಪ್ರವಾದಿಗಳು ಜನರಿಗೆ ದೇವರ ಮಾರ್ಗವನ್ನು ಬೋಧಿಸುವುದರ ಮೂಲಕ ಆತ್ಮೀಕ ಉಜ್ಜೀವನ ಮತ್ತು ಧಾರ್ಮಿಕ ಸುಧಾರಣೆ ತರುವಲ್ಲಿ ಪ್ರಯತ್ನಿಸಿದರು, ಆದರೆ ಜನರು ಅವರ ಮಾತುಗಳಿಗೆ ಕಿವಿಗೊಡಲಿಲ್ಲ. ಆದರೆ ಯೆಹೂದದಲ್ಲಿ ಒಬ್ಬ ಅರಸನಿದ್ದನು ಆತನ ಹೆಸರು ಯೋಷೀಯನು, ಈತನು ತೀರಿಕೊಂಡಾಗ ಪ್ರವಾದಿಯಾದ ಯೆರೆಮೀಯನು ದುಃಖದಿಂದ ಕಣ್ಣೀರಿಟ್ಟನು.

ನಂತರದ ದಿನಗಳಲ್ಲಿ ಬಾಬೆಲಿನವರು ಒಂದು ಸಾಮ್ರಾಜ್ಯವಾಗಿ ಈ ಪ್ರಾಂತ್ಯವನ್ನು ಆಳಲಿಕ್ಕೆ ಪ್ರಾರಂಭಿಸಿದರು. ಯೆಹೂದದ ಅರಸರು ಎರಡು ಬಾರಿ ಬಾಬೆಲ್ ಅರಸರ ವಿರುದ್ಧ ದಂಗೆ ಎದ್ದು ಸೋತುಹೋದರು. ಮೂರನೇಯ ಬಾರಿ ಬಾಬೇಲಿನ ಅರಸನಾದ ನೆಬೂಕದ್ನೆಚ್ಚರನು ಸಾಕಷ್ಟು ಸಂಪತ್ತನ್ನು ಲೂಟಿ ಹೊಡೆದನು. ಕ್ರಿ.ಪೂ. 586 ರಲ್ಲಿ ಯೆರೂಸಲೇಮನ್ನು ನಾಶಪಡಿಸಿ, ದೇವಾಲಯವನ್ನು ಸಹ ಧ್ವಂಸ ಮಾಡಿ ಹಾಳು ಬೀಳುವಂತೆ ಮಾಡಿದನು.

ಆದರೆ ಈ ಎಲ್ಲಾ ಕಾರ್ಗತ್ತಲಲ್ಲಿಯೂ ಒಂದು ಸಣ್ಣ ಬೆಳಕು ಇತ್ತು. ದೇವರು ತನ್ನ ಜನರೊಂದಿಗೆ ಮಾಡಿಕೊಳ್ಳುವ ಹೊಸ ಒಡಂಬಡಿಕೆಯ ಕುರಿತು ಪ್ರವಾದಿಯಾದ ಯೆರೆಮೀಯನು ಪ್ರವಾದಿಸಿದನು. ಇದು ವ್ಯತ್ಯಾಸವಾದ ಒಡಂಬಡಿಕೆಯಾಗಿದ್ದು, ದೇವರು ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಕಾರ್ಯಮಾಡುವಾತನಾಗಿದ್ದಾನೆ (ಯೆರೆಮಿ. 31:31-34).

ಈ ಕಾಲಾವಧಿಯನ್ನು 2 ಅರಸುಗಳು 18-25 ಮತ್ತು 2 ಪೂರ್ವಕಾಲವೃತ್ತಾಂತ 30-36 ನೇ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಈ ಅವಧಿಯಲ್ಲಿ ನೈತಿಕ ಮತ್ತು ಆತ್ಮೀಕ ಮೌಲ್ಯಗಳು ಹೇಗೆ ವಿನಾಶದ ಹಂತವನ್ನು ತಲುಪಿತೆಂದು ಯೆರೆಮೀಯನು 5-9 ಮತ್ತು ಯೆಹೆಜ್ಕೇಲನು 7-11 ನೇ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

### ಓದಬೇಕಾದ ಅಧ್ಯಾಯಗಳು:

- 2 ಅರಸುಗಳು 18-19: ಹಿಜ್ಕೀಯನು ಮತ್ತು ಸನ್ಹೇರೀಬನು
- 2 ಪೂರ್ವಕಾಲವೃತ್ತಾಂತ 34: ಯೋಷೀಯನು ಅರಸನಾದದ್ದು
- 2 ಪೂರ್ವಕಾಲವೃತ್ತಾಂತ 35: ಯೆರೆಮೀಯನು ಮತ್ತು ಯೋಷೀಯನು
- ಯೆರೆಮೀಯನು 5: ಆತ್ಮೀಕ ಅಧಃಪತನ
- ಯೆರೆಮೀಯನು 31: ಹೊಸ ಒಡಂಬಡಿಕೆ
- ಹಬಕ್ಕೂಕ 3: ಪ್ರವಾದಿಗಳ ಮಧ್ಯದಲ್ಲಿ ಕೀರ್ತನೆಗಾರನು

## ಅಂಕ I. ದೃಶ್ಯ 9: ಬಾಬೆಲಿನ ಸೆರೆ (ಕ್ರಿ.ಪೂ. 606 ರಿಂದ ಕ್ರಿ.ಪೂ. 538 ರವರೆಗೆ)

ಈ ಸೆರೆವಾಸವು 70 ವರ್ಷಗಳ ನಂತರ ಕೊನೆಗೊಳ್ಳುತ್ತದೆಂದು ಪ್ರವಾದಿಯಾದ ಯೆರೆಮೀಯನು ಪ್ರವಾದಿಸಿದ್ದನು. ಈ 70 ವರ್ಷಗಳನ್ನು ಎರಡು ಮಾರ್ಗಗಳಲ್ಲಿ ಲೆಕ್ಕಿಸಬಹುದು. ಮೊದಲನೇಯದು ಕ್ರಿ.ಪೂ. 606 ರಲ್ಲಿ ಯೆಹೂದದಿಂದ ಬಾಬೇಲಿಗೆ ಕೊಂಡೊಯ್ದ ಮೊದಲನೇಯ ಗುಂಪಿನ ಸೆರೆಯಾಳುಗಳಿಂದ ಪ್ರಾರಂಭವಾಗಿ, ಕ್ರಿ.ಪೂ. 538 ರಲ್ಲಿ ಪರ್ಷಿಯದವರು ಬಾಬೇಲಿನವರನ್ನು ಸೋಲಿಸಿ ಮೊದಲ ಗುಂಪಿನ ಸೆರೆಯಾಳುಗಳನ್ನು ಯೆಹೂದಕ್ಕೆ ಕಳುಹಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಇದು ಒಟ್ಟು 70 ವರ್ಷಗಳ ಅವಧಿಯಾಗಿದೆ. ಎರಡನೇಯ ಲೆಕ್ಕವು ಕ್ರಿ.ಪೂ. 586 ರಲ್ಲಿ ಯೆರೂಸಲೇಮಿನ ದೇವಾಲಯವನ್ನು ನಾಶಮಾಡಿ ಮೂರನೇ ಗುಂಪಿನ ಜನರನ್ನು ಬಾಬೆಲಿಗೆ ಸೆರೆಯಾಳಾಗಿ ಕೊಂಡೊಯ್ಯುವುದರಿಂದ ಪ್ರಾರಂಭವಾಗಿ, ಕ್ರಿ.ಪೂ. 516 ರಲ್ಲಿ ಹೊಸ ದೇವಾಲಯವನ್ನು ಸಂಪೂರ್ಣವಾಗಿ ಕಟ್ಟಿ ಮುಗಿಸುವುದರೊಂದಿಗೆ ಕೊನೆಗೊಳ್ಳುತ್ತದೆ (ಕ್ರಿ.ಪೂ. 538 ರಲ್ಲಿ ಜೆರುಬ್ಬಾಬೆಲನು ಸೆರೆವಾಸದಿಂದ ಮರಳಿ ಬಂದಾಗ ದೇವಾಲಯವನ್ನು ಕಟ್ಟಲಿಕ್ಕೆ ಪ್ರಾರಂಭಿಸಿದನು). ಈ ಕಾಲಾವಧಿಯು 70 ವರ್ಷಗಳಾಗಿತ್ತು.

ಯೆಹೂದ್ಯರು ಬಾಬೆಲಿನಲ್ಲಿರುವಾಗ ಅವರು ಯೆಹೂದ ದೇವಾಲಯದಲ್ಲಿ ಆರಾಧಿಸಿದಂತೆ ಆರಾಧಿಸಲು ಆಗಲಿಲ್ಲ. ಅದಕ್ಕೆ ಬದಲಾಗಿ ಅವರು ದೇವರ ಪವಿತ್ರ ವಾಕ್ಯಗಳನ್ನು ಧ್ಯಾನಿಸಲಿಕ್ಕೆ ಸಭಾಮಂದಿರಗಳಲ್ಲಿ ಕೂಡಿಬಂದರು. ಈ ಸಮಯಗಳಲ್ಲಿ ಯಾಜಕರ ಬದಲಾಗಿ ಧರ್ಮಶಾಸ್ತ್ರಿಗಳು ಪ್ರಮುಖ ಧಾರ್ಮಿಕ ಮುಖಂಡರಾದರು. ಧರ್ಮಶಾಸ್ತ್ರೀ ಎಂದು ಕರೆಯಲ್ಪಟ್ಟ ಮೊದಲ ವ್ಯಕ್ತಿಯು ಎಜ್ರನಾಗಿದ್ದನು. ಇವನು ಸೆರೆಯಿಂದ ಯೆರೂಸಲೇಮಿಗೆ ಮರಳಿ ಬಂದ ಒಂದು ಗುಂಪಿನ ನಾಯಕನಾಗಿದ್ದನು. ಯೆಹೂದ್ಯರ ಸಂಪ್ರದಾಯದಂತೆ 1 ಮತ್ತು 2 ನೇ ಪೂರ್ವಕಾಲವೃತ್ತಾಂತವನ್ನು ಬರೆದ ಲೇಖಕನು ಎಜ್ರನಾಗಿದ್ದಾನೆ.

ಈ ಕಾಲಾವಧಿಯ ಕುರಿತು 2 ಪೂರ್ವಕಾಲವೃತ್ತಾಂತ ಅಧ್ಯಾಯ 36 ರಲ್ಲಿ ಭಾಗಶಃವಾಗಿ ವಿವರಿಸಲಾಗಿದೆ. ಇನ್ನುಳಿದ ಪುಸ್ತಕಳಾದ ಪ್ರಲಾಪಗಳು, ದಾನಿಯೇಲ, ಯೆಹೆಜ್ಕೇಲಗಳಲ್ಲಿ ಆ ಕಾಲಗಳಲ್ಲಿ ಬಾಬೆಲ್ ಮತ್ತು ಯೆಹೂದದಲ್ಲಿದ್ದ ಜನರ ಜೀವನದ ಕುರಿತು ಆಸಕ್ತಿಯುಳ್ಳ ಒಳನೋಟಗಳನ್ನು ತಿಳಿಸಲಾಗಿದೆ.

### ಓದಬೇಕಾದ ಅಧ್ಯಾಯಗಳು:

- 2 ಪೂರ್ವಕಾಲವೃತ್ತಾಂತ 36: ಬಾಬೇಲಿನ ಅರಸನಾದ ನೆಬೂಕದ್ನೆಚ್ಚರಿನಿಂದ ಸೋಲಲ್ಪಟ್ಟ ಯೆಹೂದದ ಮೂರು ಅರಸರುಗಳು
- ಎಜ್ರನು 1: ಅರಸನಾದ ಕೋರೆಷನು ಯೆಹೂದ್ಯರು ಯೆಹೂದಕ್ಕೆ ಹಿಂತಿರುಗಲು ಅವಕಾಶ ಮಾಡಿಕೊಟ್ಟದ್ದು
- ಯೆಹೆಜ್ಕೇಲನು 2, 3 ಅಧ್ಯಾಯಗಳು: ಯೆಹೆಜ್ಕೇಲನ ಕರೆಯುವಿಕೆ
- ಯೆಹೆಜ್ಕೇಲನು 8-9 ಅಧ್ಯಾಯಗಳು: ದೇವರ ಮಹಿಮೆಯು ದೇವಾಲಯವನ್ನು ಬಿಟ್ಟುಹೋದದ್ದು
- ದಾನಿಯೇಲನು 1: ದಾನಿಯೇಲನು ಮತ್ತು ಆತನ ಸ್ನೇಹಿತರು ಬಾಬೆಲಿಗೆ ಸೆರೆ ಹೋದದ್ದು

# ಅಂಕ I. ದೃಶ್ಯ 10: ಯೆರೂಸಲೇಮಿಗೆ ಹಿಂತಿರುಗಿದ್ದು (ಕ್ರಿ.ಪೂ. 538 ರಿಂದ ಕ್ರಿ.ಪೂ. 444)

ಯೆಹೂದ್ಯರು ಯೆರೂಸಲೇಮಿಗೆ ಮರಳಿಬರುವಂತೆ ಪರ್ಷಿಯಾದ ಅರಸನಾದ ಕೋರೆಷನು ಕ್ರಿ.ಪೂ. 539 ರಲ್ಲಿ ಒಂದು ಶಾಸನವನ್ನು ಹೊರಡಿಸಿದನು. ಆದರೆ ಅನೇಕ ಯೆಹೂದ್ಯರು ಮರಳಿಬರುವುದಕ್ಕೆ ಇಷ್ಟಪಡಲಿಲ್ಲ. ಯಾಕೆಂದರೆ ಬಾಬೆಲಿನಲ್ಲಿ ಅವರು ಸುಖಕರವಾದ ಜೀವನವನ್ನು ಸಾಗಿಸುತ್ತಿದ್ದರು ಮತ್ತು ಅವರಲ್ಲಿ ಅನೇಕರು ಶ್ರೀಮಂತರಾಗಿ ಅಲ್ಲಿಯೇ ನೆಲೆಯೂರಿದ್ದರು, ಹಾಗಾಗಿ ಅವರು ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟು ಯೆಹೂದಕ್ಕೆ ಬಂದು ಹೊಸ ಜೀವನವನ್ನು ಪ್ರಾರಂಭಿಸಲು ಇಷ್ಟಪಡಲಿಲ್ಲ.

ಸೆರೆಯಾಳುಗಳನ್ನು ಯೆಹೂದದಿಂದ ಬಾಬೆಲಿಗೆ ಮೂರು ಹಂತಗಳಲ್ಲಿ ಗಡಿಪಾರು ಮಾಡಲಾಯಿತು (18 ವರ್ಷಗಳ ಕಾಲಾವಧಿಯಲ್ಲಿ). ಈಗ ಬಾಬೆಲಿನಿಂದ ಯೆರೂಸಲೇಮಿಗೂ ಸಹ ಮೂರು ಹಂತಗಳಲ್ಲಿ ಮರಳಿ ಬರಲು ಅವಕಾಶ ಮಾಡಲಾಯಿತು (93 ವರ್ಷಗಳ ಕಾಲಾವಧಿಯಲ್ಲಿ). ಮೊದಲನೇಯ ತಂಡವು ಕ್ರಿ.ಪೂ. 538 ರಲ್ಲಿ ಜೆರುಬ್ಬಾಬೆಲನ ನಾಯಕತ್ವದಲ್ಲಿ, ಎರಡನೇ ತಂಡವು ಕ್ರಿ.ಪೂ. 458 ರಲ್ಲಿ ಎಜ್ರನ ನಾಯಕತ್ವದಲ್ಲಿ, ಮೂರನೇ ತಂಡವು ಕ್ರಿ.ಪೂ. 445 ರಲ್ಲಿ ನೆಹೆಮೀಯನ ನಾಯಕತ್ವದಲ್ಲಿ ಯೆರೂಸಲೇಮಿಗೆ ಮರಳಿಬಂದರು.

ಮೊದಲನೇ ತಂಡವು ಜೆರುಬ್ಬಾಬೆಲನ ನಾಯಕತ್ವದಲ್ಲಿ ದೇವಾಲಯವನ್ನು ಪುನರ್ ನಿರ್ಮಿಸಿತು. ಶತ್ರುಗಳ ವಿರೋಧದಿಂದ ನಿರ್ದಿಷ್ಟಪಡಿಸಿದ ಸಮಯಕ್ಕಿಂತ ಹೆಚ್ಚು ಸಮಯ ಬೇಕಾಯಿತು. ಪ್ರವಾದಿಗಳಾದ ಹಗ್ಗಾಯ ಮತ್ತು ಜೆಕರ್ಯರು ದೇವಾಲಯವನ್ನು ಪೂರ್ಣಗೊಳಿಸುವಂತೆ ಜನರನ್ನು ಹುರಿದುಂಬಿಸಿದಾಗ ಮಾತ್ರ ದೇವಾಲಯವು ಪೂರ್ಣವಾಗಿ ಕಟ್ಟಲ್ಪಟ್ಟಿತ್ತು. ಎರಡನೇಯ ತಂಡವು (ಧರ್ಮಶಾಸ್ತ್ರೀಯಾದ ಎಜ್ರನ ನಾಯಕತ್ವದ ಅಡಿಯಲ್ಲಿ) ದೇವಾಲಯದ ಆಚರಣೆಯಲ್ಲೂ ಮತ್ತು ಆತ್ಮೀಕ ಜೀವಿತಗಳಲ್ಲಿ ಸುಧಾರಣೆಯನ್ನುಂಟು ಮಾಡಿತ್ತು. ಆದರೆ ಮೂರನೇಯ ತಂಡವು ನೆಹೆಮೀಯನ ನಾಯಕತ್ವದಲ್ಲಿ ಯೆರೂಸಲೇಮಿನ ಸುತ್ತಲಿರುವ ಗೋಡೆಯನ್ನು ಪುನರ್ ನಿರ್ಮಿಸುವ ತನಕ ಆ ಗೋಡೆಗಳು ಹಾಗೆಯೇ ಹಾಳು ಬಿದ್ದಿದ್ದವು. ಆದರೆ ಎಲ್ಲಾ ಯೆಹೂದ್ಯರು ಯೆರೂಸಲೇಮಿಗೆ ಹಿಂತಿರುಗಲಿಲ್ಲ. ಅನೇಕರು ಬಾಬೆಲಿನಲ್ಲಿಯೂ ಮತ್ತು ಪರ್ಷಿಯದಲ್ಲಿಯೂ ನೆಲೆಸಿದರು. ಇದೇ ಡೈಯ್ಯಾಸ್ಪೋರಾ (ಚದುರಿಸಲ್ಪಡುವಿಕೆ) ಎಂದು ಕರೆಯಲ್ಪಡುವುದರ ಪ್ರಾರಂಭವಾಗಿದೆ (ಪ್ಯಾಲೆಸ್ತೇನಿನಿಂದ ಹೊರಗಡೆ ವಾಸಿಸುವ ಯೆಹೂದ್ಯರುಗಳೆಂದರ್ಥ). ಹೊಸ ಒಡಂಬಡಿಕೆಯ ಕಾಲದಲ್ಲಿ ಪ್ಯಾಲೆಸ್ತೇನಿನಲ್ಲಿ ವಾಸಿಸುವ ಯೆಹೂದ್ಯರಿಗಿಂತ ಹೊರಗಡೆ ವಾಸಿಸುವವರೆ ಹೆಚ್ಚಾಗಿದ್ದರು. ಇಂದು ಸಹ ಹಾಗೆಯೇ ಇದೆ.

ಈ ಕಾಲಾವಧಿಯನ್ನು ಎಜ್ರನು ಮತ್ತು ನೆಹೆಮೀಯನು ಪುಸ್ತಕಗಳಲ್ಲಿ ವಿವರಿಸಲಾಗಿದೆ. ಎಸ್ತೇರಳ ಪುಸ್ತಕವು ಪರ್ಷಿಯದಲ್ಲಿ ನೆಲೆಸಿದ್ದ ಯೆಹೂದ್ಯರ ಜೀವನ ಹೇಗಿತ್ತೆಂಬುದರ ಕುರಿತ ಚಿತ್ರಣವನ್ನು ನಮಗೆ ನೀಡುತ್ತದೆ. ಪ್ರವಾದಿಯಾದ ಮಲಾಕಿಯನು ಈ ಕಾಲಾವಧಿಯಲ್ಲಿ ಯೆರೂಸಲೇಮಿನಲ್ಲಿದ್ದ ಕೆಟ್ಟ ಆತ್ಮೀಕ ಮತ್ತು ಅನೈತಿಕ ಸ್ಥಿತಿಗಳ ಕುರಿತು ನಮಗೆ ತಿಳಿಸುತ್ತಾನೆ.

**ಓದಬೇಕಾದ ಅಧ್ಯಾಯಗಳು:**

- ಎಜ್ರ 2: ಜೆರುಬ್ಬಾಬೆಲನ ನಾಯಕತ್ವದಲ್ಲಿ ಹಿಂತಿರುಗಿದ್ದು ಮತ್ತು ದೇವಾಲಯವನ್ನು ಪುನರ್ ನಿರ್ಮಿಸಿದ್ದು
- ಎಜ್ರ 6: ಎಜ್ರನು ಯೆರೂಸಲೇಮಿಗೆ ಬಂದದ್ದು
- ಎಜ್ರ 7: ಎಜ್ರನು ಯೆರೂಸಲೇಮಿಗೆ ಬಂದದ್ದು
- ನೆಹೆಮೀಯ 12: ಯೆರೂಸಲೇಮಿನ ಗೋಡೆಗಳ ಪ್ರತಿಷ್ಠೆ
- ಎಸ್ತೇರಳು 2: ಯೆಹೂದ್ಯಳಾದ ಎಸ್ತೇರಳು ಪರ್ಷಿಯದ ರಾಣಿಯಾದದ್ದು
- ಮಲಾಕಿ 1: ಕೆಟ್ಟಯಾಜಕರ ವಿರುದ್ಧ ಪ್ರವಾದನೆ

**ವಿದ್ಯಾರ್ಥಿ:** ಹಾಗಾದರೆ ಪಂಡಿತರೇ, ನೀವು ಈಗ ಹಳೇ ಒಡಂಬಡಿಕೆಯ ಅವಧಿಯನ್ನು ಪೂರ್ತಿಯಾಗಿ ವಿವರಿಸಿದ್ದೀರಿ ! ಈಗ ನಾವು ಸ್ವಲ್ಪ ವಿರಾಮ ತೆಗೆದುಕೊಳ್ಳೋಣ !

**ಪಂಡಿತ:** ಹೌದು, ಹಳೇ ಒಡಂಬಡಿಕೆಯ ಕಾಲಾವಧಿಯಲ್ಲಿ ಬರುವ ಸತ್ಯವೇದ ನಾಟಕದ 10 ದೃಶ್ಯಗಳನ್ನು ನಾನು ಈಗ ಮುಗಿಸಿದ್ದೇನೆ. ಇದು ಬಹಳ ಉದ್ದವಾದ ಅಧ್ಯಾಯವಾದದ್ದರಿಂದ ನೀನು ಹೇಳಿದಂತೆಯೇ ನಾವು ಸ್ವಲ್ಪ ಸಮಯ ವಿರಾಮ ತೆಗೆದುಕೊಳ್ಳೋಣ. ಆದರೆ ಮೊದಲು ಈ 10 ದೃಶ್ಯಗಳಿಗೆ ಸಂಬಂಧಿಸಿದಂತೆ ನಾನು ನಿನಗೆ ಕೆಲವು ಪ್ರಶ್ನೆಗಳನ್ನು ನೀಡುತ್ತೇನೆ. ನಮ್ಮ ವಿರಾಮದ ನಂತರ ನೀನು ಈ ಪ್ರಶ್ನೆಗಳನ್ನು ಉತ್ತರಿಸಬಹುದಾಗಿದೆ.

## ಪ್ರಶ್ನೆಗಳು

1. ಮೂಲ ಪಿತೃಗಳು ಯಾರು?
2. ಯೋಸೇಫನು ತನ್ನ ತಂದೆ ಮತ್ತು ಸಹೋದರರನ್ನು ಯಾಕೆ ಐಗುಪ್ತಕ್ಕೆ ಕರೆತಂದನು ಮತ್ತು ಐಗುಪ್ತದಲ್ಲಿ ಇಸ್ರಾಯೇಲ್ಯರಿಗೆ ಏನು ಸಂಭವಿಸಿತು?
3. ವಾಗ್ದಾನದ ದೇಶಕ್ಕೆ ಇಸ್ರಾಯೇಲರನ್ನು ನಡೆಸಿದ್ದ ವ್ಯಕ್ತಿಯ ಹೆಸರೇನು? ಇದು ಯಾವಾಗ ಸಂಭವಿಸಿತು?
4. ನ್ಯಾಯಸ್ಥಾಪಕರುಗಳ ಪುಸ್ತಕದಲ್ಲಿ ಪುನಃ ಪುನಃ ಪುನರಾವರ್ತಿ ಆಗುತ್ತಿದ್ದ ಸಂಗತಿ ಏನು?
5. ಸಂಯುಕ್ತ ರಾಜ್ಯದ ಮೂರು ಅರಸರು ಯಾರು?
6. ಅವರಲ್ಲಿದ್ದ ಮೊದಲ ಇಬ್ಬರನ್ನು ಅಭಿಷೇಕಿಸಿದ ಪ್ರವಾದಿಯ ಹೆಸರೇನು?
7. ರಾಜ್ಯವು ಯಾಕೆ ವಿಭಜನೆಯಾಯಿತು?
8. ಉತ್ತರ ರಾಜ್ಯದ ಹೆಸರೇನು? ದಕ್ಷಿಣ ರಾಜ್ಯದ ಹೆಸರೇನು?
9. ಈ ಎರಡು ರಾಜ್ಯಗಳ ಅರಸರುಗಳು ಹೇಗಿದ್ದರು?
10. ದಾವೀದನ ಸಂತತಿಯವರು ಯಾವ ರಾಜ್ಯದಲ್ಲಿ ಆಳ್ವಿಕೆ ಮಾಡಿದರು?
11. ಕ್ರಿ.ಪೂ. 722 ರಲ್ಲಿ ಏನು ಸಂಭವಿಸಿತು?
12. ಕ್ರಿ.ಪೂ 586 ರಲ್ಲಿ ಏನು ಸಂಭವಿಸಿತು?
13. ಬಾಬೆಲಿನಲ್ಲಿ ಸೆರೆಯಾಳುಗಳಾಗಿದ್ದಾಗ ಇಸ್ರಾಯೇಲ್ಯರ ಧಾರ್ಮಿಕ ಆಚರಣೆಯಲ್ಲಿ ಉಂಟಾದ ಮೂರು ಬದಲಾವಣೆಗಳನ್ನು ತಿಳಿಸಿರಿ !
14. ಬಾಬೆಲಿನಿಂದ ಯೆಹೂದ ಮತ್ತು ಯೆರೂಸಲೇಮಿಗೆ ಯೆಹೂದ್ಯರು ಮೂರು ಹಂತಗಳಲ್ಲಿ ಹಿಂತಿರುಗಿದರು. ಪ್ರತಿ ಹಂತಗಳನ್ನು ಮುನ್ನಡೆಸಿದ ನಾಯಕುಗಳ ಹೆಸರುಗಳೇನು? ಯೆರೂಸಲೇಮಿಗೆ ಹಿಂತಿರುಗಿದ ಮೇಲೆ ಈ ಮೂರು ನಾಯಕರುಗಳು ಪೂರ್ಣಗೊಳಿಸಿದ್ದ ಕಾರ್ಯಗಳೇನು?
15. ಹಳೇ ಒಡಂಬಡಿಕೆಯ ಬಹಳಷ್ಟು ಪುಸ್ತಕಗಳನ್ನು ಸತ್ಯವೇದ ನಾಟಕದಲ್ಲಿನ ಹಳೇ ಒಡಂಬಡಿಕೆಯ 'ಅಂಕ' ದೊಂದಿಗೆ ವ್ಯತ್ಯಾಸವಾದ ಕಾಲಾವಧಿಗಳಲ್ಲಿ (ದೃಶ್ಯಗಳಲ್ಲಿ) ಜೋಡಿಸಬಹುದಾಗಿದೆ. ಪ್ರತಿಯೊಂದು ಪುಸ್ತಕದ ನಂತರ ಕಾಲಾವಧಿಯ (ದೃಶ್ಯದ) ಹೆಸರುಗಳನ್ನು ಬರೆಯಿರಿ.

   ಅ) ನೆಹೆಮೀಯನು: ……

ಆ) ದಾನಿಯೇಲನು: ……

ಇ) ಯೆರೆಮೀಯನು: ……

ಈ) 2 ಅರಸರುಗಳು: ……

ಉ) 2 ಸಮುವೇಲನು: ……

ಊ) ನ್ಯಾಯಸ್ಥಾಪಕರು: ……

ಋ) ಯೆಹೋಶುವನು: ……

ಎ) ವಿಮೋಚನಕಾಂಡ: ……

ಏ) ಆದಿಕಾಂಡ 12-50: ……

ಐ) ಆದಿಕಾಂಡ 1-11: ……

16. ಸತ್ಯವೇದ ನಾಟಕದಲ್ಲಿ ಹಳೇ ಒಡಂಬಡಿಕೆಯ "ಅಂಕ" ದಲ್ಲಿ ಅತೀಪ್ರಮುಖ ಮತ್ತು ಆಸಕ್ತಿಯುಳ್ಳ ಅನೇಕ ವ್ಯಕ್ತಿಗಳಿದ್ದಾರೆ. ಈ ಪ್ರತಿಯೊಬ್ಬ ವ್ಯಕ್ತಿಯ ನಂತರದಲ್ಲಿ ಕಾಲಾವಧಿಯ (ದೃಶ್ಯದ) ಹೆಸರುಗಳನ್ನು ಬರೆಯಿರಿ:

ಅ) ದಾವೀದನು: ……

ಆ) ಇಸಾಕನು: ……

ಇ) ಜೆರುಬ್ಬಾಬೆಲನು: ……

ಈ) ನೋಹನು: ……

ಉ) ಯೆಹೆಜ್ಕೇಲನು: ……

ಊ) ಮೋಶೆಯು: ……

ಋ) ಯೆಹೋಶುವನು: ……

ಎ) ಗಿದ್ಯೋನನು: ……

ಏ) ಎಲೀಯನು: ……

ಐ) ಯೆರೆಮೀಯನು: ……

17. ಸತ್ಯವೇದ ನಾಟಕದಲ್ಲಿ ಹಳೇ ಒಡಂಬಡಿಕೆಯ "ಅಂಕದ" ಅವಧಿಯಲ್ಲಿ ಬಹಳ ಆಸಕ್ತಿಯುತ ಸಂಗತಿಗಳು ಸಂಭವಿಸಿದ್ದವು. ಈ ಪ್ರತಿಯೊಂದು ಸಂಗತಿಗಳ ನಂತರ ಆ ಅವಧಿಯ (ದೃಶ್ಯದ) ಹೆಸರುಗಳನ್ನು ತಿಳಿಸಿರಿ.

ಅ) ಯೆರೂಸಲೇಮಿನ ಗೋಡೆಗಳನ್ನು ಪುನಃ ಕಟ್ಟಿದ್ದು: ……

ಆ) ಗಿದ್ಯೋನನು ಕುರಿಯ ತುಪ್ಪಟವನ್ನು ಕಣದಲ್ಲಿ ಇಟ್ಟಿದ್ದು: ……

ಇ) ಸಮುವೇಲನು ಸೊಲೊಮೋನನನ್ನು ಅರಸನನ್ನಾಗಿ ಅಭಿಷೇಕಿಸಿದ್ದು: ……

ಈ) ದೇವರ ಮಹಿಮೆಯು ಆಲಯವನ್ನು ಬಿಟ್ಟುಹೋದದ್ದು: ……

ಉ) ಹತ್ತು ಉಪದ್ರವಗಳು: ……

ಊ) ಬಾಬೆಲ್ ಗೋಪುರ: ……

ಋ) ಅರಸನಾದ ಹಿಜ್ಕೀಯನು ದೇವರಿಗೆ ಮೊರೆಯಿಟ್ಟಿದ್ದು: ……

ಎ) ಯೆರಿಕೋವಿನ ಗೋಡೆಗಳು ಬಿದ್ದದ್ದು: ……

ಏ) ದಾವೀದನು ಗೋಲ್ಯಾತನನ್ನು ಕೊಂದದ್ದು: ……

ಐ) ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆ: ……

# ನಾಟಕದ ಎರಡನೇಯ ಅಂಕ (ಹೊಸ ಒಡಂಬಡಿಕೆ)

**ಪಂಡಿತ:** ಮರಳಿ ಸ್ವಾಗತ ! ನಾನು ಈ ಮುಂಚೆ ನಿನಗೆ ಕೊಟ್ಟ ಸತ್ಯವೇದ ನಾಟಕದಲ್ಲಿನ ಹಳೇ ಒಡಂಬಡಿಕೆಯ ಅಂಕದಲ್ಲಿ ಬರುವ '10 ದೃಶ್ಯ' ಗಳ ಆಧಾರಿತ ಪ್ರಶ್ನೆಗಳೆಲ್ಲವನ್ನು ನೀನು ಉತ್ತರಿಸಲು ಶಕ್ತನಾಗಿರುತ್ತಿ ಎಂದು ನಾನು ನಂಬುತ್ತೇನೆ.

**ವಿದ್ಯಾರ್ಥಿ:** ಹೌದು, ನನ್ನ ಕೆಲವು ಸ್ನೇಹಿತರೊಂದಿಗೆ ಕೂಡಿಕೊಂಡು ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಕಂಡುಕೊಂಡಿದ್ದೇನೆ. ಪ್ರಶ್ನೆಗಳು ಬಹಳ ಉಪಯುಕ್ತವಾದವುಗಳೆಂದು ನಾವು ತಿಳಿದಿದ್ದೇವೆ. ನಾವು ಹೆಚ್ಚು ನೆನಪಿನಲ್ಲಿ ಇಟ್ಟುಕೊಳ್ಳಲು ಅವುಗಳು ಸಹಾಯಮಾಡುತ್ತವೆ.

**ಪಂಡಿತ:** ಸತ್ಯವೇದ ನಾಟಕದ ಕೊನೆಯ ನಾಲ್ಕು ದೃಶ್ಯಗಳ ಕುರಿತು ನೀನು ಈಗ ಸಿದ್ಧವಾಗಿದ್ದೀಯಾ ಎಂದು ನಾನು ನಂಬುತ್ತೇನೆ. ಮೊದಲ 10 ದೃಶ್ಯಗಳು ನಿನಗೆ ಬೇಸರಿಕೆಯನ್ನುಂಟು ಮಾಡಿತ್ತಾ?

**ವಿದ್ಯಾರ್ಥಿ:** ಇಲ್ಲ, ಅವುಗಳು ನನಗೆ ಬೇಸರಿಕೆಯನ್ನು ಉಂಟುಮಾಡಲಿಲ್ಲ ಮತ್ತು ಈಗ ನಾನು ಕಥೆಯ ಮುಂದುವರೆಯುವಿಕೆಗೆ ಸಿದ್ಧನಿದ್ದೇನೆ.

**ಪಂಡಿತ:** ಒಳ್ಳೆಯದು ! ಹೊಸ ಒಡಂಬಡಿಕೆಯನ್ನೊಳಗೊಂಡ ಮೂರು ದೃಶ್ಯಗಳ ಕುರಿತು ನಾನು ನಿನಗೆ ತಿಳಿಸುವುದಕ್ಕಿಂತ ಮೊದಲು, ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿರುವ 400 ವರ್ಷಗಳ ಮಧ್ಯಕಾಲದ ಕುರಿತು ಕೆಲವು ಸಂಗತಿಗಳನ್ನು ನಿನಗೆ ತಿಳಿಸುತ್ತೇನೆ.

# ಅಂಕ II. ದೃಶ್ಯ 1: ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಕಾಲ (ಕ್ರಿ.ಪೂ. 444 ರಿಂದ ಕ್ರಿ.ಪೂ. 5 ರವರೆಗೆ)

ಸತ್ಯವೇದದ ಎರಡೂ ಭಾಗಗಳ ನಡುವಿನ 440 ವರ್ಷಗಳ ಈ ಅವಧಿಯಲ್ಲಿ ರಾಜಕೀಯವಾಗಿಯೂ ಮತ್ತು ಆತ್ಮೀಕವಾಗಿಯೂ ಅನೇಕ ಪ್ರಾಮುಖ್ಯವಾದ ಸಂಗತಿಗಳು ಸಂಭವಿಸಿದವು. ಈ ಅವಧಿಯ ಪ್ರಾರಂಭದಲ್ಲಿ ಪರ್ಷಿಯಾದವರು ಯೆಹೂದ ಪ್ರಾಂತ್ಯದ ಮೇಲೆ ಭೌಗೋಳಿಕ ಹಿಡಿತವನ್ನು ಸಾಧಿಸಿದ್ದರು. ಯೆಹೂದ್ಯರು ಧರ್ಮಶಾಸ್ತ್ರವನ್ನು ಅಭ್ಯಾಸಿಸುವುದನ್ನು ಮುಂದುವರೆಸಿದರು, ಮತ್ತು ಈ ಅವಧಿಯಲ್ಲಿ ಇಬ್ರಿಯ ಸತ್ಯವೇದದ ಮೂರು ಭಾಗಗಳಾದ ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಇತರ ಬರಹಗಳೆಲ್ಲವನ್ನು ಸೇರಿಸಿ ಒಂದು ಪುಸ್ತಕವನ್ನಾಗಿ ಮಾಡಲಾಯಿತು.

ಆದರೆ ಕ್ರಿ.ಪೂ. 4 ನೇ ಶತಮಾನದ ಕೊನೆಯಲ್ಲಿ ಗ್ರೀಕ್ ಅರಸನಾದ ಅಲೆಗ್ಸಾಂಡರ್ ಮಹಾಶಯನು ಪರ್ಷಿಯಾದವರನ್ನು ಸೋಲಿಸಿ ಹಳೇಯ ಇಸ್ರಾಯೇಲ್ ರಾಜ್ಯವನ್ನು ಸಂಪೂರ್ಣವಾಗಿ ತನ್ನ ಆಳ್ವಿಕೆಯ ಅಡಿಯಲ್ಲಿ ತಂದನು. ಅತೀ ಶೀಘ್ರದಲ್ಲಿಯೇ ಗ್ರೀಕ್ ಸಂಪ್ರದಾಯವು ಈ ಗ್ರೀಕ್ ಸಾಮ್ರಾಜ್ಯದ ಮೂಲೆಮೂಲೆಗಳಿಗೆ ಹರಡಿತು. ಗ್ರೀಕ್ ಭಾಷೆಯು ಜನರ ದೈನಂದಿನ ಸಾಮಾನ್ಯ ಭಾಷೆಯಾಯಿತು. ಗ್ರೀಕ್ ತತ್ವಜ್ಞಾನ ಮತ್ತು ಧರ್ಮಗಳು ಬೇರುಬಿಟ್ಟವು. ಅಲೆಗ್ಸಾಂಡರನ ಮರಣದ ನಂತರ ಅವನ ಸಾಮ್ರಾಜ್ಯವು ಆತನ ಸೇನಾಧಿಪತಿಗಳಲ್ಲಿ ವಿಭಾಗವಾಯಿತು.

ಪ್ರಾರಂಭದಲ್ಲಿ ಪವಿತ್ರಭೂಮಿಯು ಗ್ರೀಕ್ ಮಾತನಾಡುವ ಐಗುಪ್ತದ ಅರಸರುಗಳಿಂದ ಆಳ್ವಿಕೆ ಮಾಡಲ್ಪಟ್ಟಿತ್ತು. ನಂತರದ ದಿನಗಳಲ್ಲಿ ಇದು ಗ್ರೀಕ್ ಭಾಷೆಯನ್ನು ಮಾತನಾಡುವ ಸಿರಿಯಾದ ಅರಸರುಗಳ ಒಂದು ಭಾಗವಾಯಿತು.

ಅತೀಶೀಘ್ರದಲ್ಲಿಯೇ ಇಬ್ರಿಯ ಸತ್ಯವೇದವು (ನಮ್ಮ ಹಳೇ ಒಡಂಬಡಿಕೆ) ಗ್ರೀಕ್ ಭಾಷೆಯಲ್ಲಿ ತರ್ಜುಮೆಗೊಂಡಿತ್ತು. ಇದು ಐಗುಪ್ತದಲ್ಲಿ ಸಂಭವಿಸಿತು. ತರ್ಜುಮೆಯನ್ನು ಸೆಪ್ಟ್ಯುಜೆಂಟ್ ಎಂದು ಕರೆಯಲಾಗುತ್ತಿತ್ತು. ಇದು ಹೊಸ ಒಡಂಬಡಿಕೆಯ ಬರಹಗಾರರಿಂದ ಉಪಯೋಗಿಸಲ್ಪಟ್ಟ ಹಳೇ ಒಡಂಬಡಿಕೆಯ ಆವೃತ್ತಿಯಾಗಿದೆ.

ಕ್ರಿ.ಪೂ. 168 ರಲ್ಲಿ ಸಿರಿಯಾದ ಆಡಳಿತಗಾರನಾದ 4 ನೇಯ ಅಂತಿಯೋಕಸ್ ಎಪಿಫಾನಸನು ಯೆರೂಸಲೇಮನ್ನು ವಶಪಡಿಸಿಕೊಂಡನು. ಈತನು ಗ್ರೀಕರ ಅತ್ಯುನ್ನತ ದೇವರಾದ ಝಿಯಸನ ಮೂರ್ತಿಯನ್ನು ಯೆರೂಸಲೇಮಿನ ದೇವಾಲಯದಲ್ಲಿ ಸ್ಥಾಪಿಸಿದನು. ಈ ಭಯಾನಕ ಘಟನೆಯಿಂದ ಯೆಹೂದ್ಯರು ಯೂದ ಮೆಕ್ಕಾಬೇಸನ ನಾಯಕತ್ವದಲ್ಲಿ ದಂಗೆ ಎದ್ದರು. ಕೊನೆಯಲ್ಲಿ ಯೆಹೂದ್ಯರು ದೇವಾಲಯವನ್ನು ಪುನಃ ವಶಪಡಿಸಿಕೊಂಡು, ಆ ವಿಗ್ರಹವನ್ನು ಕಿತ್ತುಹಾಕಿ ದೇವಾಲಯವನ್ನು ಶುದ್ಧಿಮಾಡಿದರು.

ಯೆಹೂದ್ಯರು ಸುಮಾರು 100 ವರ್ಷಗಳ ಕಾಲ ರಾಜಕೀಯ ಸ್ವಾತಂತ್ರ್ಯವನ್ನು ಪಡೆದು ಅನುಭವಿಸಿದರು. ಈ ಅವಧಿಯಲ್ಲಿಯೇ ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ ಸಭಾಮಂದಿರಗಳಂತಹ ಅನೇಕ ಕಾರ್ಯಗಳು ಅಭಿವೃದ್ಧಿಯಾದವು. ಯೆಹೂದ್ಯ ನಂಬಿಕೆಯಲ್ಲಿ ಕಂಡುಬರುವಂಹ ಫರಿಸಾಯರು ಮತ್ತು ಸದ್ದುಕಾಯರು ಎಂಬ ಎರಡು ಪಂಗಡಗಳು ಸಹ ಇದೇ ಅವಧಿಯಲ್ಲಿಯೇ ಹುಟ್ಟಿಕೊಂಡವು. ಆದರೆ ಕ್ರಿ.ಪೂ. 63 ರಲ್ಲಿ ರೋಮನ್ನರ ಸೇನಾಧಿಪತಿಯಾದ ಪಾಂಪಿಯನು ಯೆರೂಸಲೇಮನ್ನು ವಶಪಡಿಸಿಕೊಂಡನು. ಆದ್ದರಿಂದ ಯೂದಾಯವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ರೋಮನ್ ಸಾಮ್ರಾಜ್ಯದ ಒಂದು ಪ್ರಾಂತ್ಯವಾಯಿತು. ಇದೇ ರೀತಿಯ ರಾಜಕೀಯ ಪರಿಸ್ಥಿತಿಯು ಹೊಸ ಒಡಂಬಡಿಕೆಯ ಕಾಲದವರೆಗೂ ಮುಂದುವರೆದಿತ್ತು.

# ಅಂಕ II. ದೃಶ್ಯ 2: ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು (ಕ್ರಿ.ಪೂ. 5 ರಿಂದ ಕ್ರಿ.ಶ 30 ರವರೆಗೆ)

ಕ್ರಿ.ಶ. 6 ನೇ ಶತಮಾನದಲ್ಲಿ ಒಬ್ಬ ಕ್ರೈಸ್ತ ಸನ್ಯಾಸಿಯು ಯೇಸು ಕ್ರಿಸ್ತನ ಜನನದ ವರ್ಷವನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನಿಸಿದನು. ಆದರೆ ಆತನು ಹೆರೋದ ಮಹಾಶಯನ ಆಳ್ವಿಕೆಯ ಕುರಿತ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳುವುದರಲ್ಲಿ ವಿಫಲನಾದನು. ಆದ್ದರಿಂದ ಆತನು ಒಂದು ತಪ್ಪನ್ನು ಮಾಡಿದನು ! ಹೆರೋದ ಮಹಾಶಯನು ಕ್ರಿ.ಪೂ. 4 ರಲ್ಲಿ ಮರಣ ಹೊಂದಿದನೆಂದು ಇಂದು ನಮಗೆ ತಿಳಿದುಬಂದಿದೆ. ಆದರೆ ಹೆರೋದ ಮಹಾಶಯನ ಆಳ್ವಿಕೆಯಲ್ಲಿಯೇ ಯೇಸು ಕ್ರಿಸ್ತನು ಜನಿಸಿದನೆಂದು ಸತ್ಯವೇದವು ತಿಳಿಸುತ್ತದೆ. ಹಾಗಾದರೆ ಯೇಸು ಕ್ರಿಸ್ತನು ಕ್ರಿ.ಪೂ. 4 ರ ಮುಂಚೆ, ಬಹುಶಃ ಕ್ರಿ.ಪೂ. 7 ಮತ್ತು 5 ರ ನಡುವೆ ಜನಿಸಿರಬಹುದಾಗಿದೆ.

ಸತ್ಯವೇದ ನಾಟಕದ ಈ ದೃಶ್ಯದಲ್ಲಿ ರಕ್ಷಣೆ ಮತ್ತು ಆಶೀರ್ವಾದದ ಸಮಯವು ದೇವರು 2000 ವರ್ಷಗಳ ಮುಂಚೆ ಅಬ್ರಹಾಮನಿಗೆ ಮಾಡಿದ್ದ ವಾಗ್ದಾನದೊಂದಿಗೆ ಪ್ರಾರಂಭವಾಗುತ್ತದೆ (ಆದಿ. 12:3). ಯೇಸುವಿನ ಜನನದ ಸಮಯದಲ್ಲಿ ಯೆಹೂದ್ಯರು ತಮ್ಮ ವಿಮೋಚನೆಗಾಗಿ ತವಕದಿಂದ ಕಾಯುತ್ತಿದ್ದರು. ಆದರೆ ಸುವಾರ್ತೆಗಳು ತಿಳಿಸುವ ವಿಮೋಚನೆಯು ಅದು ರಾಜಕೀಯ ವಿಮೋಚನೆ ಅಲ್ಲ. ಆದರೆ ಇದು ಈಗಾಗಲೇ ಸತ್ಯವೇದ ನಾಟಕದ ಮೊದಲ ಅಂಕದ ಮೊದಲ ದೃಶ್ಯದಲ್ಲಿ ಕಂಡುಬರುವ ಏದೆನ್ ತೋಟದಲ್ಲಿ ಪ್ರವೇಶವಾದ ಪಾಪ ಮತ್ತು ಮರಣದಿಂದ ಉಂಟಾಗುವ ವಿಮೋಚನೆಯ ಕುರಿತು ತಿಳಿಸುತ್ತದೆ.

ಸುವಾರ್ತೆಗಳು ಯೇಸುವಿನ ಜೀವನದ ಎಲ್ಲಾ ದಾಖಲೆಗಳನ್ನು ವಿವರಿಸುವುದಿಲ್ಲ. ಆದರೆ ಅವುಗಳು ಯೇಸುವಿನ ಶ್ರಮೆ, ಮರಣ ಮತ್ತು ಪುನರುತ್ಥಾನದ ಕುರಿತು ಒತ್ತಿಹೇಳುತ್ತವೆ. ಸುವಾರ್ತೆಯ ಬರಹಗಾರರು ನಿರ್ದಿಷ್ಟವಾದ ಸಂದೇಶದ ಜೊತೆಯಲ್ಲಿ ಇತಿಹಾಸದ ವಿವರಣೆಯನ್ನು ನೀಡಲು ಬಯಸುತ್ತಾರೆ. ಅವರು ಯೇಸುವಿನ ಮರಣ ಮತ್ತು ಪುನರುತ್ಥಾನದ ಸಂಗತಿಗಳನ್ನು ಕುರಿತು ಅರ್ಥವಿವರಣೆ ಮಾಡಲು ಬಯಸುತ್ತಾರೆ, ಮತ್ತು ಅವರ ಕೊನೆಯ ಮುಖ್ಯಸಂದೇಶವೇನಂದರೆ ಯೇಸು ಕ್ರಿಸ್ತನು ತನ್ನಲ್ಲಿ ನಂಬಿಕೆಯಿಡುವವರಿಗೆ ಜೀವವನ್ನು ಕೊಡುವುದಕ್ಕಾಗಿ ಆತನು ಮರಣದಿಂದ ಎದ್ದುಬಂದಿದ್ದಾನೆ, ಅಂತಿಮವಾಗಿ ಜೀವವು ಮರಣದ ಮೇಲೆ ಜಯವನ್ನು ಸಾಧಿಸಿದೆ ಎಂಬುದು.

ಯೇಸು ಕ್ರಿಸ್ತನು ಈ ಲೋಕದಲ್ಲಿ ಜನಿಸಿದ ಕ್ಷಣದಿಂದ ಆತನೇ ಸತ್ಯವೇದ ನಾಟಕದ ಪ್ರಮುಖ ಪಾತ್ರಧಾರಿಯಾಗಿದ್ದಾನೆ. ಆದರೆ ಯೇಸು ಕ್ರಿಸ್ತನು ಭೂಮಿ ಮತ್ತು ಆಕಾಶದ ಸೃಷ್ಟಿಗಿಂತ ಮೊದಲೇ, ಈ ಸತ್ಯವೇದ ನಾಟಕದಲ್ಲಿ ಇದ್ದನೆಂಬುದನ್ನು ತಿಳಿಸುವುದರಲ್ಲಿ ಸುವಾರ್ತೆಗಳು ಬಹಳ ಜಾಗೃತಿವಹಿಸಿವೆ (ಈ ಸಂಗತಿಗಾಗಿ ಯೋಹಾನ 1:1-5 ನ್ನು ನೋಡಿರಿ). ಇದು ಸತ್ಯವೇದ ನಾಟಕದ ಪ್ರಧಾನ ಪಾತ್ರವಾಗಿದೆ, ಇದನ್ನು ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನೆಂಬ ನಾಲ್ಕು ಸುವಾರ್ತೆಗಳಲ್ಲಿ ವಿವರಿಸಲಾಗಿದೆ.

### ಓದಬೇಕಾದ ಅಧ್ಯಾಯಗಳು:

- ಲೂಕ 2: ಯೇಸು ಕ್ರಿಸ್ತನ ಜನನ
- ಮತ್ತಾಯ 5-7: ಪರ್ವತಪ್ರಸಂಗ

- ಯೋಹಾನ 14-16: ಶಿಷ್ಯರಿಗೆ ಯೇಸುವಿನ ಬೀಳ್ಕೊಡಿಗೆಯ ಮಾತುಗಳು
- ಮಾರ್ಕ 15: ಯೇಸುವಿನ ಮರಣ
- ಮತ್ತಾಯ 28:16-20: ಮಹಾಆಜ್ಞೆ
- ಲೂಕ 24: ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣ

## ಅಂಕ II. ದೃಶ್ಯ 3: ಸಭೆಯ ಪ್ರಾರಂಭ (ಕ್ರಿ.ಶ. 30 ರಿಂದ ಕ್ರಿ.ಶ. 60 ರವರೆಗೆ)

ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಅವರೆಲ್ಲರೂ ಶರೀರಸಂಬಂಧವಾಗಿ ಅಬ್ರಹಾಮನ ಸಂತತಿಯವರು ಮತ್ತು ದೇವಜನರಾಗಿದ್ದರು. ಹೊಸ ಒಡಂಬಡಿಕೆಯಲ್ಲಿ ನಡೆಯುವ ಘಟನೆಗಳ ಸರಣಿಯ ಮಧ್ಯದಲ್ಲಿ ದೇವರು ಇನ್ನೊಂದು ಗುಂಪಿನ ಜನರನ್ನು ಇಡುತ್ತಾನೆ. ಅವರು ಸಭೆಯಾಗಿದ್ದಾರೆ. ಇವರು ಯೇಸು ಕ್ರಿಸ್ತನೇ ರಕ್ಷಕನೆಂದು ಘೋಷಿಸುವ ಒಂದೇ ಅಂಶವನ್ನು ಇಟ್ಟುಕೊಂಡಿರುವ ಎಲ್ಲಾ ವಿಧವಾದ ಸಂಸ್ಕೃತಿಗಳ ಹಿನ್ನೆಲೆಯಿಂದ ಬಂದಿರುವ ಜನರಾಗಿದ್ದಾರೆ.

ಪಂಚಾಶತ್ತಮದ ಮೊದಲನೇಯ ದಿನವು "ಸಭೆಯ ಉಗಮದ" ದಿನವೆಂದು ಪರಿಗಣಿಸಲ್ಪಟ್ಟಿದೆ. ಆ ದಿನದಲ್ಲಿ ಪವಿತ್ರಾತ್ಮನು ಎಲ್ಲಾ ಅಪೊಸ್ತಲರ ಮೇಲೆ ಸುರಿಸಲ್ಪಟ್ಟನು (ಅಪೊಸ್ತಲರ ಕುತ್ಯಗಳು 2), ಮತ್ತು ಅತೀ ಬೇಗನೇ ವಿಶ್ವಾಸಿಗಳೆಲ್ಲರು ಯೆರೂಸಲೇಮಿನಿಂದ ರೋಮ್ ಪ್ರಾಂತ್ಯದ ಎಲ್ಲಾ ಭಾಗಗಳಿಗೆ ಹರಡಿಕೊಂಡರು.

ಸಭೆಯಲ್ಲಿ ಯೆಹೂದ್ಯರು ಮತ್ತು ಅನ್ಯಜನರು, ಹೇಗೆ ದೇವರು ತನ್ನ ಶಕ್ತಿಯಿಂದ ಪಾಪ ಮತ್ತು ಮರಣದ ಬಲವನ್ನು ಮುರಿದುಹಾಕಿ, ಹಳೇ ಒಡಂಬಡಿಕೆಯಲ್ಲಿ ತಾನು ಮಾಡಿದ್ದ ಆಶೀರ್ವಾದದ ವಾಗ್ದಾನಗಳನ್ನು ಇವರು ಒಟ್ಟಾಗಿ ಅನುಭವಿಸುವಂತವರಾಗಿದ್ದರು. ಯೆರೆಮೀಯನು ಪ್ರವಾದಿಸಿದ್ದ ಹೊಸ ಒಡಂಬಡಿಕೆಯು ಈಗ ಬಂದಿದೆ. ಈ ಹೊಸ ಒಡಂಬಡಿಕೆಯು ಇಸ್ರಾಯೇಲ್ ಜನರಿಗೆ ಮಾತ್ರ ಸೀಮಿತವಾದದ್ದಲ್ಲ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಎಲ್ಲಾ ದೇಶಗಳು ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ.

ಪ್ರಾರಂಭದಲ್ಲಿ ಸಭೆಯು ಕೇವಲ ಯೆಹೂದ್ಯರನ್ನು ಮಾತ್ರ ಹೊಂದಿತ್ತು. ಯೇಸು ಕ್ರಿಸ್ತನು ಮತ್ತು ಆತನ ಮೊದಲ ಶಿಷ್ಯರೆಲ್ಲರು ಯೆಹೂದ್ಯರಾಗಿದ್ದು, ಯೇಸು ಮತ್ತು ಆತನ ರಾಜ್ಯದ ಶುಭವಾರ್ತೆಯು ಮೊದಲು ಯೆರೂಸಲೇಮಿನಲ್ಲಿ ಸಾರಲ್ಪಟ್ಟದ್ದರಿಂದ ಇದಾಯಿತೆಂದು ತಿಳಿದುಕೊಳ್ಳತಕ್ಕದ್ದು. ಆದರೆ ಅತೀ ಬೇಗನೆ ಅನ್ಯರು ಸಹ ಯೇಸುವಿನಲ್ಲಿ ನಂಬಿಕೆಯಿಡಲು ಪ್ರಾರಂಭಿಸಿದರು. ದೇವರು ಅನ್ಯವಿಶ್ವಾಸಿಗಳನ್ನು ಹೇಗೆ ಆಶೀರ್ವದಿಸಿಸುತ್ತಿದ್ದಾನೆಂಬುದನ್ನು ನೋಡಿದ ಯೆಹೂದ್ಯ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 10:44-48), ಹೊಸ ಒಡಂಬಡಿಕೆಯ ಅನ್ಯೋನ್ಯತೆಯು ಅನ್ಯರನ್ನು ಒಳಗೊಂಡಂತೆ ಸರ್ವರಿಗಾಗಿ ಇದೆ ಎಂದು ಅವರು ಅರ್ಥೈಸಿಕೊಂಡರು. ಆದರೆ ಈ ಕ್ರೈಸ್ತ ಅನ್ಯೋನ್ಯತೆಗೆ ಇರುವ ನಿಯಮಗಳನ್ನು ಪ್ರತಿಯೊಬ್ಬರು ಸಮ್ಮತಿಸುವ ಮೊದಲೇ ಸಭೆಯ ನಾಯಕತ್ವದಲ್ಲಿ ವಿವಾದಗಳು ಉಂಟಾಯಿತು (ಅಪೊಸ್ತಲರ ಕೃತ್ಯಗಳು 15).

ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯು ಸ್ಥಳದಿಂದ ಸ್ಥಳಕ್ಕೆ ಮುಟ್ಟುತ್ತಿದ್ದಂತೆ, ಸೇವೆಯು ಬಲಿಷ್ಠ ಸ್ವರೂಪವನ್ನು ಪಡೆಯಿತು. ಅಪೊಸ್ತಲನಾದ ಪೌಲನು ಈ ನಾಟಕದ ಒಬ್ಬ ಪ್ರಮುಖ ಪಾತ್ರಧಾರಿಯಾಗಿದ್ದಾನೆ. ಈ ದೃಶ್ಯದ ಕೊನೆಯಲ್ಲಿ ಪೌಲನು ನ್ಯಾಯವಿಚಾರಣೆಗಾಗಿ ಅನೇಕ ವರ್ಗದ ಅಧಿಕಾರಿಗಳ ಮುಂದೆ ನಿಲ್ಲಬೇಕಾಯಿತು. ಆತನು ತನ್ನ ಪ್ರತಿವಾದದ ಮಾತುಗಳಲ್ಲಿ ಯೇಸು ಕ್ರಿಸ್ತನ ಕುರಿತಾದ ಸಂದೇಶವು ಸತ್ಯವೇದ ನಾಟಕದ ಹಳೇ ಒಡಂಬಡಿಕೆಯ ಸ್ವಾಭಾವಿಕವಾದ ಮುಂದುವರಿಕೆ ಎಂದು ತೋರಿಸಿಕೊಟ್ಟನು.

ಅಪೊಸ್ತಲರ ಕೃತ್ಯಗಳ ಪುಸ್ತಕವು ಈ ಕಾಲಾವಧಿಯ ಅನೇಕ ಘಟನೆಗಳ ಕುರಿತು ನಮಗೊಂದು ಮೇಲ್ನೋಟವನ್ನು ನೀಡುತ್ತದೆ. ಪೌಲನ ಪತ್ರಿಕೆಗಳು ಆ ಕಾಲದಲ್ಲಿ ಸ್ಥಳೀಯ ಸಭೆಗಳಲ್ಲಿದ್ದ ನಿರ್ದಿಷ್ಟವಾದ ಪರಿಸ್ಥಿತಿಗಳಿಗೆ ಅನೇಕ ಉದಾಹರಣೆಗಳನ್ನು ನೀಡುತ್ತವೆ. ಉದಾಹರಣೆಗಾಗಿ ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಬೇರೆ ಬೇರೆ ಸಂಪ್ರದಾಯ ಮತ್ತು ಸಾಮಾಜಿಕ ಹಿನ್ನಲೆಯಿಂದ ಬಂದ ಜನರು ಒಂದೇ ಸಭೆಯಲ್ಲಿ ಸೇರಿ ಆರಾಧಿಸಲು ಇರುವ ಕೆಲವು ಕಠಿಣವಾದ ಸಮಸ್ಯೆಗಳ ಕುರಿತು ನಾವು ಸ್ಪಷ್ಟವಾಗಿ ತಿಳಿಯಬಹುದು.

**ಓದಬೇಕಾದ ಅಧ್ಯಾಯಗಳು:**

- ಅಪೊಸ್ತಲರ ಕೃತ್ಯಗಳು 2: ಪವಿತ್ರಾತ್ಮನ ಸುರಿಯುವಿಕೆ
- ಅಪೊಸ್ತಲರ ಕೃತ್ಯಗಳು 10: ಪೇತ್ರನು ಕೊರ್ನೇಲ್ಯನ ಮನೆಯನ್ನು ಸಂಧಿಸಿದ್ದು
- ಅಪೊಸ್ತಲರ ಕೃತ್ಯಗಳು 15: ಯೆರೂಸಲೇಮಿನಲ್ಲಿ ಅಪೊಸ್ತಲರ ಸಮ್ಮೇಳನ
- ಅಪೊಸ್ತಲರ ಕೃತ್ಯಗಳು 26: ಅಗ್ರಿಪ್ಪರಾಜನ ಮುಂದೆ ಪೌಲನ ಪ್ರತಿವಾದದ ಮಾತುಗಳು
- ಗಲಾತ್ಯದವರಿಗೆ 2: ಯೆಹೂದ್ಯರು ಮತ್ತು ಅನ್ಯರು ಕ್ರಿಸ್ತನ ಸಭೆಯಲ್ಲಿ ಒಂದಾಗಿರುವುದು

# ಅಂಕ II. ದೃಶ್ಯ 4: ಹೊಸ ಒಡಂಬಡಿಕೆಯ ಪುಸ್ತಕಗಳು ಮತ್ತು ಆದಿಸಭೆ (ಕ್ರಿ.ಶ. 60 ರಿಂದ ಕ್ರಿ.ಶ. 90 ರವರೆಗೆ)

ಅಪೊಸ್ತಲ ಪೌಲನ ಸಂಕಷ್ಟಗಳು ಸಂತೋಷದಿಂದಲೇ ಕೊನೆಗೊಂಡವು. ನಾವು ಆತನು ಬರೆದ ಸಭಾಪಾಲಕರ ಪತ್ರಿಕೆಗಳಲ್ಲಿ (1 ಮತ್ತು 2 ನೇ ತಿಮೊಥೆ ಮತ್ತು ತೀತನು) ನೋಡುವಂತೆ, ಆತನ ಸುವಾರ್ತಾ ಸೇವೆಯು ಮುಂದುವರೆದಿತ್ತು. ಆದರೆ ಪೌಲನು ಮತ್ತೊಮ್ಮೆ ರೋಮಿನಲ್ಲಿ ಸೆರೆಮನೆ ವಾಸವನ್ನು ಅನುಭವಿಸಬೇಕಾಯಿತು ಮತ್ತು (ಸಭಾ ಇತಿಹಾಸದ ಪ್ರಕಾರ) ಕ್ರೈಸ್ತರನ್ನು ಹಿಂಸಿಸುತ್ತಿದ್ದ ನಿರೋ ಚಕ್ರವರ್ತಿಯ ಆಳ್ವಿಕೆಯ ಕಾಲದಲ್ಲಿ ಪೌಲನು ಕ್ರಿ.ಶ. 60 ರ ಸುಮಾರಿನಲ್ಲಿ ಹುತಾತ್ಮನಾದನು.

ನಿರೋ ಹಿಂಸೆಯು ಸಭೆಯ ವಿರುದ್ಧವಾಗಿ ಸುಳ್ಳುವದಂತಿಗಳು ಹೆಚ್ಚಾದಂತೆ ಬಹಳ ಭಯಾನಕ ಮತ್ತು ಕ್ರೂರವಾದ ಕೃತ್ಯಗಳು ನಡೆಯಲು ದಾರಿಮಾಡಿಕೊಟ್ಟಿತ್ತು. ಹೊಸ ಒಡಂಬಡಿಕೆಯ ಕೆಲವು ಪತ್ರಿಕೆಗಳು ಈ ಸಮಯದಲ್ಲಿ ಬರೆಯಲ್ಪಟ್ಟವು, ಅವುಗಳ ಮೂಲಕ ಹಿಂಸೆಯನ್ನು ಹಾದುಹೋಗುತ್ತಿದ್ದ ವಿಶ್ವಾಸಿಗಳನ್ನು ಬಲಪಡಿಸಲಾಗುತ್ತಿತ್ತು. ಇಬ್ರಿಯರಿಗೆ ಬರೆದ ಪತ್ರಿಕೆ ಮತ್ತು ಪ್ರಕಟಣೆ ಪುಸ್ತಕಗಳು ಈ ಕಾಲಕ್ಕೆ ಸಂಬಂಧಿಸಿವೆ.

ಆದರೆ ಇನ್ನೂ ಅನೇಕ ಭಯಾನಕ ಅಪಾಯಗಳಿಂದ ಸಭೆಯನ್ನು ಬೆದರಿಸಲಾಯಿತು. ಅನೇಕ ತತ್ವಶಾಸ್ತ್ರಜ್ಞರು ಮತ್ತು ಧಾರ್ಮಿಕ ಬೋಧಕರುಗಳು ರೋಮ್ ಸಾಮ್ರಾಜ್ಯದಾದ್ಯಂತ ಸಂಚರಿಸಿ ತಮ್ಮ ತತ್ವಗಳನ್ನು ಹಬ್ಬಿಸಿದರು. ಈ ತತ್ವಗಳು ಸಭೆಯ ನಂಬಿಕೆಯನ್ನು ಬಲಿಷ್ಠಗೊಳಿಸಿ ಅಪಾಯಕ್ಕೆ ಸಿಕ್ಕಿಸಿತು. ಹಾಗಾಗಿ ಈ ಸಮಯದಲ್ಲಿ ಸಭೆಗಳಿಗೆ ಸರಿಯಾದ ಮತ್ತು ಸ್ಪಷ್ಟವಾದ ಬೋಧನೆಯ ಅಗತ್ಯತೆಯು ಹೆಚ್ಚಾಗಿತ್ತು.

ಹೊಸ ಒಡಂಬಡಿಕೆಯ ಕೆಲವು ಕೊನೆಯ ಪತ್ರಿಕೆಗಳು ಈ ಸಮಸ್ಯೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯಲ್ಪಟ್ಟವು. ಉದಾಹರಣೆಗೆ ಯೋಹಾನನು ಬರೆದ ಮೂರು ಪತ್ರಿಕೆಗಳ ಉದ್ದೇಶವೆನೆಂದರೆ, ಕ್ರಿಸ್ತೀಯ ಸಿದ್ಧಾಂತ, ಕ್ರಿಸ್ತೀಯ ಜೀವಿತ ಮತ್ತು ಕ್ರಿಸ್ತೀಯ ಐಕ್ಯತೆಗಳ ಕುರಿತು ಹೆಚ್ಚು ಗೊಂದಲವಿರುವ ಸಮಯಗಳಲ್ಲಿ ಈ ಪತ್ರಿಕೆಗಳು ಇವುಗಳ ಕುರಿತು ಆಳವಾದ ಮತ್ತು ಸರಿಯಾದ ಜ್ಞಾನವನ್ನು ಕೊಡುವುದಾಗಿದೆ.

ಈ ಅವಧಿಯ ಕೊನೆಯಲ್ಲಿ ಹೊಸ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ಬರೆಯಲ್ಪಟ್ಟಿದ್ದವು. ಸತ್ಯವೇದದ ಕೊನೆಯ ಪುಸ್ತಕವಾದ, ಪ್ರಕಣೆಯ ಪುಸ್ತಕದ ಸಂದೇಶವು ಈ ಅವಧಿಯನ್ನು ದಾಟಿಹೋಗಿತ್ತದೆ. ಇದು ಹಿಂಸೆಗೆ ಒಳಗಾದ ಸಭೆಗಳಿಗೆ "ಯೇಸು ಕ್ರಿಸ್ತನು ಎರಡನೇಯ ಸಾರಿ ಬರುವಾಗ ಎಲ್ಲಾ ದುಷ್ಟತ್ವವನ್ನು ಸಂಪೂರ್ಣವಾಗಿ ಸೋಲಿಸುತ್ತಾನೆಂಬ" ಬಲಪಡಿಸುವ ಮತ್ತು ನಿರೀಕ್ಷಿಸುವ ಸಂದೇಶವನ್ನು ಹೊಂದಿದೆ. ನಾವು ಈ ಅದ್ಭುತವಾದ ಸಮಯಕ್ಕಾಗಿ ಮತ್ತು ಗಳಿಗೆಗಾಗಿ ಇನ್ನೂ ಕಾಯುತ್ತಿದ್ದೇವೆ, ನೀತಿವಂತರು ವಾಸಿಸುವ, ಹೊಸ ಭೂಮಿ ಆಕಾಶವನ್ನು ಎದುರು ನೋಡುತ್ತಿದ್ದೇವೆ.

ಸತ್ಯವೇದ ನಾಟಕದ ಕೊನೆಯ ದೃಶ್ಯವು ಈಗಾಗಲೇ ತಿಳಿಸಿದ ಈ ಕೆಳಗಿನ ಪುಸ್ತಕಗಳಲ್ಲಿ ವಿವರಿಸಲಾಗಿದೆ.

### ಓದಬೇಕಾದ ಅಧ್ಯಾಯಗಳು:

- ಇಬ್ರಿಯರಿಗೆ 1: ಯೇಸುವಿನ ಮೂಲಕ ದೇವರ ಕೊನೆಯ ಮಾತು
- ಇಬ್ರಿಯರಿಗೆ 8: ಹೊಸ ಒಡಂಬಡಿಕೆಯ ಅವಧಿ

- 1 ಯೋಹಾನ 2: ಯೇಸುವಿನ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳುವುದು
- ಪ್ರಕಟಣೆ 2-3: ಏಳು ಸಭೆಗಳಿಗೆ ಪತ್ರಗಳು
- ಪ್ರಕಟಣೆ 4-5: ಸಿಂಹಾಸನಾ ರೂಢನಾದ ದೇವರು ಮತ್ತು ಕುರಿಮರಿಯಾದ ಯೇಸು ಕ್ರಿಸ್ತನು
- ಪ್ರಕಟಣೆ 21: ನೂತನ ಭೂಮ್ಯಾಕಾಶಗಳು

**ವಿದ್ಯಾರ್ಥಿ:** ಪಂಡಿತರೆ ಹಾಗಾದರೆ, ಈಗ ನೀವು ನನಗೆ ಸತ್ಯವೇದ ನಾಟಕದಲ್ಲಿನ ಎರಡು ಅಂಕಗಳನ್ನು ಮತ್ತು 14 ದೃಶ್ಯಗಳನ್ನು ಪ್ರಸ್ತುತಪಡಿಸದಕ್ಕಾಗಿ ನಿಮಗೆ ವಂದನೆಗಳು !

**ಪಂಡಿತ:** ನಾನು ನಿಜವಾಗಿ ನಿನಗೆ ಹೇಳುವುದೇನಂದರೆ ಈ ಪಾಠಗಳು ಪೂರ್ಣಸತ್ಯವೇದದ ಸಂಕ್ಷಿಪ್ತ ಮೇಲು ನೋಟವಾಗಿದೆ, ನೀನು ದೇವರ ವಾಕ್ಯವನ್ನು ಅಭ್ಯಾಸಿಸುತ್ತಾ ಹೋದಂತೆ ನಿನಗೆ ಇದು ಬಹಳ ಉಪಯುಕ್ತವಾಗಿರುತ್ತೆ. ಈಗ, ನಾನು ನಿನಗೆ ಕೆಲವು ಪ್ರಶ್ನೆಗಳನ್ನು ನೀಡುತ್ತೇನೆ, ಅವುಗಳು ನಾಟಕದ ಕೊನೆಯ ನಾಲ್ಕು ದೃಶ್ಯಗಳ ಮಾಹಿತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯಮಾಡುತ್ತವೆ. ಆದರೆ ನೀನು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿದು ಅಭ್ಯಾಸ ಮಾಡಿದ ಮೇಲೆ, ನಾನು ಇನ್ನೊಂದು ಬಾರಿ ನಿನ್ನನ್ನು ಭೇಟಿಯಾಗಲು ಬಯಸುತ್ತೇನೆ, ಅದು ನಿನಗೆ ಇಷ್ಟವಿದೆಯೋ?

**ವಿದ್ಯಾರ್ಥೀ:** ಖಂಡಿತವಾಗಿ ಗುರುಗಳೇ ನಾನು ಸಿದ್ಧನಿದ್ದೇನೆ, ಆದರೆ ಯಾಕೆ ನೀವು ನನ್ನನ್ನು ಭೇಟಿಯಾಗಬೇಕೆಂಬುದರ ಕುರಿತು ನನಗೆ ಕುತೂಹಲವಿದೆ. ನೀವು ಯಾವುದಾದರು ಕಿರುಪರೀಕ್ಷೆಯನ್ನೋ ಅಥವಾ ಪರೀಕ್ಷೆಯನ್ನು ನೀಡುವಿರೋ? ದಯವಿಟ್ಟು ತಿಳಿಸಿರಿ !

**ಪಂಡಿತ:** ಇಲ್ಲ, ಯಾವುದೇ ಕಿರುಪರೀಕ್ಷೆ ಅಥವಾ ಪರೀಕ್ಷೆಗಳಿಲ್ಲ. ಆದರೆ ನಾನು ಮತ್ತೊಮ್ಮೆ ಬೇಟಿಯಾಗುವುದು ಪ್ರಾಮುಖ್ಯವಾಗಿದೆ. ಅದು ಈಗ ಬಹಳ ಅವಶ್ಯವಾದದ್ದು.

**ಪ್ರಶ್ನೆಗಳು:**

1. ಹಳೇ ಒಡಂಬಡಿಕೆಯ ಕೊನೆಯಲ್ಲಿ ಮತ್ತು ಹೊಸ ಒಡಂಬಡಿಕೆಯ ಪ್ರಾರಂಭದ ಮಧ್ಯದಲ್ಲಿದ್ದ 400 ವರ್ಷಗಳಿಗಿಂತ ಅಧಿಕ ಅವಧಿಯಲ್ಲಿ ಸಂಭವಿಸಿದ ಆರು ಪ್ರಮುಖ ಸಂಗತಿಗಳನ್ನು ತಿಳಿಸಿರಿ !
2. ಯೇಸು ಕ್ರಿಸ್ತನು ಕ್ರಿ.ಶ. 5 ಮತ್ತು ಕ್ರಿ.ಶ. 7 ರ ಮಧ್ಯದಲ್ಲಿ ಜನಿಸಿರಲು ಹೇಗೆ ಸಾಧ್ಯ ಎಂಬುದನ್ನು ವಿವರಿಸಿರಿ !
3. ಯೇಸು ಕ್ರಿಸ್ತನು ಯಾವ ರೀತಿಯ ವಿಮೋಚನೆಯನ್ನು ತಂದನು? ಇದು ಆ ದಿನಗಳಲ್ಲಿದ್ದ ಯೆಹೂದ್ಯರ ನಿರೀಕ್ಷೆಗಿಂತ ಯಾವ ರೀತಿ ವ್ಯತ್ಯಾಸವಾಗಿದೆ?
4. ಯೇಸುವಿನ ಜೀವಿತದ ಯಾವ ಭಾಗವನ್ನು ಸುವಾರ್ತೆಗಳು ವಿವರವಾಗಿ ಬರೆದಿವೆ? ಮತ್ತು ಏಕೆ?
5. ಸತ್ಯವೇದದಲ್ಲಿ ಕೇಂದ್ರವಾದ ಅಥವಾ ಪ್ರಧಾನವಾದ ಅಂಕ ಯಾವುದು?
6. ಸತ್ಯವೇದ ನಾಟಕದ ಕೊನೆಯ ದೃಶ್ಯದಲ್ಲಿ ಯಾವ ಗುಂಪಿನ ಜನರು ಕೇಂದ್ರವಾಗಿದ್ದಾರೆ?
7. ಅಪೊಸ್ತಲನಾದ ಪೌಲನ ಜೀವಿತವು ಹೇಗೆ ಕೊನೆಗೊಂಡಿತು?
8. ಸತ್ಯವೇದ ನಾಟಕದ ಕೊನೆಯ ದೃಶ್ಯದಲ್ಲಿ ಸಭೆಗೆ ಉಂಟಾದ ಹಿಂಸೆಗಳೇನು?
9. ಅಪೊಸ್ತಲನಾದ ಯೋಹಾನನು ತನ್ನ ಮೂರು ಪತ್ರಿಕೆಗಳನ್ನು ಯಾಕೆ ಬರೆದನು?
10. ಪ್ರಕಟಣೆ ಪುಸ್ತಕವನ್ನು ನಮಗೆ ದೇವರು ಯಾಕೆ ಕೊಟ್ಟಿರಬಹುದೆಂದು ನೀನು ಆಲೋಚಿಸುತ್ತೀಯಾ?
11. ಸತ್ಯವೇದ ನಾಟಕದ ಕೊನೆಯ ನಾಲ್ಕು ದೃಶ್ಯಗಳಲ್ಲಿ ಅನೇಕ ಪ್ರಮುಖ ಸಂಗತಿಗಳು ಸಂಭವಿಸಿದವು. ಪ್ರತಿಯೊಂದು ಘಟನೆಗಳ ನಂತರ ಕಾಲಾವಧಿಯ ಅಥವಾ ದೃಶ್ಯಗಳ ಹೆಸರುಗಳನ್ನು ಬರೆಯಿರಿ:

    ಅ) ಯೆರೋಸಲೇಮ್ ದೇವಾಲದಲ್ಲಿ ಒಂದು ವಿಗ್ರಹವಿಟ್ಟಿದ್ದು:

ಆ) ಪ್ರಕಟಣೆ ಪುಸ್ತಕವು ಬರೆಯಲ್ಪಟ್ಟದ್ದು:

ಇ) ಹೆಚ್ಚು ಮತ್ತು ಬಲಿಷ್ಠ ಸೇವೆ ನಡೆದ ಕಾಲಾವಧಿ:

ಈ) ಯೋಹಾನನ ಪತ್ರಿಕೆಗಳು ಬರೆಯಲ್ಪಟ್ಟದ್ದು:

ಉ) ಯೇಸು ಶ್ರಮೆಯನ್ನು ಅನುಭವಿಸಿ ಮರಣ ಹೊಂದಿದ್ದು:

ಊ) ಹಳೇ ಒಡಂಬಡಿಕೆಯು ಗ್ರೀಕ್ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟದ್ದು:

ಋ) ಅಪೊಸ್ತಲರ ಮೇಲೆ ಪವಿತ್ರಾತ್ಮನ ಸುರಿಯುವಿಕೆ:

ಎ) ಯೆಹೂದ್ಯ ರೋಮ್ ಪ್ರಾಂತ್ಯವಾದದ್ದು:

ಏ) ಪೌಲನ ಅನೇಕ ಪತ್ರಿಕೆಗಳು ಬರೆಯಲ್ಪಟ್ಟದ್ದು:

ಐ) ಚಕ್ರವರ್ತಿಯಾದ ನಿರೋ ಕ್ರೈಸ್ತರನ್ನು ಹಿಂಸಿಸಿದ್ದು:

ಒ) ಅಬ್ರಹಾಮನಿಗೆ ದೇವರು ಕೊಟ್ಟ ವಾಗ್ದಾನವು ನೆರವೇರಲು ಪ್ರಾರಂಭಿಸಿದ್ದು:

ಓ) ಯೇಸುವಿನ ಜನನ:

12. ಸತ್ಯವೇದ ನಾಟಕದ ಕೊನೆಯ ನಾಲ್ಕು ದೃಶ್ಯಗಳನ್ನು ಪಟ್ಟಿಮಾಡಿರಿ. ಪ್ರತಿ ದೃಶ್ಯಗಳು ಯಾವ ವರ್ಷಗಳಲ್ಲಿ ಪ್ರಾರಂಭಗೊಂಡಿತು ಮತ್ತು ಕೊನೆಗೊಂಡಿತು?

# ದೊಡ್ಡ ಚಿತ್ರಣ

**ಪಂಡಿತ:** ಮರಳಿ ಸ್ವಾಗತ !

**ವಿದ್ಯಾರ್ಥಿ:** ಪಂಡಿತರೆ ಮತ್ತೊಮ್ಮೆ ನಿಮ್ಮನ್ನು ಭೇಟಿಯಾಗುವುದು ಒಳ್ಳೆಯದು. ನೀವು ಹಿಂದಿನ ಸಮಯದಲ್ಲಿ ಕೊಟ್ಟ ಪ್ರತಿಯೊಂದು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದೆನು, ಮತ್ತು ಅದರ ಜೊತೆಯಲ್ಲಿ ಹಿಂದಿನ ಪಾಠದ ಟಿಪ್ಪಣಿ ಪುಸ್ತಕವನ್ನು ಹಾಗೂ ಹಳೆಯ ಪಾಠದ ಪ್ರಶ್ನೆಗಳನ್ನು ಮತ್ತೊಮ್ಮೆ ಓದಿದೆನು. ಹಾಗಾದರೆ ಈಗ ನಾನು ಸತ್ಯವೇದದ ಕುರಿತು ಅನೇಕ ಸಂಗತಿಗಳನ್ನು ಕಲಿತಿದ್ದೇನೆಂದು ನನಗೆ ಅನಿಸುತ್ತದೆ. ಈಗ ನನಗೆ ಸತ್ಯವೇದ ನಾಟಕದ ಕುರಿತು ಗ್ರಹಿಸುವ ಒಳ್ಳೆಯ ಮನಸ್ಸಿದೆ. ನಾನು ತಿಳಿದುಕೊಂಡಿದ್ದನ್ನು ನೀವು ಪರೀಕ್ಷಿಸಲಿಕ್ಕೆ ಬಯಸುವಿರೋ? ಇದಕ್ಕಾಗಿಯೇ ನೀವು ಮತ್ತೊಮ್ಮೆ ನನ್ನನ್ನು ಭೇಟಿಯಾಗಲು ಬಯಸಿದ್ದಾ?

**ಪಂಡಿತ:** ನೀನು ಬಹಳ ವಿಷಯಗಳನ್ನು ಕಲಿತಿರುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ, ಮತ್ತು ನೀನು ಕಲಿತಿರುವ ವಿಷಯವು ನಿನಗೆ ಬಹಳ ಉಪಯುಕ್ತಕರವಾಗಿರುತ್ತವೆ ಎಂದು ನಾನು ನಂಬುತ್ತೇನೆ. ಆದರೆ ಮತ್ತೋಮ್ಮೆ ನೀನು ನನ್ನನ್ನು ಭೇಟಿಯಾಗಲು ಹೇಳಲಿಕ್ಕೆ ಕಾರಣವೆನೆಂದರೆ, ನೀನು ಅರ್ಥಮಾಡಿಕೊಂಡಿರುವುದನ್ನು ಪರೀಕ್ಷಿಸುವುದಕ್ಕೆ ಅಲ್ಲ, ಆದರೆ ದೊಡ್ಡ ಚಿತ್ರಣವೆಂದು ನಾನು ಕರೆಯುವ ಈ ಪ್ರಮುಖ ಸಂಗತಿಗಳ ಮುಖ್ಯ ಅಂಶಗಳನ್ನು ನಿನಗೆ ಅರ್ಥಮಾಡಿಸುವುದಕ್ಕಾಗಿ ಕರೆದೆನು.

ನಾವು ಮೊದಲ ಬಾರಿಗೆ ಭೇಟಿಯಾದಾಗ ಸಂಪೂರ್ಣ ಸತ್ಯವೇದವನ್ನು ಒಳಗೊಂಡಂತಹ ಮುಖ್ಯ ಶೀರ್ಷಿಕೆಯನ್ನು ನಿನಗೆ ನಾನು ಹೇಳಿದ್ದು ನೆನಪಿನಲ್ಲಿ ಇದೇಯಾ?

**ವಿದ್ಯಾರ್ಥಿ:** ಇದು ಒಂದು ಚಾಣಾಕ್ಷತನದ ಪ್ರಶ್ನೆಯಾಗಿದೆ ! ಆದರೆ ಸತ್ಯವೇದ ನಾಟಕದಲ್ಲಿ ದೇವರು ಪ್ರಮುಖ ಪಾತ್ರಧಾರಿಯಾಗಿದ್ದಾನೆಂಬ ವಿಚಾರವನ್ನು ನೀವು ಉಲ್ಲೇಖಿಸುತ್ತಿದ್ದಿರೆಂದು ನಾನು ಆಲೋಚಿಸುತ್ತೇನೆ. ಇದು ನಿಜತಾನೇ?

**ಪಂಡಿತ:** ಆದರೆ ಇದು ಪೂರ್ಣ ಸತ್ಯವಲ್ಲ, ನೀನು ಪೂರ್ಣವಾಗಿ ತಪ್ಪನ್ನು ಸಹ ಹೇಳುತ್ತಿಲ್ಲ ! ಈಗ ನಾನು ನಿನಗೆ ಮೂರು "ಶೀರ್ಷಿಕೆಗಳನ್ನು" ವಿವರಿಸುತ್ತೇನೆ. ಅವುಗಳೆಲ್ಲವು ದೊಡ್ಡ ಚಿತ್ರಣದ ಕುರಿತಾಗಿವೆ. ಗಮನವಿಟ್ಟು ಕೇಳು. ನಾನು ಮುಗಿಸಿದ ಮೇಲೆ ನೀನು ಆ ಅಂಶಗಳ ಸಾರಾಂಶವನ್ನು ತಿಳಿಸಲು ಶಕ್ತನಾಗುತ್ತಿ, ನಂತರದಲ್ಲಿ ಸತ್ಯವೇದದ ಕುರಿತು ಮತ್ತು ಸತ್ಯವೇದ ನಾಟಕದ ಕುರಿತ ನನ್ನ ತಿಳುವಳಿಕೆಯು ಇನ್ನೂ ನಿನಗೆ ಸ್ಪಷ್ಟವಾಗಿರುತ್ತದೆ !

**ವಿದ್ಯಾರ್ಥಿ:** ಪಂಡಿತರೆ ದಯವಿಟ್ಟು ವಿವರಿಸಿರಿ ! ನೀವು ನನ್ನ ಗಮನವನ್ನು ಸಂಪೂರ್ಣವಾಗಿ ಸೆಳೆದಿದ್ದೀರಿ ! ನಿಮ್ಮ ಪ್ರಯಾಸ ಮತ್ತು ಸಮಯಕ್ಕಾಗಿ ನಿಮಗೆ ವಂದನೆಗಳು.

# ಸತ್ಯವೇದದ ವಿಷಯ

ಸತ್ಯವೇದವು ಅನೇಕ ಪುಸ್ತಕಗಳನ್ನೊಳಗೊಂಡ ಒಂದು ಗ್ರಂಥಾಲಯವಿದ್ದಂತೆ. ಇದು ಅನೇಕ ಓದುಗರಿಗೆ ಗೊಂದಲದ ಪುಸ್ತಕವಾಗಿ ಕಾಣುವಂತೆ ಮಾಡುತ್ತದೆ. ನಾನು ಸತ್ಯವೇದದ ವಾಕ್ಯಭಾಗವನ್ನು ಓದುವುದಕ್ಕೆ ತೊಡಗುವಾಗ, ಈ ವಾಕ್ಯಭಾಗವು ಯಾವ ವಿಧವಾಗಿದೆ? ಇದರ ಬರಹಗಾರನು ಯಾರು? ಆತನು ಯಾರಿಗೆ ಬರೆದಿದ್ದಾನೆ? ಯಾಕೆ ಬರೆದಿದ್ದಾನೆ? ಅವರಿಗೆ ಆತನ ಸಂದೇಶವೇನು? ಈ ಪ್ರಮುಖವಾದ ಪಠ್ಯದಲ್ಲಿ ಮಾತನಾಡುತ್ತಿರುವವರು ಯಾರು? ಇದನ್ನು ಮಾತನಾಡುತ್ತಿರುವುದು ದೇವರಾ? ಇದರ ಲೇಖಕನು ದೇವರೇ ಆಗಿದ್ದಾನಾ? ದೇವರು ಮತ್ತು ಆತನ ಜನರಿಗೆ ಶತ್ರು ಇದ್ದಾನಾ? ಈ ವಾಕ್ಯಭಾಗವು ನನಗೂ ಮತ್ತು ನನ್ನ ಪರಿಸ್ಥಿತಿಗೆ ಹೇಗೆ ಸಮಂಜಸವಾಗಿದೆ? ಇಂತಹ ವಿಧವಾದ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಒಳ್ಳೆಯದು. ಇಂತಹ ವಿಧವಾದ ಪ್ರಶ್ನೆಗಳು ಸತ್ಯವೇದವನ್ನು ಗಂಭೀರವಾಗಿ ಕಲಿಯಲಿಕ್ಕೆ ಬಯಸುವ ವಿದಾರ್ಥಿಗೆ ಬಹಳ ಉಪಯುಕ್ತಕರವಾಗಿರುತ್ತದೆ, ಮತ್ತು ಇಂತಹ ವಿಧವಾದ ಪ್ರಶ್ನೆಗಳು ಸತ್ಯವೇದವನ್ನು ವಿವರವಾಗಿ ಕಲಿಯಲು ನಮ್ಮ ಸತ್ಯವೇದ ಕಾಲೇಜಿನಲ್ಲಿ ಒಂದು ವಾರ ಅಥವಾ ಒಂದು ತಿಂಗಳಿನ ಅಭ್ಯಾಸಕ್ಕೆ ಬರುವವರಿಗೆ ಸಹಾಯಮಾಡುತ್ತದೆ.

ಆದರೆ ನಮ್ಮ ಸತ್ಯವೇದ ಅಭ್ಯಾಸದ ಸರಣಿಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ನಾವು ಮೊದಲ ಪುಸ್ತಕದಿಂದ (ಆದಿಕಾಂಡ) ಕೊನೆಯ ಪುಸ್ತಕದ (ಪ್ರಕಟಣೆ) ವರೆಗೂ ಸತ್ಯವೇದದ ಪಠ್ಯ ಮತ್ತು ಪುಸ್ತಕಗಳ ಮಧ್ಯದಲ್ಲಿ ಅನೇಕ ವ್ಯತ್ಯಾಸಗಳು ಮತ್ತು ಹಂತಗಳು ಕಂಡು ಬಂದಾಗ್ಯೂ ಅಲ್ಲಿ ಅದ್ಭುತವಾದ ಐಕ್ಯತೆ ಮತ್ತು ಸಾಮರಸ್ಯ ಹಾಗೂ ನಿರಂತರತೆಗಳಿರುವುದನ್ನು ಅರ್ಥಮಾಡಿಕೊಳ್ಳುವುದು ಬಹಳ ಅವಶ್ಯವಾಗಿರುತ್ತದೆ. ಪೂರ್ಣ ಸತ್ಯವೇದವು ಒಂದೇ ಶೀರ್ಷಿಕೆಯನ್ನೊಳಗೊಂಡಿರುವುದನ್ನು ನಾವು ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ. ಆ ಶೀರ್ಷಿಕೆಯು ಕರುಣೆ, ಕೃಪೆ, ತಾಳ್ಮೆ, ನಂಬಿಗಸ್ಥಿಕೆ, ನೀತಿವಂತಿಕೆ, ಪ್ರೀತಿ ಮತ್ತು ಸಹಾನುಭೂತಿಯನ್ನೊಳಗೊಂಡ ಜೀವವುಳ್ಳ ದೇವರ ಕುರಿತಾದ ಸಂದೇಶವಾಗಿದೆ. ಈ ಅದ್ಭುತವಾದ ದೇವರು ಸತ್ಯವೇದದ ಪ್ರತಿಯೊಂದು ಪುಟಗಳಲ್ಲಿ ತನ್ನನ್ನೆ ಪ್ರಕಟಿಸಿಕೊಂಡಿದ್ದಾನೆ. ನಾವು ದೇವರ ಮಗನಾದ, ಯೇಸು ಕ್ರಿಸ್ತನ ಮೂಲಕ ಮನುಷ್ಯಕುಲಕ್ಕೆ ರಕ್ಷಣೆಯನ್ನು ತೋರಿದ ದೇವರ ಪ್ರೀತಿ ಮತ್ತು ಕರುಣೆಯನ್ನು ಸತ್ಯವೇದದಲ್ಲಿ ನೋಡಬಹುದಾಗಿದೆ.

ಈ ನಂಬಿಗಸ್ಥಿಕೆಯ ಪ್ರೀತಿ ಮತ್ತು ರಕ್ಷಣೆಯ ಪ್ರಮುಖ ಕಾರಣದಿಂದಲೇ ಪ್ರಪಂಚದ ಇತರೆ ಪುಸ್ತಕಗಳಿಗಿಂತಲೂ ಸತ್ಯವೇದವು ಓದುಗರ ಪ್ರೀತಿಗೆ ಪಾತ್ರವಾಗಿದೆ. ಈ ಪ್ರಮುಖ ಉದ್ದೇಶದಿಂದಲೇ ನಾವು ಸತ್ಯವೇದವನ್ನು ಅಭ್ಯಾಸಿಸಲು ಹೆಚ್ಚಿನ ಸಮಯವನ್ನು ಕಳೆಯಬೇಕಿದೆ.

## ಹಳೇ ಒಡಂಬಡಿಕೆ ಮತ್ತು ಯೆಹೂದ್ಯರ ಗುರುತು

ಪ್ರಾಚೀನ ಪುಸ್ತಕಗಳ ಸಂಗ್ರಹವನ್ನು ಕ್ರೈಸ್ತರಾದ ನಾವು ಹಳೇ ಒಡಂಬಡಿಕೆ ಎಂದು ಕರೆಯುತ್ತೇವೆ. ಯೇಸು ಕ್ರಿಸ್ತನ ದಿನಗಳಲ್ಲಿ ಈ ಪುಸ್ತಕವು ಯೆಹೂದ್ಯರಿಂದ "ಶಾಸ್ತ್ರವಚನ" ಅಥವಾ "ಶಾಸ್ತ್ರವಚನಗಳೆಂದು" ಕರೆಯಲ್ಪಡುತ್ತಿತ್ತು (ಮತ್ತಾಯ 21:42; ಮಾರ್ಕ 14:49; ಲೂಕ 24:45; ಯೋಹಾನ 5:39; 7:42; ಅಪೊಸ್ತಲರ ಕೃತ್ಯಗಳು 17:2,11; 18:24; ಗಲಾತ್ಯ 3:8; 3:22). ಇನ್ನೂ ಅನೇಕ ವೇಳೆಯಲ್ಲಿ "ಧರ್ಮಶಾಸ್ತ್ರ (ಮೋಶೆ)" ಮತ್ತು "ಪ್ರವಾದಿಗಳ ಗ್ರಂಥ" ಅಥವಾ "ಧರ್ಮಶಾಸ್ತ್ರ ಪ್ರವಾದಿಗಳ ಗ್ರಂಥ ಮತ್ತು ಕೀರ್ತನೆಗಳ ಗ್ರಂಥ" ಗಳೆಂದು ಕರೆಯಲ್ಪಡುತ್ತಿತ್ತು (ಮತ್ತಾಯ 5:17; 22:40; ಲೂಕ 16:16; 24:44, ಯೋಹಾನ 1:45; ಅಪೊಸ್ತಲರ ಕೃತ್ಯಗಳು 13:15; 24:14; 28:23; ರೋಮಪುರದವರಿಗೆ 3:21).

ಸಾವಿರಾರು ವರ್ಷಗಳವರೆಗೂ ಯೆಹೂದ್ಯರಿಗೆ ಹಳೇ ಒಡಂಬಡಿಕೆಯ ಪುಸ್ತಕಗಳು ಬಹಳ ಪ್ರಾಮುಖ್ಯವಾದವುಗಳಾಗಿದ್ದವು, ಯೇಸು ಕ್ರಿಸ್ತನ ದಿನಕ್ಕಿಂತ ಕೆಲವು ನೂರು ವರ್ಷಗಳ ಮುಂಚೆಯೇ, ಅವರಲ್ಲಿ ಅನೇಕರು ಹಳೇ ಒಡಂಬಡಿಕೆಯ ಪುಸ್ತಕಗಳ "ಸುರಳಿಗಳನ್ನು" ಸಂಗ್ರಹಿಸಿಟ್ಟುಕೊಂಡಿದ್ದರು. ಇದರ ಆಧಾರದ ಮೇಲೆ ಇಂದು ಪ್ರಪಂಚದಲ್ಲಿರುವ ಯೆಹೂದ್ಯ ಸಮುದಾಯದವರು ತಾವುಗಳು ಸಂಪ್ರದಾಯ ಮತ್ತು ಆಚಾರಬದ್ಧರು ಅಥವಾ ಉದಾರವಾದಿಗಳು ಮತ್ತು ಆಧುನಿಕರುಗಳೆಂದು ಪರಿಗಣಿಸಿಕೊಳ್ಳುತ್ತಾರೆ.

ಯೇಸು ಕ್ರಿಸ್ತನ ದಿನದಲ್ಲಿ ಯೆಹೂದ್ಯರು ತಮ್ಮ "ಯೆಹೂದ್ಯ ಗುರುತನ್ನು" ಸಮರ್ಥಿಸಿಕೊಳ್ಳಲು ಹಳೇ ಒಡಂಬಡಿಕೆಯ ಕೆಲವು ಘಟನಾವಳಿಗಳನ್ನು ಅವರು ಹೇಗೆ ಅರ್ಥೈಸಿಕೊಂಡರೆಂಬುದಕ್ಕೆ ಇಲ್ಲಿ ಕೆಲವು ಮುಖ್ಯ ಘಟನೆಗಳನ್ನು ತಿಳಿಸಲಾಗಿದೆ.

- ಜನರು: ಅವರು ಅಬ್ರಹಾಮನ ಮಕ್ಕಳು, ಇಸ್ರಾಯೇಲ್ ದೇವರಿಂದ ಆರಿಸಲ್ಪಟ್ಟ ದೇಶ
- ಐಗುಪ್ತದಿಂದ ವಿಮೋಚಿಸಲ್ಪಟ್ಟವರಾಗಿ ಮರುಭೂಮಿಯಲ್ಲಿ ಆಶ್ಚರ್ಯವಾಗಿ ಸಂಚರಿಸಿದ್ದು: ಇದು ಅವರ ಚರಿತ್ರೆಯ ಭೂನಾಧಿಯಾಗಿದೆ.
- ಸಿನಾಯ್ ಪರ್ವದಲ್ಲಿನ ಒಡಂಬಡಿಕೆ ಮತ್ತು ಮೋಶೆಯ ಧರ್ಮಶಾಸ್ತ್ರ: ಅವರ ಸೈದ್ಧಾಂತಿಕ, ಕಾನೂನು, ನೈತಿಕತೆ ಮತ್ತು ಸಾಂಸ್ಕೃತಿಕ ಭೂನಾದಿ
- ವಾಗ್ದಾನದ ದೇಶ: ಅವರ ದೇಶ ಮತ್ತು ಅವರ ಮನೆ
- ಯೆರೂಸಲೇಮ್: ಅವರ ರಾಜಧಾನಿ ಪಟ್ಟಣ ಮತ್ತು ಅವರ ಪವಿತ್ರ ಪಟ್ಟಣ
- ಯೆರೂಸಲೇಮ್ ದೇವಾಲಯ: ದೇವರು ಇರುವಂತಹ ಅವರ ಆರಾಧನೆಯ ಕೇಂದ್ರಸ್ಥಳ
- ಅರಸನಾದ ದಾವೀದನ ರಾಜಪ್ರಭುತ್ವ: ಅವರ ಹಿಂದಿನ ಮಹಿಮೆ ಮತ್ತು ಅವರ ಭವಿಷ್ಯದ ನಿರೀಕ್ಷೆ
- ಕ್ರಿ.ಪೂ. 586 ರಲ್ಲಿ ಬಾಬೆಲಿಗೆ ಸೆರೆಯಾಳಾಗುವುದರಿಂದ ದೇಶದ ನಾಶನ (ಯೆರೂಸಲೇಮಿನ ನಾಶನ, ದೇವಾಲಯದ ನಾಶನ, ದಾವೀದನ ಮನೆತನ ಮತ್ತು ರಾಜವಂಶದ ಆಳ್ವಿಕೆಯ ಕೊನೆ): ಅವರ ಹಿಂದಿನ ಮಹಿಮೆಯನ್ನು ಕಳೆದುಕೊಂಡು ಚದುರಿಸಲ್ಪಟ್ಟ ರಾಷ್ಟ್ರ.
- ಬಾಬೆಲಿನಿಂದ ಬಿಡುಗಡೆ ಹೊಂದಿ ಹಿಂತಿರುಗಿ ಬಂದಾಗ ತಮ್ಮ ನಿರೀಕ್ಷೆಗೆ ವಿರುದ್ಧವಾದ ವಾತಾವರಣವಿತ್ತು (ಅವರ ಭೂಮಿ, ಅವರ ಪವಿತ್ರ ಪಟ್ಟಣ, ದೇವಾಲಯ, ದಾವೀದನ ಅರಸು ಮನೆತನ). ಹಾಗಾಗಿ ಅವರು ಬಿಡುಗಡೆಗೊಳಿಸಿ ತನ್ನ ಜನರನ್ನು ಒಟ್ಟುಗೂಡಿಸಿ ತನ್ನ ಹಳೆಯ ಮಹಿಮೆಯಲ್ಲಿ ನಡೆಸುವ "ಒಬ್ಬ ದಾವೀದನ ಕುಮಾರನು", ಮೆಸ್ಸೀಯನನ್ನು ಎದುರು ನೋಡಿದರು.

## ಕ್ರೈಸ್ತರ ಗುರುತು ಮತ್ತು ಸತ್ಯವೇದ

ಸತ್ಯವೇದದ ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತ ವಿಶ್ವಾಸಿಗಳ ಗುರುತು ವಿಸ್ತಾರವುಳ್ಳ ವಿಷಯವಾಗಿದೆ. ಆದರೆ ಯೇಸು ಕ್ರಿಸ್ತನ ಬರೋಣ ಮತ್ತು ಸಭೆಯ ಉಗಮದ ಕುರಿತಾದ ಹಳೇ ಒಡಂಬಡಿಕೆಯ ನಮ್ಮ ಅರ್ಥವು ಯೆಹೂದ್ಯರಿಗಿಂತ ವಿಭಿನ್ನವಾಗಿದೆ. ನಾವು ಹಳೇ ಒಡಂಬಡಿಕೆಯನ್ನು ಹೊಸ ಒಡಂಬಡಿಕೆಯ ಪಠ್ಯದ ಬೆಳಕಿನಲ್ಲಿ ಓದುತ್ತೇವೆ ಮತ್ತು ಅರ್ಥೈಸಿಕೊಳ್ಳುತ್ತೇವೆ. ಯೇಸು ಕ್ರಿಸ್ತನು ಸ್ವತಃ ತಾನೇ ಹೇಳುವಂತೆ, ವಾಕ್ಯಗಳು ತನ್ನ ಕುರಿತಾಗಿ ಮಾತನಾಡುತ್ತವೆ (ಲೂಕ 24:27) ಮತ್ತು ಆ ವಾಕ್ಯಗಳು ತನ್ನ ಶ್ರಮೆ ಮತ್ತು ಮರಣ ಹಾಗೂ ಪುನರುತ್ಥಾನದಿಂದ ನೆರವೇರುತ್ತದೆಂದು ತಿಳಿಸುತ್ತಾನೆ (ಮಾರ್ಕ 14:59). ಈ ಒಂದು ತಿಳುವಳಿಕೆ ಆದಿಸಭೆಯಲ್ಲಿ ಬಹಳ ಪ್ರಾಮುಖ್ಯವಾದ ಬೋಧನೆಯಾಯಿತು (ಅಪೊಸ್ತಲರ ಕೃತ್ಯಗಳು 24:14; 28:23; 1 ಕೊರಿಂಥ 15:3; ಗಲಾತ್ಯ 3:16,22).

ಈ ಕೆಳಗಿನ ಪಟ್ಟಿಯು ಸತ್ಯವೇದದ ಸಂದೇಶವನ್ನು ಬಹಳ ಕ್ರೈಸ್ತ ವಿಶ್ವಾಸಿಗಳು ಹೇಗೆ ಅರ್ಥೈಸಿಕೊಂಡಿದ್ದಾರೆಂಬುದರ ಸಾರಾಂಶವನ್ನು ಒಳಗೊಂಡಿದೆ. ಇದೇ ಸತ್ಯವೇದ ನಾಟಕದ ದೊಡ್ಡ ಚಿತ್ರಣವಾಗಿದೆ, ದೇವರು ಮತ್ತು ಆತನ ಸೃಷ್ಠಿಯ ಕುರಿತಾದ ದೊಡ್ಡ ಚಿತ್ರಣ, ದೇವರ ರಕ್ಷಣೆಯ ಕುರಿತಾದ ದೊಡ್ಡ ಚಿತ್ರಣ ಮತ್ತು ಈ ಚಿತ್ರಣವು ಸತ್ಯವೇದದ ಮುಖ್ಯವಿಷಯದ ಕುರಿತು ಮಾಹಿತಿಯನ್ನು ನೀಡುತ್ತದೆ (ಮೇಲಿನ ಅಂಶವನ್ನು ನೋಡಿರಿ).

- ಪ್ರಾರಂಭ: "ಎಲ್ಲಾ ಒಳ್ಳೆಯದಾಗಿದ್ದ" ಪ್ರಪಂಚವನ್ನು ದೇವರು ಸೃಷ್ಟಿಸಿದನು. ಮನುಷ್ಯನು ಏದೆನ್ ತೋಟದಲ್ಲಿ ದೇವರ ಒಡನಾಡಿನಲ್ಲಿ ಜೀವಿಸಿದನು. ಅಲ್ಲಿ ಪಾಪ ಮತ್ತು ಮರಣವು ಇದ್ದಿಲ್ಲ.
- ಬೀಳುವಿಕೆ: ಮನುಷ್ಯನ ಅವಿಧೇಯತ್ವವು ಪಾಪ ಮತ್ತು ಮರಣವನ್ನು ಭೂಮಿಗೆ ತಂದಿತು. ದೇವರೊಂದಿಗೆ ಇದ್ದ ಮನುಷ್ಯನ ಅನ್ಯೂನ್ಯತೆಯು ಮುರಿಯಲ್ಪಟ್ಟಿತ್ತು. ನಂದನವನವಾಗಿದ್ದ ಏದೆನ್ ನಾಶವಾಯಿತು. ಇಡೀ ಸೃಷ್ಟಿಯು ಮಲೀನವಾಯಿತು, ಮರಣಯಾತನೆಯಲ್ಲಿ ಬೀಳಲ್ಪಟ್ಟರು, ಇದರಿಂದ ಬಿಡುಗಡೆ ಹೊಂದಲೂ ತವಕದಿಂದ ಕಾಯುತ್ತಿದ್ದರು (ರೋಮ 8:19-22).
- ಯೋಜನೆ: ದೇವರು ತನ್ನ ನಂಬಿಗಸ್ಥಿಕೆಯಿಂದಲೂ ಮತ್ತು ತನ್ನ ತಪ್ಪದ ಪ್ರೀತಿಯಿಂದಲೂ ತನ್ನ ಸೃಷ್ಟಿಯೊಂದಿಗೆ ರಕ್ಷಣೆಯ ವಾಗ್ದಾನವನ್ನು ಮಾಡಿಕೊಂಡನು. ಆತನು ತನ್ನೊಂದಿಗೆ ಮುರಿಯಲ್ಪಟ್ಟಿದ್ದ ಮನುಷ್ಯನ ಸಂಬಂಧವನ್ನು ಪುನಃ ಸ್ಥಾಪಿಸಿ ಅವನೊಂದಿಗೆ ನಿತ್ಯವು ಸಹಭಾಗಿತ್ವದಿಂದ ಇರುವುದಕ್ಕಾಗಿ ಪಾಪ ಮತ್ತು ಮರಣದೊಂದಿಗೆ ವ್ಯವಹರಿಸುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸಿದನು. ಆದರೆ ಮನುಷ್ಯನನ್ನು ಪುನಃ ಸ್ಥಾಪಿಸಿ ಅವನೊಂದಿಗೆ ನಿತ್ಯವು ಸಹಭಾಗಿತ್ವದಿಂದ ಇರುವುದಕ್ಕಾಗಿ ಪಾಪ ಮತ್ತು ಮರಣದೊಂದಿಗೆ ವ್ಯವಹರಿಸುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸಿದನು. ಆದರೆ ಮನುಷ್ಯನು ದೇವರ ಯೋಜನೆಗೆ ತಕ್ಕಂತೆ ಜೀವಿಸುವವನೆಂಬ ವಿಶ್ವಾಸಾರ್ಹತೆ ಇಲ್ಲದವನೆಂಬುದನ್ನು ದೇವರು ತಿಳಿದಿದ್ದನು. ಹಾಗಾಗಿ ಆತನು ಮೂರ್ಖತನವಿಲ್ಲದ ಯೋಜನೆಯನ್ನು ರೂಪಿಸಿದನು. ಈ ಯೋಜನೆಯಲ್ಲಿ ತಾನೇ ಮನುಷ್ಯನಾಗಿ ನಮ್ಮ ರಕ್ಷಣೆಗಾಗಿ ತಾನೇ ಬಲಿಯಾಗುವುದರ ಮೂಲಕ ತನ್ನ ಯೋಜನೆಯು ಯಶಸ್ವಿಯಾಗುವುದಕ್ಕೆ ಖಾತರಿಪಡಿಸಿದ್ದಾನೆ.

- ಹಳೇ ಒಡಂಬಡಿಕೆಯು ದೇವರ ಮೊದಲ ಯೋಜನೆಯನ್ನು ವಿವರಿಸುತ್ತದೆ: ವಾಗ್ದಾನದ ದೇಶದಲ್ಲಿ ಆರಿಸಲ್ಪಟ್ಟ ಜನರ ವಿಫಲತೆ, ದೇವರ ಹೃದಯಕ್ಕೆ ಹತ್ತಿರವಾಗಿದ್ದ ರಾಜರುಗಳು ಇಲ್ಲದೆ ರಾಜ್ಯಗಳು ವಿಫಲವಾಗಿದ್ದು. ಒಡಂಬಡಿಕೆಯು ಮುರಿಯಲ್ಪಟ್ಟಿತ್ತು ಮತ್ತು ಧರ್ಮಶಾಸ್ತ್ರವು ಧಿಕ್ಕರಿಸಲ್ಪಟ್ಟಿತು.
- ಹೊಸ ಒಡಂಬಡಿಕೆಯು ದೇವರ ಯೋಜನೆಯ ನಿರಂತರತೆಯನ್ನು ವಿವರಿಸುತ್ತದೆ: ದೇವರು ಪಾಪದಲ್ಲಿ ಬೀಳಲ್ಪಟ್ಟ ಮನುಷ್ಯನ ಸಮಸ್ಯೆಗೆ ಪರಿಹಾರವನ್ನುಂಟುಮಾಡಿದ್ದು. ಆತನು ಯೇಸು ಕ್ರಿಸ್ತನ ರೂಪದಲ್ಲಿ ಮನುಷ್ಯನಾಗಿದ್ದು (ಯೋಹಾನ 1:1-3,14), ಕಲ್ವಾರಿ ಶಿಲುಬೆಯಲ್ಲಿ ಮರಣವನ್ನು ಹೊಂದುವುದರಲ್ಲಿ ವಿಧೇಯನಾಗಿದ್ದು (ಫಿಲಿಪ್ಪ 2:6-7). ಪಾಪದೊಂದಿಗೆ ಮನುಷ್ಯನಿಗಿದ್ದ ಸಮಸ್ಯೆಯು ಪರಿಹರಿಸಲ್ಪಟ್ಟಿತು. ಮರಣವನ್ನು ಜಯಿಸಲಾಯಿತು. ಹೊಸ ಒಡಂಬಡಿಕೆಯು ಸ್ಥಾಪಿಸಲ್ಪಟ್ಟಿತು (ಲೂಕ 22:20; 1 ಕೊರಿಂಥ 11:25; ಇಬ್ರಿಯ 8:8, 9:15, 12:24), ಒಡಂಬಡಿಕೆಯು ಲಿಖಿತ ರೂಪದ್ದಾಗಿರದೆ ದೇವರಾತ್ಮ ಸಂಬಂಧವಾಗಿತ್ತು (2 ಕೊರಿ. 3:6). ಯೇಸು ಕ್ರಿಸ್ತನ ಸೇವೆಯಿಂದಲೂ (ಮತ್ತಾಯ 12:28, 21:31; ಮಾರ್ಕ 1:15) ಮತ್ತು ಆತ್ಮಭರಿತವಾದ ಸಭೆಯಿಂದಲೂ (ಅಪೊ.ಕೃತ್ಯ. 2:1-4,11; 8:12; 19:8) ದೇವರ ರಾಜ್ಯವು ದೃಶ್ಯಮಯವಾಗಿತ್ತು. ದೇವರ ರಾಜ್ಯದ ಶುಭಸಂದೇಶವನ್ನು ಸಾರುವ ಮಹಾಆಜ್ಞೆಯನ್ನು ಹೊಂದಿದ್ದ ಜನರು (ಮತ್ತಾಯ 28:18-20; ಮಾರ್ಕ 16:15).
- ಯೇಸು ಕ್ರಿಸ್ತನ ಎರಡನೇಯ ಬರೋಣ (ಅಪೋ.ಕೃತ್ಯ 1:11; ಮಾರ್ಕ 13:26; ಕೊಲೊಸ್ಸೆ 3:4; ತೀತನು 2:13; 1 ಪೇತ್ರ 5:4; 1 ಯೋಹಾನ 3:2) ದುಷ್ಟನಿಗೆ ನ್ಯಾಯತೀರ್ಪು (ರೋಮ 2:5; ಇಬ್ರಿಯ 10:27; 2 ಪೇತ್ರ 2:9) ಮತ್ತು ದೇವರ ಬಲದಿಂದ ದೇವರ ರಾಜ್ಯವನ್ನು ಸ್ಥಾಪಿಸುವುದು (ದಾನಿಯೇಲ 7:14; ಮಾರ್ಕ 9:1).
- ನೆರವೇರುವಿಕೆ: ಹೊಸ ಆಕಾಶ ಮತ್ತು ಹೊಸ ಭೂಮಿ (ಪ್ರಕಟಣೆ 21:1), ನೀತಿವಂತನ ಮನೆ (2 ಪೇತ್ರ 3:13), ಅಲ್ಲಿ ಯಾವುದೇ ಪಾಪವಾಗಲಿ ದುಷ್ಟತನವಾಗಲಿ ಇರದು (ಪ್ರಕಟಣೆ 2:14-15). ಹೊಸ ಪರಲೋಕ (ಪ್ರಕಟಣೆ 22:1-5). ನಿತ್ಯಜೀವ (ಮಾರ್ಕ 10:30; ಯೋಹಾನ 3:16; 6:40; 10:28; ತೀತನು 1:2; 3:7; 1 ಯೋಹಾನ 2:25; ಯೂದ 21). ಸಂಪೂರ್ಣವಾಗಿ ದೇವರಿಂದ ಬಿಡುಗಡೆ ಹೊಂದಿದ ಸಂಬಂಧ, ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುವುದು (ಪ್ರಕಟಣೆ 21:3).

# ವಿಷಯಾನುಕ್ರಮಣಿಕೆ

ಮುನ್ನುಡಿ

ಪೀಠಿಕೆ

ನಾಟಕದ ಅಂಕಗಳು

ನಕ್ಷೆ:

ನಕ್ಷೆ:

ನಕ್ಷೆ:

ನಕ್ಷೆ:

ನಾಟಕದ ಕಲಾವಿದರು

ನಾಟಕದ ಅಂಕ I (ಹಳೇ ಒಡಂಬಡಿಕೆ)

ಅಂಕ I. ದೃಶ್ಯ 1:

ಅಂಕ I. ದೃಶ್ಯ 2:

ಅಂಕ I. ದೃಶ್ಯ 3:

ಅಂಕ I. ದೃಶ್ಯ 4:

ಅಂಕ I. ದೃಶ್ಯ 5:

ಅಂಕ I. ದೃಶ್ಯ 6:

ಅಂಕ I. ದೃಶ್ಯ 7:

ಅಂಕ I. ದೃಶ್ಯ 8:

ಅಂಕ I. ದೃಶ್ಯ 9:

ಅಂಕ I. ದೃಶ್ಯ 10:

ನಾಟಕದ ಅಂಕ II (ಹೊಸ ಒಡಂಬಡಿಕೆ)

ಅಂಕ II. ದೃಶ್ಯ 1:

ಅಂಕ II. ದೃಶ್ಯ 2:

ಅಂಕ II. ದೃಶ್ಯ 3:

ಅಂಕ II. ದೃಶ್ಯ 4:

ದೊಡ್ಡ ಚಿತ್ರಣ

ಸತ್ಯವೇದದ ವಿಷಯಗಳು

ಹಳೇ ಒಡಂಬಡಿಕೆ ಮತ್ತು ಯೆಹೂದ್ಯರ ಗುರುತು

ಕ್ರೈಸ್ತರ ಗುರುತು ಮತ್ತು ಸತ್ಯವೇದ